ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ–13 | ISSUE - 157 ಸಂಚಿಕೆ– 157 | PAGE-8 ಪುಟ–8 | ಶುಕ್ರವಾರ 01.08.2025 | RS.2/- ಬೆಲೆ 2/–

ಸ್ಕ್ಯಾನ್ ಮಾಡುವ ಮೂಲಕ ಅಜೀವ ಸದಸ್ಯರಾಗಲು ಕೋರಿಕೆ




## ಸಾಲಬಾಧೆಯಿಂದ ರೈತ ಆತ್ಮಹತ್ಯೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜು.31: ಸಾಲಭಾದೆ ತಾಳಲಾರದೆರೈತನೊಬ್ಬನುಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಮಾಡಿಕೊಂಡಿರುವ ಘಟನೆ ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಅರಿಕೇರಿ ಗ್ರಾಮದಲ್ಲಿ ಮಂಗಳವಾರ ತಡರಾತ್ರಿಸಂಭವಿಸಿದೆ. ತಾಲೂಕಿನ ಅರಕೆರೆ ಗ್ರಾಮದ

(2ನೇ ಪುಟ ನೋಡಿ)

## ಮಹಾ ಚುನಾವಣೆಯಲ್ಲಿ ಇವಿಎಂ ತಿರುಚುವಿಕೆ ನಡೆದಿಲ್ಲ: ಚುನಾವಣಾ ಆಯೋಗ




ಮಲ್ಲಮ್ಮ ನುಡಿ ವಾರ್ತೆ


ನವದೆಹಲಿ:ಜು.31: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಇವಿಎಂ ತಿರುಚಲಾಗಿದೆ ಎಂಬ ಆರೋಪ ಸುಳ್ಳು, ಇವಿಎಂ ತಿರುಚಿಲ್ಲ ಎಂಬುದು ಪರಿಶೀಲನೆಯಿಂದ ಮತ್ತೊಮ್ಮೆ ಸಾಬೀತಾಗಿದೆ ಎಂದು ಚುನಾವಣಾ ಆಯೋಗ ಪುನರುಚ್ಚರಿಸಿದೆ.10 ಅಭ್ಯರ್ಥಿಗಳ ಅರ್ಜಿಗಳ ಆಧಾರದ ಮೇಲೆ 10 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ ಪರಿಶೀಲನೆ (ಸಿ & ವಿ) ಪ್ರಕ್ರಿಯೆ ನಡೆಸಲಾಯಿತು. ಇವಿಎಂ ಫಲಿತಾಂಶಗಳು ಮತ್ತು ವಿವಿಪ್ಯಾಟ್ ಸ್ಲಿಪ್‌ಗಳ ನಡುವೆ ಮತ ಎಣಿಕೆಯಲ್ಲಿ ಯಾವುದೇ ಮಿಸ್‌ಮ್ಯಾಚ್ ಆಗಿಲ್ಲ ಎಂದು ಆಯೋಗ ದೃಢಪಡಿಸಿತು. ಎಲ್ಲಾ ಸಂದರ್ಭಗಳಲ್ಲಿ ಯಂತ್ರಗಳು, ಬ್ಯಾಲೆಟ್ ಯೂನಿಟ್‌ಗಳು, ನಿಯಂತ್ರಣ ಘಟಕಗಳು ಮತ್ತು ವಿವಿಪ್ಯಾಟ್‌ಗಳು ಪರಿಶೀಲನೆಯಲ್ಲಿ ಪಾಸ್ ಆಗಿವೆ ಎಂದು ಆಯೋಗ ತಿಳಿಸಿದೆ. ಜೂ.17 ರಂದು ಹೊರಡಿಸಲಾದ ಸೂಚನೆಗಳಡಿ ಮತ್ತು ಮಹಾರಾಷ್ಟ್ರದ ಮುಖ್ಯ ಚುನಾವಣಾ ಅಧಿಕಾರಿ ನಡೆಸಿದ ಸೂಚನೆಗಳ ಅಡಿಯಲ್ಲಿ ಈ ಪ್ರಕ್ರಿಯೆಯನ್ನು ನಡೆಸಲಾಯಿತು. 2024 ರ ರಾಜ್ಯ ಚುನಾವಣೆಯಲ್ಲಿ ಸೋತಿದ್ದ ಹತ್ತು ಅರ್ಜಿದಾರರಲ್ಲಿ ಎಂಟು ಮಂದಿ ಪರಿಶೀಲನೆಗೆ ಹಾಜರಿದ್ದರು. 48 ಬ್ಯಾಲೆಟ್ ಯೂನಿಟ್‌ಗಳು, 31 ಕಂಟ್ರೋಲ್ ಯೂನಿಟ್‌ಗಳು ಮತ್ತು 31 ವಿವಿಪ್ಯಾಟ್‌ಗಳಲ್ಲಿ ಪರಿಶೀಲನೆ ನಡೆಸಲಾಯಿತು. ತಯಾರಕ ಇಐಸಿಐಎಲ್ (ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್) ನ ಅಧಿಕೃತ ಎಂಜಿನಿಯರ್‌ಗಳು ಪರಿಶೀಲನೆ ನಡೆಸಿದರು. 147–ಕೊಪ್ರಿ–ಪಚ್ಪಖಾಡಿ, 148–ಥಾಣೆ, 211–ಖಡಕ್ವಾಸ್ಲಾ ಮತ್ತು 229–ಮಜಲಗಾಂವ್ ನಂತಹ ಕ್ಷೇತ್ರಗಳಲ್ಲಿ, ಅಭ್ಯರ್ಥಿಗಳ ಕೋರಿಕೆಯ ಆಧಾರದ ಮೇಲೆ ತಲಾ ಮೂರು ಸೆಟ್ ಇವಿಎಂಗಳಲ್ಲಿ (EVM) ಪರಿಶೀಲನೆ ನಡೆಸಲಾಯಿತು. ಎಲ್ಲಾ ಯಂತ್ರಗಳು ಪಾಸ್ ಆಗಿದ್ದು, ಇಸಿಐಎಲ್ ಎಂಜಿನಿಯರ್‌ಗಳಿಂದ ಪ್ರಮಾಣೀಕರಿಸಲ್ಪಟ್ಟಿವೆ.

## 3 ಲಕ್ಷ ಚಿನ್ನಾಭರಣದ ಬ್ಯಾಗ್ ಮರಳಿಸಿ ಪ್ರಾಮಾಣಿಕತೆ ಮೆರೆದ ಆಟೋ ಚಾಲಕ



ಮಲ್ಲಮ್ಮ ನುಡಿ ವಾರ್ತೆ ಬೀದರ. ಜು. 31 : 3 ಲಕ್ಷ ಮೌಲ್ಯದ ಚಿನ್ನಾಭರಣವಿದ್ದ ಬ್ಯಾಗ್ ಮರೆತು ಬಿಟ್ಟು ಹೋಗಿದ್ದ ಪ್ರಯಾಣಿಕನಿಗೆ ವಾಪಸ್ ಮರಳಿಸಿ ಆಟೋ ಚಾಲಕ ಪ್ರಾಮಾಣಿಕತೆ ಮೆರೆದಿದ್ದಾನೆ. ನಗರದ ಆಟೋ ಚಾಲಕ ನವೀನ್ ಬಸಪ್ಪ ಅವರು ಬಸವಕಲ್ಯಾಣದ ಜಾಲಿಂದರ್ ಅವರಿಗೆ ಚಿನ್ನಾಭರಣವಿದ್ದ ಬ್ಯಾಗ್ ಮರಳಿಸಿದ್ದಾರೆ. ಜಾಲಿಂದರ್ ಅವರು ಮಂಗಳವಾರ ಬೆಳಿಗ್ಗೆ ಬೆಂಗಳೂರಿನಿಂದ ಬೀದರ್‌ಗೆ ರೈಲಿನಲ್ಲಿ ಬಂದಿದ್ದಾರೆ. ರೈಲು ನಿಲ್ದಾಣದಿಂದ ಆಟೋದಲ್ಲಿ ಬಸ್ ನಿಲ್ದಾಣಕ್ಕೆ ತೆರಳಿದ್ದಾರೆ. ಅವಸರದಲ್ಲಿ ಆಟೋದಲ್ಲಿ ಇಟ್ಟಿದ್ದ ಬ್ಯಾಗ್ ಮರೆತು ಬಸ್ಸಿನಲ್ಲಿ ಬಸವಕಲ್ಯಾಣಕ್ಕೆ ಪ್ರಯಾಣ ಬೆಳೆಸಿದ್ದಾರೆ. ಬ್ಯಾಗ್ ಗಮನಿಸಿದ ಆಟೋಚಾಲಕ ನವೀನ್ ಬಸಪ್ಪ ಅವರು ಗಸ್ತಿನಲ್ಲಿದ್ದ ಸಂಚಾರ ಠಾಣೆ ಎಎಸ್‌ಐ ಶಿವರಾಜ ಧನ್ನೂರ್ ಅವರಿಗೆ ವಿಷಯ ತಿಳಿಸಿದ್ದಾರೆ. ಬಳಿಕ ಜಾಲಿಂದರ್ ಅವರನ್ನು ಸಂಪರ್ಕಿಸಿ ಬ್ಯಾಂಕ್ ಮರಳಿಸಲಾಗಿದೆ. ಆಟೋ ಚಾಲಕನ ಪ್ರಾಮಾಣಿಕತೆಯನ್ನು ಎಸ್ಪಿ ಪ್ರದೀಪ್ ಗುಂಟಿ ಶ್ಲಾಘಿಸಿದ್ದಾರೆ.

## ಭಾರತದ ಬಗ್ಗೆ ಟ್ರಂಪ್ ಆಧಾರರಹಿತ ಆರೋಪ:ಪ್ರಧಾನಿ ಮಾತನಾಡಲಿ:ಖರ್ಗೆ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಜು.31: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ–ಪಾಕಿಸ್ತಾನ ನಡುವಿನ ಕದನ ವಿರಾಮ ಹೇಳಿಕೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ 'ಮೌನ ವ್ರತ' ಆಚರಿಸಿದ್ದಾರೆ. ಇದೀಗ ಭಾರತದ ವಿರುದ್ಧ ಅಮೆರಿಕದ ನಾಯಕ ಮಾಡಿದ ಆಧಾರರಹಿತ ಆರೋಪಗಳ ಬಗ್ಗೆಯೂ ಅವರು ಮೌನವಾಗಿರುತ್ತಾರೆಯೇ ಎಂದು ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಗುರುವಾರ ಪ್ರಶ್ನಿಸಿದ್ದಾರೆ.

ನಮಗೆ ರಾಷ್ಟ್ರವೇ ಮೊದಲು ಮತ್ತು ನಾವು ಯಾವಾಗಲೂ ರಾಷ್ಟ್ರದೊಂದಿಗೆ ಇರುತ್ತೇವೆ ಎಂದು ಖರ್ಗೆ ಪ್ರತಿಪಾದಿಸಿದರು.


ಭಾರತ ಮತ್ತು ರಷ್ಯಾ ನಡುವಿನ ನಿಕಟ ಸಂಬಂಧಕ್ಕಾಗಿ ಟ್ರಂಪ್ ಮತ್ತೊಮ್ಮೆ ಕಟುವಾದ ವಾಗ್ದಾಳಿ ನಡೆಸಿದ್ದು, ಭಾರತದ ಉತ್ಪನ್ನಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಿದ ಬಳಿಕ ಹೇಳಿಕೆ ನೀಡಿದ್ದಾರೆ.

ರಷ್ಯಾ ಮತ್ತು ಭಾರತದ ವಿರುದ್ಧ ಕಿಡಿಕಾರಿರುವ ಡೊನಾಲ್ಡ್ ಟ್ರಂಪ್, 'ಭಾರತವು ರಷ್ಯಾದೊಂದಿಗೆ ಏನು ಮಾಡುತ್ತದೆ ಎಂಬುದರ ಬಗ್ಗೆ ನನಗೆ ಚಿಂತೆಯಿಲ್ಲ. ಭಾರತ ಮತ್ತು ರಷ್ಯಾ ಈಗಾಗಲೇ 'ಸತ್ತಿರುವ' ತಮ್ಮ ಆರ್ಥಿಕತೆಯನ್ನು ಇನ್ನಷ್ಟು ನೆಲಕಚ್ಚುವಂತೆ ಮಾಡಿಕೊಳ್ಳುತ್ತವೆ. ಭಾರತದೊಂದಿಗೆ ನಾವು ಅತ್ಯಂತ ಕಡಿಮೆ ವ್ಯಾಪಾರವನ್ನು ಮಾಡಿದ್ದೇವೆ. ಅಮೆರಿಕದ ಉತ್ಪನ್ನಗಳಿಗೆ ಇತರ ರಾಷ್ಟ್ರಗಳು ವಿಧಿಸುವ ತೆರಿಗೆಗಿಂತ ಭಾರತ ವಿಧಿಸುವ ಸುಂಕ ಅತಿ ಹೆಚ್ಚಾಗಿದೆ' ಎಂದು ಹೇಳಿದ್ದಾರೆ.

ಎಕ್ಸ್ ನಲ್ಲಿ ಪೋಸ್ಟ್ ಮಾಡಿದ ಖರ್ಗೆ, 'ಕದನ ವಿರಾಮದ ಕುರಿತು ಡೊನಾಲ್ಡ್ ಟ್ರಂಪ್ ಅವರ ಘೋಷಣೆಗಳ ಕುರಿತು ಮೋದಿ ಅವರು ಸಂಸತ್ತಿನಲ್ಲಿ 'ಮೌನ ವ್ರತ' ಆಚರಿಸಿದ್ದರು. ಭಾರತದ ಬಗ್ಗೆ ಟ್ರಂಪ್ ಮಾಡಿದ ಆಧಾರರಹಿತ ಆರೋಪಗಳ ಬಗ್ಗೆಯೂ ಮೋದಿ ಅವರು ಮೌನವಾಗಿರುತ್ತಾರೆಯೇ? ನರೇಂದ್ರ ಮೋದಿ ಜಿ, ನಮಗೆ ರಾಷ್ಟ್ರ ಮೊದಲು ಮತ್ತು ನಾವು ಯಾವಾಗಲೂ ರಾಷ್ಟ್ರದೊಂದಿಗೆ

(2ನೇ ಪುಟ ನೋಡಿ)

## ಹಾಡು ಹಗಲೇ ಮನೆ ಕಳ್ಳತನ ಮಾಡುತ್ತಿದ್ದ ಇಬ್ಬರ ಬಂಧನ 16.50 ಲಕ್ಷ ರೂ.ಮೌಲ್ಯದ 165 ಗ್ರಾಂ.ಚಿನ್ನಾಭರಣ ಜಪ್ತಿ







ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜು.31;ನಗರದ ಎಸ್.ಎಂ.ಕೃಷ್ಣಾ ಕಾಲೋನಿಯಲ್ಲಿ ಈಚೆಗೆ ಹಾಡು ಹಗಲೇ ನಡೆದ ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿ 16.50 ಲಕ್ಷ ರೂ.ಮೊತ್ತದ 165 ಗ್ರಾಂ.ಬಂಗಾರ ವಶಪಡಿಸಿಕೊಳ್ಳಲಾಗಿದ್ದು, ಅವುಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು. ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ತಾಪುರ ತಾಲ್ಲೂಕಿನ ಕೋರವಾರ ಗ್ರಾಮದ ಇಮ್ರಾನ್ ತಂದೆ ಇಮಾಮಸಾಬ್ ದಗ್ದಾಲ್, ಎಸ್.ಎಂ.ಕೃಷ್ಣಾ ಕಾಲೋನಿಯ ಶೇಖ್ ಅಲ್ತಾಫ್ ಅಲಿಯಾಸ್ ಅಲ್ತಾಸ್ ತಂದೆ ಅಮೀನಸಾಬ ಉಪ್ಪಾರ್ ಎಂಬುವವರನ್ನು ಬಂಧಿಸಿ 4,05,00 ರೂ.ಮೌಲ್ಯದ 45 ಗ್ರಾಂ.ಬಂಗಾರದ ಬುದ್ಧನ ಮೂರ್ತಿವುಳ್ಳ ಸರ,

(2ನೇ ಪುಟ ನೋಡಿ)

## 6520 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ: ಪ್ರಹ್ಲಾದ್ ಜೋಶಿ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಜು.31: ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ 15ನೇ ಹಣಕಾಸು ಆಯೋಗದಡಿ ಒಟ್ಟು 6,520 ಕೋಟಿ ರೂ. ವೆಚ್ಚಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 15ನೇ ಹಣಕಾಸು ಆಯೋಗದಡಿ (2021–22 ರಿಂದ 2025–26) ನಡೆಯುತ್ತಿರುವ ಕೇಂದ್ರ ವಲಯದ ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆಗಾಗಿ ಹೆಚ್ಚುವರಿ 1920 ಕೋಟಿ ಸೇರಿದಂತೆ ಒಟ್ಟು 6,520 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡಲಾಯಿತೆಂದು ತಿಳಿಸಿದ್ದಾರೆ. ಆಹಾರ ಘಟಕಗಳಿಗೆ 1000 ಕೋಟಿ: ಕಿಸಾನ್ ಸಂಪದ ಯೋಜನೆ ಮೂಲಕ ಆಹಾರ ಸುರಕ್ಷತೆ, ಗುಣಮಟ್ಟ ಮತ್ತು ಮೂಲಸೌಕರ್ಯ ಕಲ್ಪಿಸಲು ಕೇಂದ್ರ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದೆ. ಆಹಾರ ಮೌಲ್ಯವರ್ಧನ ಮೂಲಸೌಕರ್ಯ (ICCVAI) ಮತ್ತು 100 ಆಹಾರ ಪರೀಕ್ಷಾ ಪ್ರಯೋಗಾಲಯಗಳು ಹಾಗೂ 50 ಬಹು ಉತ್ಪನ್ನ ಆಹಾರ ವಿಕಿರಣ ಘಟಕಗಳನ್ನು ಸ್ಥಾಪಿಸಲು 1000 ಕೋಟಿ ವೆಚ್ಚಕ್ಕೆ ಕೇಂದ್ರ ಅನುಮೋದನೆ ನೀಡಿದೆ. ICCVAI ಮತ್ತು FSQAI ಇವೆರಡೂ PMKSY ಯ ಬೇಡಿಕೆ ಆಧಾರಿತ ಘಟಕ ಯೋಜನೆಗಳಾಗಿವೆ. ಹಾಗಾಗಿ 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಂಪದ ಮೂಲಕ ವಿವಿಧ ಯೋಜನೆ ಮಂಜೂರಾತಿಗೆ 920 ಕೋಟಿ ಒದಗಿಸಿದೆ. ಪ್ರಸ್ತಾವಿತ 50 ಬಹು ಉತ್ಪನ್ನ ಆಹಾರ ವಿಕಿರಣ ಘಟಕಗಳನ್ನು ಅನುಷ್ಠಾನಗೊಳಿಸಲಾಗುವುದು. ಇದರಿಂದ ವರ್ಷಕ್ಕೆ 20 ರಿಂದ 30 ಲಕ್ಷ ಮೆಟ್ರಿಕ್ ಟನ್ ಆಹಾರ ಸಂರಕ್ಷಣಾ ಸಾಮರ್ಥ್ಯದ ನಿರೀಕ್ಷೆಯಿದೆ ಎಂದಿದ್ದಾರೆ. ಖಾಸಗಿ ವಲಯದಡಿ ಪ್ರಸ್ತಾವಿತ 100 ಆಹಾರ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಯಿಂದ ಆಹಾರ ಮಾದರಿ ಪರೀಕ್ಷೆ ಸುಲಲಿತವಾಗಲಿದೆ. ಅಲ್ಲದೇ, ಸುಧಾರಿತ ಮೂಲಸೌಕರ್ಯಗಳ ಅಭಿವೃದ್ಧಿಗೆ ಕಾರಣವಾಗುತ್ತದೆ. ಇದರಿಂದಾಗಿ ಆಹಾರ ಸುರಕ್ಷತೆ ಹಾಗೂ ಸುರಕ್ಷಿತ ಆಹಾರಗಳ ಪೂರೈಕೆಗೆ ಹೆಚ್ಚು ಹೆಚ್ಚು ನೆರವಾಗಲಿದೆ ಎಂದು ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

## ಬಿಜೆಪಿ ಶಾಸಕ ಪ್ರಭು ಚೌಹಾಣ್ ಪುತ್ರನ ನಿರೀಕ್ಷಣಾ ಜಾಮೀನು ಅರ್ಜಿ ವಜಾ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಜು.31: ಅತ್ಯಾಚಾರ ಆರೋಪ ಹೊತ್ತಿರುವ ಬಿಜೆಪಿ ಶಾಸಕ ಪ್ರಭು ಚೌಹಾಣ್ ಪುತ್ರ ಪ್ರತೀಕ್ ಚೌಹಾಣ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ ವಜಾಗೊಳಿಸಿದೆ. ಚೌಹಾಣ್ ಪುತ್ರನ ಪರ ವಕೀಲ ಎಂ.ಎಂ.ಗೋಡ್ಬಲೆಯವರು ನಿರೀಕ್ಷಣಾ ಜಾಮೀನಿಗಾಗಿ ಮಂಗಳವಾರ (ಜು.29) ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಾದ–ಪ್ರತಿವಾದಗಳನ್ನು ಆಲಿಸಿದ್ದ ಕೋರ್ಟ್ ಗುರುವಾರಕ್ಕೆ (ಜು.31) ತೀರ್ಪನ್ನು ಕಾಯ್ದಿರಿಸಿತ್ತು. ಬಳಿಕ ಜಾಮೀನು ನೀಡದಂತೆ ಕೋರ್ಟ್‌ಗೆ ಸಂತ್ರಸ್ತೆ ಪರ ವಕೀಲರು ತಕರಾರು ಅರ್ಜಿ ಸಲ್ಲಿಸಿದ್ದರು. ಇದೀಗ ಕೋರ್ಟ್ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ. ಜಾಮೀನು ಅರ್ಜಿಯನ್ನು ವಜಾಗೊಳಿಸಿದ ಬೆನ್ನಲ್ಲೇ ಬಿಜೆಪಿ ಶಾಸಕ ಚೌಹಾಣ್ ಪುತ್ರನಿಗೆ ಬಂಧನ ಭೀತಿ ಹೆಚ್ಚಾಗಿದೆ. ಈಗಾಗಲೇ ಬೀದರ್‌ನ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬಿಜೆಪಿ ಶಾಸಕರ ಪುತ್ರನ ವಿರುದ್ಧ ಯುವತಿಯೊಬ್ಬಳು ಅತ್ಯಾಚಾರ ಕೇಸ್ ದಾಖಲಿಸಿದ್ದರು. ಮದುವೆಯಾಗುವುದಾಗಿ ನಂಬಿಸಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಗಂಭೀರ ಆರೋಪ ಮಾಡಿದ್ದರು.

## ಮಹಿಳಾ ಸುರಕ್ಷತೆ ಪ್ರತಿ ಕಚೇರಿಯ ಮೊದಲ ಆದ್ಯತೆಯಾಗಲಿ: ನಾಗಲಕ್ಷ್ಮಿ ಚೌಧರಿ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜು 31: ಮಹಿಳೆಯರನ್ನು ಆರ್ಥಿಕ, ಸಾಮಾಜಿಕವಾಗಿ, ರಾಜಕೀಯವಾಗಿ ಸಧೃಡರನ್ನಾಗಿ ಮಾಡಲು ಸರ್ಕಾರ ಬಹಳಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಸಮಾಜದಲ್ಲಿ ಬಡವರಿಗೆ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಇಂತಹ ಯೋಜನೆಗಳನ್ನು ತಲುಪಿಸಲು ಪ್ರತಿಯೊಬ್ಬ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಹಾಗೂ ಮಹಿಳೆಯರ ಸುರಕ್ಷತೆ ಪ್ರತಿ ಕಚೇರಿಯ ಮೊದಲ ಆಧ್ಯತೆ ಆಗಬೇಕೆಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧ್ಯಕ್ಷರಾದ ಶ್ರೀಮತಿ ನಾಗಲಕ್ಷ್ಮಿ ಚೌಧರಿ ಹೇಳಿದರು.

ಗುರುವಾರದಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವತಿಯಿಂದ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೌಟುಂಬಿಕ ನ್ಯಾಯಾಲಯ ಕಲಬುರಗಿಯಲ್ಲಿ 16 ಜೀವನಾಂಶ ಪ್ರಕರಣಗಳು, 10 ವಿಚ್ಛೆದನೆ

(2ನೇ ಪುಟ ನೋಡಿ)

## ಮಾಲೆಗಾಂವ್ ಸ್ಫೋಟ ಪ್ರಕರಣ:7 ಆರೋಪಿಗಳು ಖುಲಾಸೆ



ಮಲ್ಲಮ್ಮ ನುಡಿ ವಾರ್ತೆ ಮುಂಬೈ: ಜು.31:2008ರ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಬಿಜೆಪಿಯ ಮಾಜಿ ಸಂಸದೆ ಪ್ರಜ್ಞಾ ಠಾಕೂರ್ ಸೇರಿ ಎಲ್ಲಾ 7 ಆರೋಪಿಗಳಿಗೂ ಬಿಗ್ ರಿಲೀಫ್ ಸಿಕ್ಕಿದೆ. ಪ್ರಕರಣದ ತನಿಖೆಯೇ ಸರಿಯಾಗಿ ನಡೆದಿಲ್ಲ ಎಂದು ಎನ್‌ಐಎ ವಿಶೇಷ ಕೋರ್ಟ್ ತೀರ್ಪು ಪ್ರಕಟಿಸಿದ್ದು, ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಏಪ್ರಿಲ್ 19ರಂದು ಪ್ರಕರಣದ ವಿಚಾರಣೆ ಮುಗಿಸಿದ್ದ ಕೋರ್ಟ್, ಮೇ 8ರಂದು ಕೋರ್ಟ್‌ನಲ್ಲಿ ಹಾಜರಿರುವಂತೆ ಆರೋಪಿಗಳಿಗೆ ಸೂಚಿಸಿತ್ತು. ನ್ಯಾಯಾಧೀಶರಾದ ಎ.ಕೆ.ಲಾಹೋಟಿ ಅವರು, ತೀರ್ಪು ಪ್ರಕಟಿಸಲು ಹೆಚ್ಚಿನ ಸಮಯ ಬೇಕು. ಜುಲೈ 31ರಂದು ಎಲ್ಲಾ ಆರೋಪಿಗಳು ಹಾಜರಿರಬೇಕು' ಎಂದು ಆರೋಪಿಗಳಿಗೆ ತಿಳಿಸಿದ್ದರು.

2008ರ ಸೆ.29ರಂದು ರಂಜಾನ್ ಮಾಸದಲ್ಲಿ ನವರಾತ್ರಿ ಆಚರಣೆಗೆ ಮುಂಚಿನ ದಿನ ಬಾಂಬ್ ಸ್ಫೋಟ ನಡೆದಿತ್ತು. ಈ ಸ್ಫೋಟದಲ್ಲಿ 6 ಜನರು ಮೃತಪಟ್ಟು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಈ ಪ್ರಕರಣವನ್ನು ಮುಂಬೈ ಭಯೋತ್ಪಾದಕ ನಿಗ್ರಹ ಪಡೆ ಪ್ರಾಥಮಿಕ ತನಿಖೆ ನಡೆಸಿತ್ತು. ನಂತರ ತನಿಖೆಯ ಹೊಣೆಯನ್ನು ಎನ್‌ಐಎ ವಹಿಸಿಕೊಂಡಿತ್ತು. ಬಿಜೆಪಿ ಮಾಜಿ ಸಂಸದೆ ಪ್ರಜ್ಞಾಸಿಂಗ್ ಠಾಕೂರ್, ಮಾಜಿ ಸೇನಾಧಿಕಾರಿ ಪ್ರಸಾದ್ ಪುರೋಹಿತ್ (ನಿವೃತ್ತ), ಮೇಜರ್ ರಮೇಶ್ ಉಪಾಧ್ಯಾಯ (ನಿವೃತ್ತ) ಸೇರಿದಂತೆ ಏಳು ಮಂದಿ ಆರೋಪಿಗಳ ಮೇಲೆ ಐಪಿಸಿ, ಯುಎಪಿಎ ಅನ್ವಯ ಆರೋಪ ಹೊರಿಸಲಾಗಿತ್ತು.

ಒಂದನೇ ಪುಟದಿಂದ

# ರೈತ ಆತ್ಮಹತ್ಯೆ

ನಿವಾಸಿಯಾದ ದೇವಪ್ಪ ದುರ್ಗಪ್ಪ ನೀರಳ್ಳಿ (48) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಯಾಗಿದ್ದು. ಮೃತ ದುರ್ಗಪ್ಪನಿಗೆ ರಾವಣಕಿ ಸೀಮಾದಲ್ಲಿ 7 ಎಕರೆ 32 ಗುಂಟೆ ಜಮೀನು ಇದ್ದು ಕಳೆದ ವರ್ಷ ಶಿರೂರು ಗ್ರಾಮದ ಕೆನರಾ ಬ್ಯಾಂಕ್‌ನಲ್ಲಿ 2.50 ಲಕ ರೂಪಾಯಿ ಸಾಲ ಪಡೆದುಕೊಂಡಿದ್ದರು ನಂತರ ಬ್ಯಾಂಕಿನ ಕಂತುಗಳನ್ನು ತೀರಿಸುವ ಉದ್ದೇಶದಿಂದ ಹಲವು ಗುಂಪುಗಳು ಹಾಗೂ ಸ್ನೇಹಿತರಿಂದ ಸಹ ಸಾಲವನ್ನು ಪಡೆದಿದ್ದು ವಿಪರೀತ ಸಾಲವನ್ನು ಮಾಡಿಕೊಂಡಿರುವುದಾಗಿ ಕುಟುಂಬಸ್ಥರು ತಿಳಿಸಿರುತ್ತಾರೆ.

ಕಳೆದ ವರ್ಷ ತಮ್ಮ ಜಮೀನಿನಲ್ಲಿ ಬೆಳೆದ ಮೆಕ್ಕೆಜೋಳ ಕೈಕೊಟ್ಟ ಹಿನ್ನೆಲೆಯಲ್ಲಿ ಬ್ಯಾಂಕ್ ಸಾಲ ಸೇರಿದಂತೆ ವಿವಿಧ ಫೈನಾನ್ಸ್ ಸಾಲ ಮರುಪಾವತಿ ಮಾಡಲು ಸಾಧ್ಯವಾಗದೆ ನೊಂದು, ತಮ್ಮ ಹೊಲದಲ್ಲಿಯೇ ಮಂಗಳವಾರ ತಡರಾತ್ರಿ ಕ್ರಿಮಿನಾಶಕ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಕುಕನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಆದ್ಯತೆಯಾಗಲಿ: ನಾಗಲಕ್ಷ್ಮಿ ಚೌಧರಿ

ಪ್ರಕರಣಗಳು, 10 ಕೌಟುಂಬಿಕ ದೌರ್ಜನ್ಯ ಸೇರಿದಂತೆ 6 ಇತರೆ ದಾಖಲಾದ ಪ್ರಕರಣಗಳು ಸೇರಿ ಒಟ್ಟು 42 ಪ್ರಕರಣಗಳು ದಾಖಲಾಗಿವೆ ಎಂದು ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು. 2025–26ನೇ ಕೌಟುಂಬಿಕ ದೌರ್ಜನ್ಯದಡಿ 80 ಸ್ವೀಕೃತವಾದ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 18 ಪ್ರಕರಣಗಳು ಇತ್ಯಾರ್ಥಗೊಂಡಿದ್ದು, 62 ಪ್ರಕರಣಗಳು ಬಾಕಿ ಇರುತ್ತದೆ ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಕಾರ್ಯ ವೈಖರಿ ಮತ್ತು ಅನ್ಯಾಯಕ್ಕೆ ಒಳಗಾದ ಹೆಣ್ಣು ಮಕ್ಕಳು ಪೊಲೀಸ್ ಠಾಣೆಗೆ ದೂರು ನೀಡಲು ಬಂದಾಗ ಅಮಾನವೀಯವಾಗಿ ನಡೆಸಿಕೊಳ್ಳುತ್ತಿರುವ ಕುರಿತು ದೂರುಗಳು ದಾಖಲಾದ ಹಿನ್ನಲೆಯಲ್ಲಿ ಇಂದು ನಗರದ ಮಹಿಳಾ ಪೋಲಿಸ್ ಠಾಣೆಗೆ ದಿಢೀರನ ಬೇಟಿ ನೀಡಿದ ಸಂದರ್ಭದಲ್ಲಿ 17 ಜನ ಸಿಬ್ಬಂಧಿಗಳಲ್ಲಿ ಒಬ್ಬರು ಮಾತ್ರ ಕರ್ತವ್ಯಕ್ಕೆ ಹಾಜರಾಗಿದ್ದರು. ಉಳಿದವರೆಲ್ಲರ ಗೈರು ಹಾಜರಾಗಿದ್ದರು. ಡ್ಯೂಟಿ ಡಿಪ್ಲಾಯಮೆಂಟ್ ಕಾಪಿ ನೀಡಬೇಕೆಂದು ಸೂಚಿಸಲಾಗಿದೆ ಎಂದು ಹೇಳಿದರು.

ಮಹಿಳೆಯರ ಸುರಕ್ಷತೆಗೆ ಪ್ರತಿ ತಾಲ್ಲೂಕಿನ ಕಾವಲು ಸಮಿತಿ ಪಟ್ಟಿಯನ್ನು ನೀಡಬೇಕು ಮತ್ತು ಪೊಲೀಸ್ ಇಲಾಖೆಯಿಂದ ಆದ ತೆರೆದ ಮನೆ ಕಾರ್ಯಕ್ರಮ ಮಾಡಿದ ಜಿಪಿಎಸ್ ಪೋಟೋ ಸಹಿತ ಮಾಹಿತಿ ನೀಡಬೇಕೆಂದು ತಿಳಿಸಿದರು.

ಗ್ರಾಮ ಪಂಚಾಯತಿಗಳಲ್ಲಿ ನಡೆಯುವ ಗ್ರಾಮ ಸಭೆಗಳಲ್ಲಿ ಸರ್ಕಾರದ ಯೋಜನೆಗಳ ಕುರಿತು ಅರಿವು ಮೂಡಿಸಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಜನ ಸಮಾನ್ಯರಿಗೆ ತಲುಪಬೇಕು. ವಿಶೇಷವಾಗಿ ವಿಧವೆಯರು, ಅಲೆ ಮಾರಿ ಸಮುದಾಯದವರು ಸರ್ಕಾರ ಸೌಲಭ್ಯಗಳನ್ನು ಪಡೆಯಲು ಅವರಿಗೆ ಮೂಲಭೂತ ಅಗತ್ಯ ದಾಖಲೆಗಳಾದ ಆಧಾರ ಕಾರ್ಡ ಮತ್ತು ಗುರುತಿನ ಚೀಟಿಯಂತ ತಾಂತ್ರಿಕ ಸಮಸ್ಯೆಗಳಿಂದಾಗಿ ಸರ್ಕಾರ ಸೌಲಭ್ಯಗಳನ್ನು ಪಡೆಯಲು ವಂಚಿತರಾಗುತ್ತಿದ್ದಾರೆ. ಸಂಬಂಧಿಸಿದ ಇಲಾಖೆಗಳು ಕ್ರಮವಹಿಸಿ ಅವರಿಗೆ ಬೇಕಾದ ದಾಖಲೆಗಳನ್ನು ಸುಲಭವಾಗಿ ಪಡೆಯಲು ಅನುಕೂಲ ಮಾಡಿಕೊಡಬೇಕೆಂದು ಹೇಳಿದರು.

ಸರ್ಕಾರದ ಸೌಲಭ್ಯಗಳನ್ನು ಅಧಿಕಾರಿಗಳು ಜನರಿಗೆ ತಲುಪಿಸಲು ಪ್ರಾಮಾಣಿಕ ಕಾರ್ಯನಿರ್ವಹಿಸಬೇಕೆಂದು ಹೇಳಿದರು. ಎಲ್ಲ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಆಯೋಗ ಪೊಲೀಸ್ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಸಹಾಯವಾಣಿ ಸಂಖ್ಯೆ ಕುರಿತು ಬೋರ್ಡ್‌ಗಳನ್ನು ಅಳವಡಿಸಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಪೊಲೀಸ್ ಇಲಾಖೆಯವರು ಕ್ರಮ ವಹಿಸಬೇಕೆಂದು ಹೇಳಿದರು. ಇದೇ ಸಂದರ್ಭದಲ್ಲಿ ಸುಮಾರು ಹದಿನೆಂಟು ಮಹಿಳೆಯರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಡಿಸಿಪಿ ಕನಿಕಾ ಸಿಕ್ರಿವಾಲ್,ಅಪಾರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ,ಜಿಲ್ಲಾ ಪಂ. ಮುಖ್ಯ ಯೋಜನಾ ಅಧಿಕಾರಿ ಮಠಪತಿ. ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಎಸಿಪಿ ಚಂದ್ರಶೇಖರ್, ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವಾಜೀದ್ ಪಟೇಲ್, ತಾಲೂಕಿನ ಎಲ್ಲಾ ಸಿ.ಡಿ.ಪಿ.ಒಗಳು ಮತ್ತು ಪಿ.ಡಿ.ಓ. ಗಳು ಉಪಸ್ಥಿತರಿದ್ದರು.

## 16.50 ಲಕ್ಷ ರೂ.ಮೌಲ್ಯದ 165 ಗ್ರಾಂ.ಚಿನ್ನಾಭರಣ ಜಪ್ತಿ

2.70 ಲಕ್ಷ ರೂ.ಮೌಲ್ಯದ 30 ಗ್ರಾಂ.ಬಂಗಾರದ ಸಿಂಗಲ ಸರ ತಾಳಿ ಚೈನ್, 90 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಬೋರಮಳ ಸರ, 1.80 ಲಕ್ಷ ರೂ.ಮೌಲ್ಯದ 20 ಗ್ರಾಂ.ಬಂಗಾರದ 4 ಜೊತೆ ಕಿವಿಯೋಲೆಗಳು,1.80 ಲಕ್ಷ ರೂ.ಮೌಲ್ಯದ 20 ಗ್ರಾಂ.ಬಂಗಾರದ ನೆಕ್ಲೆಸ್, 2.70 ಲಕ್ಷ ರೂ.ಮೌಲ್ಯದ 30 ಗ್ರಾಂ.ಬಂಗಾರದ ಬಳೆಗಳು, 90 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಬ್ರಾಸಲೈಟ್ ಸೇರಿದಂತೆ 16.50 ಲಕ್ಷ ರೂ.ಮೌಲ್ಯದ 165 ಗ್ರಾಂ.ಬಂಗಾರದ ವಿವಿಧ ನಮೂನೆಯ ಆಭರಣ, 50 ಸಾವಿರ ರೂ.ಮೌಲ್ಯದ ಬೈಕ್ ಜಪ್ತಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ನಗರದ ಕೃಷ್ಣಾ ಕಾಲೋನಿಯ ಸಿದ್ದಮ್ಮ ವಿಠಲ ಬಿಲವಾಡ ಎಂಬುವವರ ಮನೆ ಬೀಗ ಮುರಿದು ಕಳ್ಳರು 14.85 ಲಕ್ಷ ರೂ.ಮೌಲ್ಯದ 165 ಗ್ರಾಂ.ಚಿನ್ನಾಭರಣ ದೋಚಿಕೊಂಡು ಹೋಗಿದ್ದರು. ಈ ಸಂಬಂಧ ಅವರು ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್ ಅವರ ಮಾರ್ಗದರ್ಶನದಲ್ಲಿ ಸಬ್–ಅರ್ಬನ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಡಿ.ಜಿ.ರಾಜಣ್ಣ ಅವರ ನೇತೃತ್ವದಲ್ಲಿ ಸಬ್–ಅರ್ಬನ್ ಪೊಲೀಸ್ ಠಾಣೆ ಪಿಐ ಸಂತೋಷ ಎಲ್.ತಟ್ಟೆಪಳ್ಳಿ, ಪಿಎಸ್ಐ ಬಸವರಾಜ, ಸಿಬ್ಬಂದಿಗಳಾದ ಮಂಜುನಾಥ, ಫಿರೋಜ್, ಮಲ್ಲಿಕಾರ್ಜುನ, ಭೀಮಾ ನಾಯಕ, ಅನೀಲ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಆರೋಪಿಗಳಾದ ಇಮ್ರಾನ್ ಮತ್ತು ಶೇಖ್ ಅಲ್ತಾಫ್ ಅವರನ್ನು ಬಂಧಿಸಿ ಚಿನ್ನಾಭರಣ ವಶ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು.

ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್, ಸಬ್–ಅರ್ಬನ್ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಡಿ.ಜಿ.ರಾಜಣ್ಣ, ಪಿಐ ಸಂತೋಷ ಎಲ್.ತಟ್ಟೆಪಳ್ಳಿ, ಪಿಎಸ್ಐ ಬಸವರಾಜ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಆರೋಪ:ಪ್ರಧಾನಿ ಮಾತನಾಡಲಿ:ಖರ್ಗೆ

ಇರುತ್ತೇವೆ' ಎಂದು ಹೇಳಿದ್ದಾರೆ.'ಟ್ರಂಪ್ ಭಾರತದ ಮೇಲೆ ಶೇ 25 ರಷ್ಟು ಸುಂಕ ಮತ್ತು ದಂಡ ವಿಧಿಸಿದ್ದಾರೆ. ಇದು ದೇಶದ ವ್ಯಾಪಾರದ ಮೇಲೆ ಹಾನಿ ಮಾಡುತ್ತದೆ; ಎಂಎಸ್‌ಎಂಇಗಳು ಮತ್ತು ರೈತರು ಸಹ ಪ್ರತಿಕೂಲ ಪರಿಣಾಮ ಎದುರಿಸುತ್ತಾರೆ. ಅನೇಕ ಕೈಗಾರಿಕೆಗಳು ಭಾರಿ ನಷ್ಟವನ್ನು ಅನುಭವಿಸುತ್ತವೆ. ನಿಮ್ಮ ಮಂತ್ರಿಗಳು ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದದ ಬಗ್ಗೆ ತಿಂಗಳುಗಳಿಂದ ಮಾತನಾಡುತ್ತಿದ್ದಾರೆ. ಅವರಲ್ಲಿ ಕೆಲವರು ಹಲವಾರು ದಿನಗಳ ಕಾಲ ವಾಷಿಂಗ್ಟನ್‌ನಲ್ಲಿ ಬೀಡುಬಿಟ್ಟಿದ್ದರು' ಎಂದು ಅವರು ಹೇಳಿದರು.

'ನಿಮ್ಮ ಸ್ನೇಹಿತ 'ನಮಸ್ತೆ ಟ್ರಂಪ್' ಮತ್ತು 'ಅಬ್ ಕಿ ಬಾರ್ ಟ್ರಂಪ್ ಸರ್ಕಾರ್' ನಮ್ಮ ದೇಶಕ್ಕೆ ನಿಮ್ಮ ಸ್ನೇಹಕ್ಕಾಗಿ ಹೇಗೆ ಪ್ರತಿಫಲ ನೀಡಿದೆ ಎಂಬುದಾಗಿದೆ. ಭಾರತವು ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದು, ಭಾರತವು ರಷ್ಯಾದಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವುದು, ಭಾರತದ ಬ್ರಿಕ್ಸ್ ಸದಸ್ಯತ್ವ ಮತ್ತು ಬ್ರಿಕ್ಸ್‌ನ ಯುಎಸ್ ಡಾಲರ್ ಮೇಲಿನ ದಾಳಿ ಎಂಬ ಕಾರಣಗಳನ್ನು ಅಮೆರಿಕ ಅಧ್ಯಕ್ಷರು ಸುಂಕಕ್ಕೆ ನೀಡಿದ್ದಾರೆ' ಎಂದರು.

'ಇದು ಭಾರತದ 'ಸ್ವಾಯತ್ತ ಕಾರ್ಯತಂತ್ರ' ಎಂಬ ರಾಷ್ಟ್ರೀಯ ನೀತಿಗೆ ತೀವ್ರ ಹೊಡೆತ. ನಮ್ಮ ವಿದೇಶಾಂಗ ನೀತಿಯ ಅಡಿಪಾಯ ಅಲಿಪ್ತತೆಯಾಗಿದೆ ಎಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಎಲ್ಲ ಸರ್ಕಾರಗಳು ಪಕ್ಷಗಳನ್ನು ಲೆಕ್ಕಿಸದೆ ಭಾರತದ ಹಿತಾಸಕ್ತಿಗಾಗಿ ಜಗತ್ತಿನಾದ್ಯಂತ ವಿವಿಧ ದೇಶಗಳೊಂದಿಗೆ ಸ್ನೇಹವನ್ನು ಬಲಪಡಿಸಿವೆ' ಎಂದು ಅವರು ಹೇಳಿದರು.

## ಇಂದು ವ್ಯಸನ ಮುಕ್ತ ದಿನಾಚರಣೆ

ಬೀದರ,ಜು.31:ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಬೀದರ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಜಯಮಹಾಂತ ಎಜ್ಯುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ) ಬೀದರ ಹಾಗೂ ಬಈದರ ಜಿಲ್ಲೆಯ ವಿವಿಧ ಸಂಘಸಂಸ್ಥೆಗಳು ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್.1 ರಂದು ಬೆಳಿಗ್ಗೆ 10 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರ ಬೀದರದಲ್ಲಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ. ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ, ಔರಾದ (ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ಧಲಿಂಗಪ್ಪಾ ಎನ್.ಪಾಟೀಲ, ಹಾಗೂ ವಿಧಾನ ಪರಿಷತ್ತ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ, ಡಾ.ಎಂ.ಜಿ.ಮೂಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ಬಿ.ನಾರಾಯಣರಾವ, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅವರುಗಳು ಭಾಗವಹಿಸಲಿದ್ದಾರೆ.

# ಮಕ್ಕಳ ಕಾಣೆ ಪ್ರಕರಣಗಳನ್ನು ಅಪಹರಣವೆಂದು ದಾಖಲಿಸಿ ತನಿಖೆ ಕೈಗೊಳ್ಳಿ: ಎಸ್ಪಿ ಡಾ. ರಾಮ್ ಅರಸಿದ್ಧಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜು.31:ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮಕ್ಕಳ ಕಾಣೆ ಪ್ರಕರಣಗಳನ್ನು "ಮಕ್ಕಳ ಅಪಹರಣ"ವೆಂದು ದಾಖಲಿಸಿ ತನಿಖೆಯನ್ನು ಕೈಗೊಳ್ಳಬೇಕು ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ರಾಮ್ ಎಲ್.ಅರಸಿದ್ಧಿ ಹೇಳಿದರು. ಅವರು ಬುಧವಾರ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ "ಅಪಹರಣಕ್ಕೊಳಗಾದ ಮತ್ತು ಕಾಣೆಯಾದ ಮಕ್ಕಳ ಪತ್ತೆಗಾಗಿ ನೂತನವಾಗಿ ರಚನೆಯಾದ ವಿಶೇಷ ಕಾರ್ಯಪಡೆಯ" ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಕ್ಕಳ ಕಾಣೆ ಪ್ರಕರಣಗಳನ್ನು ಸರಕಾರವು ಗಂಭೀರವಾಗಿ ಪರಿಗಣಿಸಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಹ ಮಕ್ಕಳ ಕಾಣೆ ಪ್ರಕರಣಗಳನ್ನು "ಮಕ್ಕಳ ಅಪಹರಣ"ವೆಂದು ದಾಖಲಿಸಿ ತನಿಖೆಯನ್ನು ಕೈಗೊಳ್ಳುವಂತೆ ನಿರ್ದೇಶಿಸಿದ್ದು, ಅದರನ್ವಯ ಜಿಲ್ಲಾ ಪೊಲೀಸ್ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಕೊಪ್ಪಳ



ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣಗಳನ್ನು ವಿಶ್ಲೇಷಿಸಲಾಗಿದ್ದು, ಅದರಲ್ಲಿ ಬಹುತೇಕವುಗಳು ಪ್ರೇಮ ಪ್ರಕರಣಗಳಾಗಿವೆ ಎಂದರು. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ತಿದ್ದುಪಡಿ–2019ರನ್ವಯ 18 ವರ್ಷದೊಳಗಿನ ಎಲ್ಲರೂ ಮಕ್ಕಳು ಆಗಿದ್ದಾರೆ. ಮಕ್ಕಳ ಸಮ್ಮತಿಯೊಂದಿಗೆ ಪ್ರೀತಿ, ಪ್ರೇಮದ ಹೆಸರಿನಲ್ಲಿಯೂ ಅಪ್ರಾಪ್ತವಯಸ್ಸಿನ ಮಗುವನ್ನು ಪುಸಲಾಯಿಸಿ ಕರೆದುಕೊಂಡು ಹೋದಲ್ಲಿ ಮತ್ತು ಹಾಗೆ ಮಗುವನ್ನು ಕರೆದುಕೊಂಡ ಹೋದವರ ವಿರುದ್ಧ ಅಪಹರಣ ಪ್ರಕರಣ ದಾಖಲಾಗಿ ಮುಂದೆ ಅದರ ವಿಚಾರಣೆ ನಡೆದು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012ರಲ್ಲಿ ಪ್ರಕರಣವಾಗಿ ದಾಖಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆ–ಕಾಲೇಜು ಮತ್ತು ಸಮುದಾಯದಲ್ಲಿ ಹೆಚ್ಚು ಜಾಗೃತಿಯನ್ನು ಮೂಡಿಸಬೇಕು. ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತೆರೆದ ಮನೆ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ಮಾತನಾಡಿ, ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ 'ಮಹಿಳೆ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಾಗಿ ಸಮಿತಿಗಳು ರಚನೆಯಾಗಿರುತ್ತವೆ'. ಈ ಸಮಿತಿಗಳು ಮತ್ತಷ್ಟು ಸಕ್ರೀಯವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ. ಬೀಟ್ ಹಂತದ ಪೊಲೀಸ್ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್ ಮಟ್ಟದ ಮಕ್ಕಳ ರಕ್ಷಣೆಯ ಕಾವಲು ಸಮಿತಿ ಸಭೆಗಳಲ್ಲಿ ಭಾಗವಹಿಸಿ, ಶಾಲಾ ಮತ್ತು ಕಾಲೇಜುಗಳ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಪರವಾದ ಕಾನೂನುಗಳ ಕುರಿತು ಜಾಗೃತಿಯನ್ನು ಮೂಡಿಸಬೇಕು ಎಂದು ಪೊಲೀಸ್ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ದರಗದ ಅವರು ಮಾತನಾಡಿ, ಮಕ್ಕಳಿಗೆ ಮಕ್ಕಳ ಪರವಾದ ಕಾನೂನುಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಮೂಲಕ ಅವರನ್ನು ಪ್ರಜ್ಞಾವಂತರಾಗಿಸುವ ಮೂಲಕ ಮಕ್ಕಳ ಮೇಲಾಗುವ ವಿವಿಧ ರೀತಿಯ ಅಪರಾಧಗಳನ್ನು ತಡೆಗಟ್ಟಬಹುದಾಗಿದೆ. ಹಾಗಾಗಿ ಈ ಬಗ್ಗೆ ಸಮುದಾಯದಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಅಗತ್ಯ ಸಹಕಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನೀಡಲಾಗುವುದು ಎಂದರು. ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಅವರು, ಸಭೆಯಲ್ಲಿ ಎಲ್ಲರಿಗೂ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹೇಮಂತಕುಮಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪರಶುರಾಮ್ ಶೆಟ್ಟೆಪ್ಪನವರ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ ಕಡಗದ್, ಸದಸ್ಯೆ ದಿವ್ಯಾ ಜೋಗಿ, ಬಾಲ ನ್ಯಾಯ ಮಂಡಳಿಯ ಸದಸ್ಯರಾದ ರವಿ ಗುಡ್ಡದಮೇಗಳ, ನೇತ್ರಾ ಪಾಟೀಲ್, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿ ಆಶಾ, ಜೈ ಕುಮಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಡಿ.ಪಿ.ಓ ಬಸವರಾಜ ಸೇರಿದಂತೆ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಮತ್ತು ಕಾಣೆಯಾದ ಮಕ್ಕಳ ಪಾಲಕರು ಉಪಸ್ಥಿತರಿದ್ದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ(ಅಸಾಂಸ್ಥಿಕ) ಪ್ರಶಾಂತ ರೆಡ್ಡಿ ಅವರು ಕೊನೆಯಲ್ಲಿ ವಂದಿಸಿದರು.

# ಗುಂಡಿ ಬಿದ್ದಿರುವ ಕಾದೇಪುರ ಘಾಟಬೊರಳ ರಸ್ತೆಯಲ್ಲಿ ಸಂಚಾರ ದುಸ್ತರ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜು. 31 : ಹುಲಸೂರ್ ತಾಲ್ಲೂಕಿನ ಕಾದೇಪುರ ಗ್ರಾಮದಿಂದ ಘಾಟಬೊರಳ ತಾಂಡಾ–ಕ್ಕೆ ಸಂಪರ್ಕ ಕಲ್ಪಿಸುವ ಸುಮಾರು 2 ಕಿ.ಮೀ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ವಾಹನಗಳು ಸಂಚರಿಸಲು ತೊಂದರೆಯಾಗುತ್ತಿದೆ. ಶಾಲಾ ಮಕ್ಕಳು, ಸಾರ್ವಜನಿಕರು ನಿತ್ಯ ಸಂಚರಿಸಲು ಪರದಾಡುತ್ತಿದ್ದಾರೆ.

ಈ ರಸ್ತೆಯ ಮೂಲಕ ಪ್ರತಿದಿನ ನೂರಾರು ವಾಹನಗಳು, ಸಾವಿರಾರು ಜನರು ಓಡಾಡುತ್ತಾರೆ.

ದ್ವಿಚಕ್ರ ವಾಹನ ಸವಾರರು ಹೊಂಡ, ಗುಂಡಿಗಳನ್ನು ತಪ್ಪಿಸಿಕೊಂಡು ಮುಂದೆ ಹೋಗಲು ಹರಸಾಹಸ ಪಡಬೇಕಿದೆ. ಸುಮಾರು ಐದಾರು ಕಿ.ಮೀ. ಇರುವ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ಮಳೆ ನೀರು ನಿಂತಿದೆ. ಇಂತಹ



ಪರಿಸ್ಥಿತಿಯಲ್ಲಿಯೇ ಜನ ಮತ್ತು ವಾಹನಗಳು ಅನಿವಾರ್ಯವಾಗಿ ಸಂಚರಿಸುವಂತಾಗಿದೆ. ಜನಸಾಮಾನ್ಯರು ಓಡಾಡುವ ಸಂದರ್ಭ, ಪಕ್ಕದಲ್ಲಿ ವಾಹನಗಳು ಹಾಯ್ದು ಹೋದರೆ ಕೆಸರು ನೀರು ಮೈಮೇಲೆ ಸಿಡಿಯುತ್ತದೆ. ಹಲವು ವರ್ಷಗಳಿಂದ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ರಸ್ತೆ ಹದಗೆಟ್ಟ ಹಿನ್ನೆಲೆ ಮಕ್ಕಳು ಪ್ರತಿ ನಿತ್ಯ ಶಾಲೆಗೆ ತಡವಾಗಿ ಹೋಗಬೇಕಾಗಿದೆ.

ರಸ್ತೆ ಬದಿಯಲ್ಲಿ ಯಥೇಚ್ಛವಾಗಿ ಗಿಡಮರಗಳು ಬೆಳೆದು ನಿಂತಿವೆ. ಅರಣ್ಯ ಪ್ರದೇಶವಾಗಿರುವುದರಿಂದ ಕಾಡುಪ್ರಾಣಿಗಳ ಕಾಟವೂ ಇದೆ. ರಸ್ತೆ ಅತ್ಯಂತ ಕಿರಿದಾಗಿದ್ದು, ಎದುರಿನಿಂದ–ವಾಹನ ಬಂದರೆ ಮತ್ತೊಂದು ವಾಹನ ಸಾಗಲು ತೊಂದರೆಯಾಗಲಿದೆ. ಓವರ್ ಲೋಡ್ ಹೊತ್ತ ವಾಹನಗಳ ಸಂಚಾರದಿಂದ ರಸ್ತೆಗಳಲ್ಲಿ ತಗ್ಗು ಗುಂಡಿಗಳು ಬಿದ್ದಿವೆ.

'ರಸ್ತೆ ದುರಸ್ತಿ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಈಗಾಗಲೇ ಹಲವು ಸಲ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ರಸ್ತೆಯು ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಸೇರಿದ್ದು, ದುರಸ್ತಿ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಅನುದಾನ ಬಂದಿಲ್ಲ ಎಂದು ಹೇಳುತ್ತಾರೆ.

ಕಾದೇಪುರ ಗ್ರಾಮದ ಹತ್ತಿರ ರಸ್ತೆಯಲ್ಲಂತೂ ಬೃಹತ್ ಗುಂಡಿಗಳು ಬಿದ್ದಿವೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕೂಡಲೇ ರಸ್ತೆಯನ್ನು ದುರಸ್ತಿಗೊಳಿಸಿ ಜನರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅಂಕುಶ ಕಾಂಬಳೆ ಕಾದೇಪುರ ಗ್ರಾಮಸ್ಥ ಚುನಾವಣೆ ಸಂದರ್ಭದಲ್ಲಿ ಮಾತ್ರ ಊರಿಗೆ ಬರುವ ಜನಪ್ರತಿನಿಧಿಗಳು ನಂತರ ಈ ಕಡೆ ತಲೆ ಹಾಕುವುದೇ ಇಲ್ಲ. ರಸ್ತೆ ಪೂರ್ಣ ಹಾಳಾಗಿದ್ದರೂ ದುರಸ್ತಿ ಮಾಡಿಸುವವರಿಲ್ಲ – ಶಿವರಾಜ ಪಲ್ಲರಿ, ಪ್ರಭಾರ ಎಇಇ, ಗ್ರಾಮೀಣಾಭಿವೃದ್ಧಿ ಇಲಾಖೆ ಮುಂಬರುವ ದಿನಗಳಲ್ಲಿ ರಸ್ತೆ ನಿರ್ಮಾಣಕ್ಕೆ ಅನುದಾನ ಮೀಸಲಿಟ್ಟು ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು

# ಹೊಳೆಸಮುದ್ರ ಜೆ.ಜೆ.ಎಮ್ ಕಾಮಗಾರಿ ಪರಿಶೀಲನೆ, ಮನೆ ಮನೆಗೆ ಗಂಗೆ ತಲುಪಿಸಿ:ಡಾ. ಗಿರೀಶ್ ಬದೋಲೆ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಜು.31:ತಾಲೂಕಿನ ಹೊಳಸಮುದ್ರ ಗ್ರಾಮಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ್ ಬದೋಲೆ ಅವರು ಇತೀಚಿಗೆ ಭೇಟಿ ನೀಡಿ ಜಲ ಜೀವನ ಮಿಷನ್ ಕಾಮಗಾರಿ ಪರಿಶೀಲಿಸಿದರು ಮನೆ ಮನೆಗೆ ಗಂಗೆ ತಲುಪಿಸಿ ಎಂದು ತಿಳಿಸಿದರು. ಈ ವೇಳೆ ಡಾ.ಗಿರೀಶ್ ಬದೋಲೆ ಮಾತನಾಡಿ, ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸಬೇಕು ನಲ್ಲಿ ನೀರು ಸೋರಿಕೆ ಯಾಗದ ರೀತಿಯಲ್ಲಿ ಹಾಗೂ ಗ್ರಾಮಸ್ಥರಿಗೆ ನೀರಿನ ಸಮಸ್ಯೆ ಯಾಗದಂತೆ ನೋಡಿಕೋಳ್ಳಿ ಎಂದು ಹೇಳಿದರು. ಅಲ್ಲಲ್ಲಿ



ರಸ್ತೆ ಹದಗಟ್ಟಿದ್ದು ಚರಂಡಿ ವ್ಯವಸ್ಥೆಯ ಅವ್ಯವಸ್ಥೆ ಕಂಡು ಅಸಮಾಧಾನ ವ್ಯಕ್ತಪಡಿಸುವ ಮೂಲಕ ಅಧಿಕಾರಿಗಳಿಗೆ ಪ್ರಶ್ನಿಸಿದ್ದರು. ಅಲ್ಲದೆ ಮುಂದಿನ ದಿನಗಳಲ್ಲಿ ಎಲ್ಲಾ ಕೆಲಸಗಳು ಆಗಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮಸ್ಥರ ಸಮ್ಮುಖದಲ್ಲಿ ಗ್ರಾಮಸ್ಥರು ಬೇಡಿಕೆ ಇಡುವುದರಿಂದ ಇಲ್ಲಿ ಜಲೋತ್ಸವ ಮನೆ ಮನೆಗೆ ಗಂಗೆ ಎಂಬ ಕಾಮಗಾರಿಯು ನಲ್ಲಿ ಗಳಿಗೆ ನೀರು ಪೂರ್ಕೈಕೆ ಆಗದ ಕಾರಣಕ್ಕೆ ಜಲ ಜೀವನ ಮಿಷನ್ ಕಾಮಗಾರಿ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಮಲನಗರ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾವ ಕೌಟಗೆ, ಶಿವಕುಮಾರ್ ಇಂಜಿನಿಯರ್ , ಗ್ರಾಮ ಪಂಚಾಯತ್ ಅಧಿಕಾರಿಗಳು ಹಾಗೂ ಸದಸ್ಯರು ಮಾಜಿ ಅಧ್ಯಕ್ಷರಾದ ಭರತ ಕದಮ್ ಗ್ರಾಮಸ್ಥರು ಇದ್ದರು.

# ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಿ–ಅಮೃತರಾವ ಚಿಮಕೋಡೆ




ಮಲ್ಲಮ್ಮ ನುಡಿ ವಾರ್ತೆ

ಬೀದರ, ಜುಲೈ.31– ರಾಜ್ಯ ಸರ್ಕಾರದ ಮಹತ್ವಕಾಂಕ್ಷಿಪಂಚಗ್ಯಾರಂಟಿಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಜನರಿಗೆ ತಲುಪಿಸಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಅವರು ತಿಳಿಸಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಜಿಲ್ಲಾ ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಒಟ್ಟು ಕುಟುಂಬದ ಮಹಿಳಾ ಮುಖ್ಯಸ್ಥೆಯ ಹೆಸರಿನಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ: 381970 ಇವರಲ್ಲಿ ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ ಜುಲೈ.30ಕ್ಕೆ 354701 ಫಲನುಭವಿಗಳು ನೊಂದಾಣಿಯಾಗಿರುತ್ತಾ–ರೆ ಮತ್ತು ಮಾಹೆಕ್ಕೆ 2000 ರೂ. ಅಂತೆ 1271.80 ಕೋಟಿ ಹಣವನ್ನು ಡಿಬಿಟಿ ಮೂಲಕ ವರ್ಗಾಯಿಸಲಾಗುತ್ತಿದೆ.

ಅನ್ನಭಾಗ್ಯ ಯೋಜನೆಯಡಿಯಲ್ಲಿ 15,03,363 ಫಲಾನುಭವಿಗಳಿದ್ದು, 333.28 ಕೋಟಿ ರೂಪಾಯಿ ಅನುದಾನ ಬಳಕೆ–ಯಾಗಿದೆ ಎಂದರು. ಜುಲೈ 2023 ರಿಂದ ಜನವರಿ 2025 ರವರಿಗೆ 5 ಕೆಜಿ ಅಕ್ಕಿ ಮತ್ತು ಉಳಿದ 5 ಕೆಜಿ ಅಕ್ಕಿ ಯ ಮೊತ್ತವನ್ನು ಡಿಬಿಟಿ ಮೂಲಕ ಹಣ ವರ್ಗಾಯಿಸಲಾಗಿತ್ತು ಆದರೆ ಫೆಬ್ರವರಿ 2025 ರಿಂದ 10ಕೆಜಿ ಅಕ್ಕಿ ನೀಡಲಾಗುತ್ತಿದೆ ಎಂದರು. ಪಡಿತರ ಅಕ್ಕಿಯು ಕಾಳಸಂತೆಯಲ್ಲಿ ಮಾರಾಟ ಆಗದಂತೆ ನೋಡಿಕೊಳ್ಳಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯುವನಿಧಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 11181 ನೊಂದಣಿಯಾಗಿದ್ದು ಅದರಲ್ಲಿ 7853 ಪದವಿ ಅಭ್ಯರ್ಥಿಗಳು ಮತ್ತು 172 ಡಿಪ್ಲೋಮಾ ಅಭ್ಯರ್ಥಿಗಳು ಫಲಾನುಭವಿಗಳಿಗೆ 20.97 ಕೋಟಿ ರೂಪಾಯಿ ಅನುದಾನ ಬಳಕೆಯಾಗಿದೆ. ಯುವನಿಧಿ ಯೋಜನೆ ಬಗ್ಗೆ ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ಪ್ರಚಾರ ಮತ್ತು ತಾಲ್ಲೂಕು ಮಟ್ಟದಲ್ಲೂ ಕೂಡ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿಯಲ್ಲಿ ಒಟ್ಟು 3,55,457 ಫಲಾನುಭವಿಗಳಿದ್ದು 357.02 ಕೋಟಿ ಹಣವನ್ನು ಬಳಕೆಯಾಗಿದೆ. ಶಕ್ತಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ 11–06–2023 ರಿಂದ 18–07–2025 ರವರಿಗೆ ಮಹಿಳಾ ಮತ್ತು ಬಾಲಕಿಯರು ಒಟ್ಟು ಸೇರಿ 8.75ಕೋಟಿ ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ ಹಾಗೂ ವಿಭಾಗದ ವಾಹನದಲ್ಲಿ ಪ್ರತಿ ದಿನ ಸರಾಸರಿ 1.14 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ ಇದಕ್ಕೆ 252.35 ಕೋಟಿ ಸಂದಾಯವಾಗಿದೆ ಹಾಗೂ ಕಳೆದ ಸಭೆಯ ಬೇಡಿಕೆಯಂತೆ ಬಸ್ ಸಮಸ್ಯೆ ಇರುವ ಕಡೆಗೆ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದರು. ಕೆಲವು ಕಡೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ನಿಲ್ಲಿಸುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದ್ದು, ಸಮಸ್ಯೆಯನ್ನು ತಕ್ಷಣ ಪರಿಹರಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ಯಾರಂಟಿ ಯೋಜನೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಗೆ ಲಿಖಿತ ರೂಪದಲ್ಲಿ ದೂರ ಸಲ್ಲಿಸಿ, ಒಂದು ವೇಳೆ ಅವರು ಸಮಸ್ಯೆಗೆ ಸ್ಪಂದಿಸದಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಪ್ರಾಮಾಣಿಕವಾಗಿ ಜನರಿಗೆ ಪಂಚ ಗ್ಯಾರಂಟಿಗಳು ತಲುಪಿಸುವ ಕೆಲಸ ಹಾಗೂ ಇವುಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯ ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕು ಎಂದು ತಿಳಿಸಿದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ. ಗಿರೀಶ್ ಬದೋಲೆ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಕಿಶೋರಕುಮಾರ ದುಬೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀಧರ ಎಮ್.ಎಚ್, ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ರಮೇಶ್ ಪಾಟೀಲ್, ಕೆ.ಕೆ. ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಕಾಂತ ಫುಲೇಕರ, ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ವಿ. ಪ್ರಭಾಕರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕರಾದ ಪ್ರವೀಣ್ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# 'ಪತ್ರಿಕೆ ಓದಿನಿಂದ ಭಾಷೆ, ಜ್ಞಾನ ವೃದ್ಧಿ' ಪತ್ರಿಕಾ ದಿನಾಚರಣೆ: ಉಪನ್ಯಾಸಕ ಭೀಮಾಶಂಕರ ಬಿರಾದಾರ.







ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಹುಲಸೂರ: ಪತ್ರಿಕೆಗಳು ಇಂದು ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸುತ್ತಿವೆ. ಪತ್ರಿಕಾ ರಂಗದ ಸೇವೆ ಮಹತ್ವದ್ದಾಗಿದೆ. ಪತ್ರಿಕೆಗಳು ಶೋಷಿತರ ಧ್ವನಿಯಾಗಿ ಕೆಲಸ ಮಾಡುತ್ತಿದ್ದು, ಪತ್ರಿಕೆಗಳನ್ನು ಓದುವುದರಿಂದ ಭಾಷೆ ಮತ್ತು ಜ್ಞಾನದ ವೃದ್ಧಿಯಾಗುತ್ತದೆ ಎಂದು ಉಪನ್ಯಾಸಕರಾಗಿ ಭೀಮಾಶಂಕರ ಬಿರಾದಾರ ಹೇಳಿದರು.

ಅವರು ಹುಲಸೂರ ಪಟ್ಟಣದಲ್ಲಿ ತಾಲ್ಲೂಕಾ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾದ ಪತ್ರಿಕಾ ದಿನಾಚರಣೆ, ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಪತ್ರಿಕೆಗಳು ಶಾಸಕಾಂಗ ಮತ್ತು ಕಾರ್ಯಾಂಗವನ್ನು ಎಚ್ಚರಿಸುವ ಕಾರ್ಯ ಮಾಡುತ್ತವೆ. ದೇಶದ ಅಭಿವೃದ್ಧಿಯಲ್ಲಿ ಪತ್ರಿಕೆಗಳ ಪಾತ್ರ ಮುಖ್ಯವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನಕಾರ್ಯದರ್ಶಿ ಶಿವಕುಮಾರ ಸ್ವಾಮಿ ಮಾತನಾಡಿ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಬೆಳವಣಿಗೆ ಹಿನ್ನಲೆ ಕುರಿತು ಮಾಹಿತಿ ಕೊಟ್ಟು ,ಬರುವ ಆಗಸ್ಟ ತಿಂಗಳಲ್ಲಿ ಪತ್ರಕರಿಗೆ ವಿಶೇಷ ತರಬೇತಿ ಕಾರ್ಯಗಾರ ನಡೆಯಲಿದೆ ಎಂದರು.

ಪಿಎಸ್ಐ ಶಿವಪ್ಪಾ ಮೇಟಿ ಮಾತನಾಡಿ, ಪ್ರಜಾಪ್ರಭುತ್ವದ 4ನೇ ಅಂಗವಾಗಿರುವ ಪತ್ರಿಕಾರಂಗ ತನ್ನದೇ ಆದ ಜವಾಬ್ದಾರಿ ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಪತ್ರಿಕೆ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪತ್ರಿಕೆ ಓದುವುದರಿಂದ ಸ್ಥಳೀಯ ಮತ್ತು ದೇಶ, ವಿದೇಶಗಳ ವಿಚಾರಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಇದರಿಂದ ಜ್ಞಾನ ವೃದ್ಧಿಯಾಗುತ್ತದೆ ಎಂದರು.

ಕಾರ್ಯಕ್ರಮದ ವಿಶೇಷ ಉಪನ್ಯಾಸ ನೀಡಿದ ಸೂರ್ಯಕಾಂತ ಪಾಟೀಲ ಮಾತನಾಡಿ ಸಮಾಜವನ್ನು ಎಚ್ಚರಿಸುವ ಶಕ್ತಿ ಪತ್ರಿಕೋದ್ಯಮವೊಂದಕ್ಕೇ ಇದೆ. ಪತ್ರಕರ್ತರು ಸಮಾಜ ಕನ್ನಡಿ ಇದ್ದಂತೆ, ಒಳ್ಳೆಯ ಪತ್ರಕರ್ತರನ್ನು ಸರ್ಕಾರ ಮತ್ತು ಸಮಾಜ ಗೌರವಿಸಬೇಕು. ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ಪತ್ರಕರ್ತರು ಮಾಡುತ್ತಿರುವುದು ಅಭಿನಂದನಾರ್ಹ ಸಮಾಜವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ಶಕ್ತಿ ಮಾಧ್ಯಮಕ್ಕಿದೆ. ಮುದ್ರಣ ಮಾಧ್ಯಮ ಇಂದಿಗೂ ವಿಶ್ವಾರ್ಹತೆ ಉಳಿಸಿಕೊಂಡಿದೆ ಎಂದು ತಿಳಿಸಿದರು. ಸರ್ಕಾರಿ ನೌಕರರ ಸಂಘದ ತಾಲ್ಲೂಕ ಅಧ್ಯಕ್ಷರಾದ ನಾಗರಾಜ ಹಾವಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ಬದಲಾಗುತ್ತಿರುವ ಮಾಹಿತಿ ತಂತ್ರಜ್ಞಾನ ಯುಗದಲ್ಲಿಯೂ ಪತ್ರಕರ್ತರು ಬರವಣಿಗೆ ಮೂಲಕ ಸತ್ಯವನ್ನು ಸಮಾಜಕ್ಕೆ ತೋರಿಸುವ ಪ್ರಯತ್ನ ಹಾಗೂ ತಾಲ್ಲೂಕಿನ ಅಭಿವೃದ್ಧಿಯಲ್ಲಿ ಪತ್ರಕರ್ತರೂ ಪಾಲುದಾರಿಕೆ ಮತ್ತು ಪತ್ರಕರ್ತರ ವಸ್ತುನಿಷ್ಠ ವರದಿಗಳೂ ಕಾರಣ' ಎಂದರು . ಪ್ರಾಸ್ತಾವಿಕವಾಗಿ ಬಸವಕುಮಾರ್ ಕವಟೇ ಹಾಗೂ ಬಸವಕಲ್ಯಾಣ ಪತ್ರಕರ್ತ ಸಂಘದ ತಾಲ್ಲೂಕಾಧ್ಯಕ್ಷ ಮಾರ್ಥಂಡ್ ಜೋಶಿ ,ಹುಲಸೂರ ತಾಲೂಕ ಅಧ್ಯಕ್ಷ ರಾಜಕುಮಾರ ಹೊನ್ನಡೆ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ದೀಪಾರಾಣಿ ಭೋಸ್ಲೆ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಸಂತೋಷ ಚಿಟ್ಟೆ, ಉದಯಕುಮಾರ ಮೂಳೆ, ಯುವ ಮುಖಂಡ ಅರವಿಂದ ಹರಪಲ್ಲೇ, ರಾಜಪ್ಪಾ ನಂದೊಡೆ, ಸೂರ್ಯಕಾಂತ ಅಡಕೆ, ಧರ್ಮೇಂದ್ರ ಭೋಸ್ಲೆ, ವೀರಶೆಟ್ಟಿ ಮಲಶೆಟ್ಟಿ, ಪ್ರದೀಪ ವಿಸಾಜಿ, ಡಿ.ಕೆ.ಪ್ರಹ್ಲಾದ ವೀರಶೆಟ್ಟಿ ಕರಕಲ್ಲೆ, ದತ್ತಾತ್ರಿ ಸ್ವಾಮಿ, ದತ್ತಾತ್ರಿ ಸಾಬನೆ, ಮಹೇಶ ಹುಲಸೂರಕರ , ಗುಂಡಪ್ಪಾ ಕೊಡಂಬಲೇ ಸೇರಿ ಶಾಲಾ ಸಹ ಶಿಕ್ಷಕರು ,ಮಕ್ಕಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗುರುಪ್ರಸಾದ ಮೆಂಟೇ ಸ್ವಾಗತಿಸಿ , ಶಿವರಾಜ ಖಪಲೆ ನಿರೂಪಿಸಿ ವಂದಿಸಿದರು. ಮಹೇಶ ಗಾಯಕವಾಡ ವಂದಿಸಿದರು.


# ಹಬೋಹಳ್ಳಿ :ಮನೆಯ ಬೀಗ ಮುರಿದು ಕಳ್ಳತನ

ಮಲ್ಲಮ್ಮ ನುಡಿ ವಾರ್ತೆ

ಹಗರಿಬೊಮ್ಮನಹಳ್ಳಿ. ಜು.31 ತಾಲೂಕಿನ ಕೆ ಓಬಳಾಪುರ ಗ್ರಾಮದ ಮನೆಯ ಬೀಗ ಮುರಿದು ಲಕ್ಷಾಂತರ ರೂಪಾಯಿ ನಗದು ಕಳ್ಳತನ ಮಾಡಿರುವ ಘಟನೆ ಬೆಳಕಿಗೆ ಬಂದಿದೆ.

ಗ್ರಾಮದ ಕೃಷಿಕ ನಾಗರಾಜ ಅವರು ಕುಟುಂಬದವರೊಂದಿಗೆ ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಕೂಲಲಿ ಗೋಣಿಬಸವೇಶ್ವರ ದೇವಸ್ಥಾನಕ್ಕೆ ತೆರಳಿದ್ದಾಗ ಬೀಗ ಹಾಕಿರುವ ಮನೆಯನ್ನು ನೋಡಿ ಬೀಗ ಒಡೆದು 15ಲಕ್ಷ ನಗದು ದೋಚಿದ್ದಾರೆ. ದೇವಸ್ಥಾನದಿಂದ ವಾಪಸ್ ಬಂದವಾಗ ಕಳ್ಳತನವಾಗಿರುವುದನ್ನು ಹತ್ತಿರದ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್ ಜಾನವಿ ಭೇಟಿ ನೀಡಿ ಪರಿಶೀಲಿಸಿದರು. ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ,



ಸಿಪಿಐ ವಿಕಾಸ್ ಲಂಬಾಣಿ, ಪಿಎಸ್ಐ ಬಸವರಾಜ್ ಅಡವಿಬಾವಿ ಇದ್ದರು.

# ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಮಾಧ್ಯಮ ತರಬೇತಿ: ಪತ್ರಕರ್ತರಿಗೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಜುಲೈ.31–ಕರ್ನಾಟಕ ಮಾಧ್ಯಮ ಅಕಾಡೆಮಿಯು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೀದರ ಸಹಯೋಗದಲ್ಲಿ ಆಗಸ್ಟ್.6ರಂದು ಬೀದರನಲ್ಲಿ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಮಾಧ್ಯಮ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ ಅವರು ಸಮಾರಂಭವನ್ನು ಉದ್ಘಾಟಿಸಿ ಪರಿಸರ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರದ ಕುರಿತು ಮಾತನಾಡಲಿದ್ದಾರೆ. ಪೌರಾಡಳಿತ ಸಚಿವ ರಹೀಂ ಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ತರಬೇತಿ ಕಾರ್ಯಕ್ರಮದಲ್ಲಿ "ನ್ಯೂಸ್ ರೂಂನಲ್ಲಿ ಂಖ ಮತ್ತು ನಾನು" ಹಾಗೂ "ಸುದ್ದಿಯಲ್ಲಿ ನಿಖರತೆ ಮತ್ತು ಪರಿಣಾಮಕಾರಿ ಸಂವಹನ" ಎಂಬ ವಿಷಯಗಳ ಕುರಿತು ಗೋಷ್ಠಿ ಹಾಗೂ ಸಂವಾದ ನಡೆಯಲಿದೆ.

ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಪತ್ರಕರ್ತರು ಈ ತರಬೇತಿಯಲ್ಲಿ ಭಾಗವಹಿಸಬಹುದು. ಈ ತರಬೇತಿಯು ಪತ್ರಕರ್ತರ ವೃತ್ತಿಕೌಶಲ್ಯವನ್ನು ಉತ್ತಮಪಡಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ. ಪತ್ರಕರ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಆಯೇಶಾ ಖಾನಂ ತಿಳಿಸಿದ್ದಾರೆ.

ಕಲ್ಯಾಣಕರ್ನಾಟಕದ ಇತರೆ ಜಿಲ್ಲೆಗಳಿಂದ ಆಗಮಿಸುವ ಮುಂಚಿತವಾಗಿಯೇ ನೋಂದಾಯಿಸಿಕೊಂಡಿರುವ ಪತ್ರಕರ್ತರಿಗೆ ತರಬೇತಿ ದಿನದಂದು ವಸತಿ ಸೌಲಭ್ಯ ಒದಗಿಸಲಾಗುವುದು. ಆಸಕ್ತರು ಃಣಣಥಿ://ಜಿಂಡಿಛ.ಂಟಜ/ಣಾತಿಂ067ಖಿ1ಛ5ಂಃ–ಕಆಣಃ8 ಗೂಗಲ್ ಫಾರ್ಮ್ ಭರ್ತಿ ಮಾಡಿ ಆಗಸ್ಟ್ 2 ರೊಳಗೆ ನೋಂದಾಯಿಸಿಕೊಳ್ಳುವಂತೆ ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಹನಾ ಎಂ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಪತ್ರಕರ್ತರು ಹಾಗೂ ಸಂಪಾದಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಬೀದರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ ಸುಳ್ಳೊಳ್ಳಿ ಅವರು ಕೋರಿದ್ದಾರೆ.

# ಡ್ರೋಣ ಮೂಲಕ ನ್ಯಾನೊ ಯೂರಿಯಾ ಹಾಗೂ ನ್ಯಾನೊ ಡಿಎಪಿ ಬಳಕೆ ಕುರಿತು ಪ್ರಾತ್ಯಕ್ಷತೆ



ಬೀದರ, ಜುಲೈ.31– ಡೋಣ ಮೂಲಕ ನ್ಯಾನೊ ಯೂ–ರಿಯಾ ಹಾಗೂ ನ್ಯಾನೊ ಡಿ.ಎ.ಪಿ. ಬಳಸುವದರಿಂದ ಮಣ್ಣಿನ ಫಲವತ್ತತೆಗೆ ಹಾಗೂ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರದೆ ಬೆಳೆ ಗುಣಮಟ್ಟದಲ್ಲಿ ವೃದ್ಧಿಯಾಗುತ್ತದೆ ಎಂದು ಬೀದರ ಜಂಟಿ ಕೃಷಿ ನಿರ್ದೇಶಕಿ ದೇವಿಕಾ ತಿಳಿಸಿದರು.

ಅವರು ಇತ್ತೀಚಿಗೆ ಜಿಲ್ಲೆಯ ಬೀದರ ತಾಲ್ಲೂಕಿನ ರೈತ ಸಂಪರ್ಕ ಕೇಂದ್ರ, ಮನ್ನಳ್ಳಿ ಹೊಬಳಿ ವ್ಯಾಪ್ತಿಯಲ್ಲಿ ಬರುವ ರೇಕುಳಗಿ ಗ್ರಾಮದಲ್ಲಿ ಪ್ರಗತಿಪರ ರೈತರಾದ ರಹಮತಉಲ್ಲಾ ಹುಸೇನಿ ರವರ ಕ್ಷೇತ್ರದಲ್ಲಿ ನ್ಯಾನೊ ಯೂರಿಯಾ ಹಾಗೂ ನ್ಯಾನೊ ಡಿ.ಎ.ಪಿ. ಬಳಕೆ ಕುರಿತು ಪ್ರಾತ್ಯಕ್ಷತೆಯಲ್ಲಿ ಮಾತನಾಡಿದರು.

ಅತಿಯಾದ ಹರಳು ರೂಪದ ಯೂರಿಯಾ ಬಳಕೆಯಿಂದ ಮಣ್ಣಿನ ಆಮ್ಲಿಯತೆ, ನೀರಿನ ಮಾಲಿನ್ಯ ಹೆಚ್ಚುತ್ತದೆ. ಬೆಳೆಗಳ ಕೀಟ ರೋಗಗಳಿಗೆ ತುತ್ತಾಗುವ ತರಕಾರಿ, ಹಣ್ಣು, ಧಾನ್ಯಗಳಲ್ಲಿ ವಿಷಕಾರಿಯಾದ ನೈಟ್ರೇಟ್ ಹಾಗೂ ನೈಟ್ರೇಟ್ ಪದಾರ್ಥಗಳ ಅಂಶ ಹೆಚ್ಚಾಗುತ್ತದೆ. ಶಿಶುಗಳಿಗೆ ಬ್ಲೂ ಬೇಬಿ ಸಿಂಡೋಮ್ ಸಮಸ್ಯೆ ಕಾಡಬಹುದು. ಮಾನವನಿಗೆ ಕ್ಯಾನ್ಸರ್ ಹೆಚ್ಚಾಗುತ್ತದೆ, ಅಂತರ್ಜಲವು ಮಾಲಿನ್ಯಗೊಳ್ಳಬಹುದು. ನ್ಯಾನೊ ಯೂರಿಯಾ ದ್ರವ ರೂಪದಲ್ಲಿ ಇರುವುದರಿಂದ ಗೊಬ್ಬರಕಿಂತ 8–10 ಪಟ್ಟು ಹೆಚ್ಚು ಪರಿಣಾಮಕಾರಿಯಾಗಿದೆ. ಎಲೆಗಳಗೆ ಸಿಂಪರಣೆ ಮಾಡುವುದರಿಂದ ಬೆಳೆಗಳಿಗೆ ತ್ವರಿತ್ಯ ಪೊಷಕಾಂಶಗಳು ಸಿಗುತ್ತವೆ ಎಂದು ತಿಳಿಸಿ, ರೈತರು ಹೆಚ್ಚು ಹೆಚ್ಚು ಹರಳು ರೂಪದ ಯೂರಿಯಾ ಬದಲಾಗಿ ದ್ರವ ರೂಪದ ನ್ಯಾನೊ ಯೂರಿಯಾ ಹಾಗೂ ನ್ಯಾನೊ ಡಿ.ಎ.ಪಿ. ಬಳಸಲು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಬೀದರ ಸಹಾಯಕ ಕೃಷಿ ನಿರ್ದೇಶಕಿ ಆರತಿ ಪಾಟೀಲ್, ರಾಜಕುಮಾರ ಎಕ್ಕೆಳಿ. ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು) ವಿಜಯಕುಮಾರ ಸಿರಂಜೆ, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ಮನ್ನಳ್ಳಿ (ಖಈಈಅಔ) ಸಂಸ್ಥೆಯ ಜಿಲ್ಲಾ ವ್ಯವಸ್ಥಾಪಕರು ಸುರೇಶ ಸೇರಿದಂತೆ ಗ್ರಾಮದ ಪ್ರಗತಿಪರ ರೈತರಾದ ರೆಹಮತಉಲ್ಲಾ ಹುಸೇನಿ ಮಲ್ಲಿಕಾರ್ಜುನ ಹಚ್ಚಿ ಹಾಗೂ ಗ್ರಾಮದ ರೈತಬಾಂಧವರು ಮತ್ತು ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.

# 'ನೂತನವಾಗಿ ಎಸ್.ಡಿ.ಎಂ.ಸಿ.ರಚನೆ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಜು 31 ತಾಲೂಕಿನ ಆಲಗೂಡ ಸರ್ಕಾರಿ ಪ್ರೌಢ ಶಾಲೆಯಲ್ಲಿ ನೂತನ ಎಸ್.ಡಿ.ಎಂ.ಸಿ.ರಚನೆ ಮಾಡಲಾಯಿತು. ಅಧ್ಯಕ್ಷರಾಗಿ ಲಕ್ಷ್ಮಣ ಉಕ್ಕಾವಾಲೆ ಉಪಾಧ್ಯಕ್ಷರಾಗಿ ದತ್ತು ಪಾಟೀಲ್ ನಿರ್ದೇಶಕರಾಗಿ ವಿಜಯಕುಮಾರ ಜಾನವಾಲೆ ರೇಖಾ ಕೊಳ್ಳುರೆ. ಸಂಜುಕುಮಾರ ಕಾಂಬಳೆ. ಶಿಲ್ಪಾ ಶಿಂಧೆ. ಸುನಿತಾ ಸೂರ್ಯವಂಶಿ. ರವಿ ಪರಗೆ. ಖಾಜಾ ಅಲಿಮೊದ್ದಿನ್. ಶಿವಾಜಿ ಬಿರಾದಾರ. ಗಂಗಾಧರ ಸೋಮವಂಶಿ. ಕಾರ್ಯದರ್ಶಿಗಳಾಗಿ ಮುಖ್ಯ ಗುರುಗಳಾದ ರಮೇಶ ರಾಜೋಳೆ ಆಗಿರುತ್ತಾರೆ. ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಚಿಟಗುಪ್ಪ:– ಪುರಸಭೆಯ ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ ಅವರ ಹುಟ್ಟು ಹಬ್ಬವನ್ನು ಪುರಸಭೆ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರಾದ ಮಾಲಾಶ್ರೀ ಎಸ್. ಭುತ್ತಾಳೆ ಅವರು ಶಾಲು ಹೊದಿಸಿ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಶಾಮರಾವ ಸಿ. ಭುತ್ತಾಳೆ, ಸಿಬ್ಬಂದಿಗಳಾದ ಸಂತೋಷ ಬಿರಾದಾರ್, ಧನರಾಜ ನೇಳಕುಡಕ್ಕರ್, ರಾಜು ತೆಲಂಗ ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಮುಖ್ಯಗುರುಗಳಿಗೆ ಗೌರವ ಸಮರ್ಪಣೆ




ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು: ತಾಲೂಕಿನಲ್ಲಿ ನಿವೃತ್ತ ಹೊಂದಿದ ಶಾಲಾ ಮುಖ್ಯಗುರುಗಳಿಗೆ ಗೌರ ಸಮರ್ಪಣೆಯನ್ನು ಆಗಸ್ಟ ಎರಡರಂದು ಕರಾಸಹಿ ಹಾಗೂ ಪಪ್ರಾಶಾಮು ಸಂಘದಿಂದ ಕಾರ್ಯಕ್ರಮ ಮಾಡುತಿದ್ದು ಈ ಕಾರ್ಯಕ್ರಮದಲ್ಲಿ ಎಲ್ಲಾ ತಾಲೂಕಿನ ಶಿಕ್ಷಕರು ಬಾಗವಹಿಸಬೇಕೆಂದು ಮನವಿ ಮಾಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಮಾಡಿದ ಕರಾಸಹಿ ಹಾಗೂ ಪಪ್ರಾಶಾಮು ಸಂಘದ ಅಧ್ಯಕ್ಷರಾದ ಅಮರಪ್ಪ ಸಾಲಿ ಅವರು ನಗರದ ಗುರುಭವನದಲ್ಲಿ ನಿವೃತ್ತ ಹೊಂದಿದವರಿಗೆ ಗೌರವ ಸಮರ್ಪಣೆ ಮತ್ತು ನೂತನವಾಗಿ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಎಲ್ಲಾ ತಾಲೂಕಿ ಶಿಕ್ಷಕಬಾಂದವರು ಹಾಜರಾಗಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ಮಾರುತಿ ಎಸ್, ಮಲ್ಲಪ್ಪ ನಗಾರಿ, ಹುಲಗಪ್ಪ ಮು. ಗು, ನಾಗೇಶ ಗುರುಗುಂಟಾ ಉಪಸ್ಥಿತರಿದ್ದರು

# ಹಠಾತ್ ಕುಸಿದು ಬಿದ್ದ ಕಟ್ಟಡ, ಓರ್ವನ ರಕ್ಷಣೆ

ಬೆಂಗಳೂರು: ನಗರದ ಸಂಪಂಗಿರಾಮನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜಿಯೋ ಹೋಟೆಲ್ ಬಳಿ ಮನೆಯೊಂದು ಕುಸಿದು ಬಿದ್ದಿದ್ದು, ಮನೆಯೊಳಗೆ ವ್ಯಕ್ತಿಯೊಬ್ಬ ಪವಾಡ ರೀತಿಯಲ್ಲಿ ಪಾರಾಗಿದ್ದಾನೆ. ಬೆಂಗಳೂರು, ಜು.31– ರಾಜ್ಯ ರಾಜಧಾನಿ ಬೆಂಗಳೂರಿನ ಸಂಪಗಿರಾಮನಗರದ ಜಿಯೋ ಹೋಟೆಲ್ ಬಳಿ ಹಳೇ ಕಟ್ಟಡಯೊಂದು ದಿಢೀರ್ ಕುಸಿದ್ದು, ಪವಾಡ ಎಂಬಂತೆ ಓರ್ವ ವ್ಯಕ್ತಿ ಬಚಾಬ್ ಆಗಿದ್ದು, ಒಟ್ಟಾರೆ, ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ.

ಸರಿ ಸುಮಾರು ಐವತ್ತು ವರ್ಷಗಳ ಕಟ್ಟಡ ಇದಾಗಿದ್ದು, ಗುರುವಾರ ಮಧ್ಯಾಹ್ನ ಸುಮಾರಿಗೆ ಏಕಾಏಕಿ ಕಟ್ಟಡ ಕುಸಿದಿದೆ. ಈ ವೇಳೆ ಸ್ಥಳೀಯರೇ ಜಮಾಯಿಸಿ ಅವಶೇಷಗಳಲ್ಲಿ ಸಿಲುಕಿದ್ದ ಅಶ್ವಿನ್ ಎಂಬುವರನ್ನು ರಕ್ಷಣೆ ಮಾಡಲಾಗಿದೆ.

# ಜಿಲ್ಲಾ ಮಟ್ಟದ ಅರಿವು ಮೂಡಿಸುವ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ :ಜು:31 ಸ್ವಸಹಾಯ ಗುಂಪುಗಳಿಂದ ಸಣ್ಣ,ಸಣ್ಣ ಉದ್ಯಮಗಳನ್ನು ಮನೆಯಲ್ಲಿಯೇ ಮಾಡುವ ಮೂಲಕ ಆರ್ಥಿಕವಾಗಿ ಸಬಲರಾಗುವಂತೆ ಜಿಪಂ ಸಿಇಒ ಲವಿಶ್ ಓರಡಿಯಾ ಹೇಳಿದರು.

ಇಲ್ಲಿನ ಜಿಪಂ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ಯಮಿಗಳ ನಿಯಮ ಬದ್ಧಗೊಳಿಸುವಿಕೆ ಯೋಜನೆಯ ಜಿಲ್ಲಾ ಮಟ್ಟದ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆತ್ಮ ನಿರ್ಭರ ಭಾರತ ಅಭಿಯಾನದಡಿ ಇರುವ ಈ ಯೋಜನೆಯ ಲಾಭ ಪಡೆಯಬೇಕು. ಇಲ್ಲಿ ವೈಯಕ್ತಿಕ ಉದ್ದಿಮೆಗಳು ಮತ್ತು ಗುಂಪುಗಳೊಂದಿಗೆ ಉದ್ಯೋಗ ಮಾಡಬಹುದು. 15 ಲಕ್ಷ ರೂ. ವರೆಗೂ ಸಹಾಯಧನ ಸಿಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ 6 ಲಕ್ಷ ರೂ. ಮತ್ತು ರಾಜ್ಯ ಸರ್ಕಾರ 9 ಲಕ್ಷ ರೂ. ಸೇರಿರುತ್ತದೆ ಎಂದು ಅವರು ವಿವರಿಸಿದರು.

ಈ ಯೋಜನೆಯ ಹಲವು ಆಯಾಮಗಳ ಬಗ್ಗೆ ಹೇಳಿದರು. ಜಂಟಿ ಕೃಷಿ ನಿರ್ದೇಶಕ ರತೇಂದ್ರನಾಥ ಸೂಗುರು ಮಾತನಾಡಿ, ಇದೊಂದು ಬಹು ಉಪಯುಕ್ತ ಯೋಜನೆಯಾಗಿದ್ದು, ಇದರ ಲಾಭ ಗಿರಿಜಿಲ್ಲೆಯ ಜನರು ಪಡೆಯಬೇಕೆಂದರು.

ಕೆಎಪಿಪಿಇಸಿ ಅಧಿಕಾರಿ ಚಂದ್ರಕುಮಾರ ಈ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಅಗ್ರಶ್ರೇಣಿ ಬ್ಯಾಂಕಿನ ವ್ಯವಸ್ಥಾಪಕ ಭೀಮರಾವ ಪಂಚಾಳ್, ಉಪ ಕೃಷಿ ನಿರ್ದೇಶಕರು, ಜಿಲ್ಲೆಯ ವಿವಿಧ ತಾಲೂಕುಗಳ ಸಹಾಯಕ ಕೃಷಿ ನಿರ್ದೇಶಕರು, ನಬಾರ್ಡ್ ಬ್ಯಾಂಕ್ ವ್ಯವಸ್ಥಾಪಕರು, ತೋಟಗಾರಿಕೆ ಉಪ ನಿರ್ದೇಶಕರು, ಪಶುಸಂಗೋಪನೆ ಉಪನಿರ್ದೇಶಕರು, ನಗರ ಅಭಿವೃದ್ಧಿ ಕೋಶದ ಅಧಿಕಾರಿಗಳು, ಎನ್ ಆರ್ ಎಲ್ ಎಮ್ ಅಧಿಕಾರಿಗಳು, ಯೋಜನೆಯ ಫಲಾನುಭವಿಗಳು, ಆಸಕ್ತ ಯುವ ಯುವತಿಯರು ಕೃಷಿ ಸಖಿಯರು, ಉದ್ಯಮಿಗಳು ಮತ್ತು ರೈತ ಉತ್ಪಾದಕ ಸಂಸ್ಥೆ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 200ಕ್ಕೂ ಹೆಚ್ಚು ಫಲಾನುಭವಿಗಳು ಮತ್ತು ಆಸಕ್ತರು ಭಾಗವಹಿಸಿದ್ದರು. ತರಬೇತಿ ನಂತರ ಆಸಕ್ತ ಸುಮಾರು 30 ಯುವಕರು ಈ ಯೋಜನೆಯಡಿ ಉದ್ಯೋಗ ಕೈಗೊಳ್ಳಲು ತಮ್ಮ ಹೆಸರು ನೊಂದಾಯಿಸಿದರು. ಸಹಾಯಕ ಕೃಷಿ ನಿರ್ದೇಶಕ ರಾಜಕುಮಾರ ನಿರೂಪಿಸಿದರು ಮತ್ತು ಕೆಎಪಿಪಿಇಸಿ ಪ್ರಧಾನ ಕಚೇರಿಯ ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಮಾಧಾನದ ಜೀವನಕ್ಕಾಗಿ ಆಧ್ಯಾತ್ಮ ಅಗತ್ಯ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜು.31:ಇಂದಿನಆಧುನಿಕ ಕಂಪ್ಯೂಟರ್ ಯುಗದಲ್ಲಿ ಸಮಾಧಾನದ ಬದುಕು ಸಾಗಿಸಲು ಪ್ರತಿಯೊಬ್ಬರಿಗೆ ಆಧ್ಯಾತ್ಮ ಜ್ಞಾನ ಅಗತ್ಯವಾಗಿದೆ ಎಂದು ಪ್ರಜಾಪಿತಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಚಾಲಕಿ ರಾಧಿಕಾ ಬಹನಜೀ ಹೇಳಿದರು.ಪಟ್ಟಣದ ನಿವೃತ್ತ ನೌಕರರಭವನದಲ್ಲಿಆಯೋಜಿಸಿದ ರಾಖಿ ಬಂಧನ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿದರು.ರಾಖಿಯಮೌಲ್ಯ ಕಡಿಮೆಯಿರಬಹುದು.ಅದರೆಅದರ ಬೆಲೆ ಕಟ್ಟಲಿಕ್ಕಾಗಲ್ಲ.ಸಹೋದರ ಸಹೋದರಿಯರನ್ನುಬೆಸೆಯುವ ಹಬ್ಬವೆ ರಾಖಿ ಹಬ್ಬ.ರಾಖಿ ಕೇವಲ ಸಂಕೇತ ಮಾತ್ರ. ಅದು ಸಮಾಜದ ವ್ಯಕ್ತಿಗಳನ್ನ ಒಗ್ಗೂಡಿಸುತ್ತದೆ. ಹುಟ್ಟು ಆಕಸ್ಮೀಕ.ಸಾವು ನಿಶ್ಚಿತ. ಹುಟ್ಟು ಸಾವಿನಮಧ್ಯೆರೂಪಿಸಿಕೊಳ್ಳುವ ಬದುಕು ಮಾತ್ರ ಪವಿತ್ರ. ಮನುಷ್ಯನ ಗುರಿ ಕೇವಲ ಸಂಪತ್ತುಗಳಿಸುವುದಲ್ಲ.ಜಂಜ–ಾಟದ ಜೀವನದಲ್ಲಿ ಬಿಡುವು ಮಾಡಿಕೊಂಡು ಆಧ್ಯಾತ್ಮ ಕಡೆ ಒಲವು ತೋರಿದರೆ ನಮ್ಮ ಜೀವನ ಪರಿಪೂರ್ಣವಾಗುತ್ತದೆ ಎಂದು ಬಹು ಮಾರ್ಮಿಕವಾಗಿ ನುಡಿದರು.ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಸವರಾಜ ಮರೆಅಧ್ಯಕ್ಷತೆವಹಿಸಿದ್ದರು.ರಾಖಿ ಬಂಧನ:ಇದೇ ಸಂದರ್ಭದಲ್ಲಿ ಎಲ್ಲ ನಿವೃತ್ತ ನೌಕರರಿಗೆ ಓಂ ಶಾಂತಿಯ ರಾಧಿಕಾ ಬಹನಜೀ ರಾಖಿ ಕಟ್ಟಿ ಸಿಹಿ ಹಂಚಿದರು.ಸಮಾರಂಭದಲ್ಲಿ ಪ್ರಮುಖರಾದ ಶಂಕ್ರೆಪ್ಪ ಮಾಶೆಟ್ಟೆ,ಜೈಶ್ರೀಬೊರಾಳೆ,ಶಿವಾನಂದ ಗುಂದಗಿ,ರಾಜಶೇಖರ ಚಿದ್ರಿ,ಅಶೋಕಕಾರಬಾರಿ,ಅಶೋಕ ರಾಜೋಳೆ,ಶೀಖರೇಶ್ವರ ಶೆಟಕಾರ,ಶಾಂತಕುಮಾರ ಭೈರೆ,ಬಾಬುರಾವ,ಬಸವರಾಜ ಅಂಬರಶೆಟ್ಟಿ,ಶ್ರೀಮಂತಪಾಟೀಲ್, ಭಾವರಾವನೆಲವಾಡೆ,ಜಯರಾಜ ಬಿರಾದಾರ,ನಾಗಭೂಷಣ ವಾಾಮುಡಿ,ಶಂಕರರಾವ ಚೆಲವಾ,ಬಾಬುರಾವ ಬಿಚಕುಂದೆ,ಸೋಮನಾಥ ನುಚ್ಚಾ,ಜಿ.ಆರ್.ವಾಲಿ.,ರಾಜಣ್ಣ ಶೇರಿಕಾರ,ಪುಂಡಲಿಕರಾವ ಟಿಳೇಕರ,ಡಿಗಂಬರಾವ,ಬಸವರಾಜ ಭೂರೆ,ಮನ್ಮತಯ್ಯಾಸ್ವಾಮಿ,ಶಿವರಾಜ ಕೋಟೆ,ಬಸವರಾಜ ಬಿರಾದಾರ,ಭದ್ರಪ್ಪ,ವೈಜಿನಾಥ ಕೊಚಗೆ,ಶಿವರಾಜಬೊರಾಳೆ,ಶಿವಾಜಿ ಜಗತಾಪ,ಜಗನ್ನಾಥ ಕನ್ನಾಳೆ,ಗುರುನಾಥರಾವ,ನೀಲಕಂಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.ನೌಕರರಸಂಘದ ಉಪಾಧ್ಯಕ್ಷಶಾಂತವೀರಪಾಟೀಲ ಸ್ವಾಗತಿಸಿದರು.ಕಾರ್ಯದರ್ಶಿ ಮಲ್ಲಿಕಾರ್ಜುನ ಬಿರಾದಾರ ನಿರೂಪಿಸಿದರು.ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ವಂದಿಸಿದರು.

# ವೃತ್ತಿ ಜೀವನದಲ್ಲಿ ಕೋಪ-ತಾಪ ಸಾಮಾನ್ಯ:ಡಿಡಿಪಿಯು ಶಾಹಾಬಾದಕರ್

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಜು.31:ಸಂಸ್ಥೆ ಮುಖ್ಯಸ್ಥನಾದವನು ಏಕ ಕಾಲದಲ್ಲಿ ಎಲ್ಲರನ್ನ ಖುಷಿ ಪಡಿಸಲು ಸಾಧ್ಯವಿಲ್ಲ.ಆಡಳಿತ ಸುಧಾರಣೆಗಾಗಿ ವೃತ್ತಿ ಜೀವನದಲ್ಲಿ ಕೋಪ–ತಾಪ ಮಾಡಿಕೊಳ್ಳುವುದು ಸಾಮಾನ್ಯ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ(ಪದವಿಪೂರ್ವ) ಚಂದ್ರಕಾಂತ ಶಾಹಾಬಾದಕರ್ ಅಭಿಪ್ರಾಯಪಟ್ಟರು.



ಪಟ್ಟಣದ ಶಿವಾಜಿ ಪದವಿ ಪೂರ್ವ ಕಾಲೇಜಿನಲ್ಲಿಗುರುವಾರ ಹಮ್ಮಿಕೊಂಡ ವಯೋನಿವೃತ್ತ ಪ್ರಾಂಶುಪಾಲ ಚಂದ್ರಕಾಂತ ಬಿರಾದಾರ ಅವರಿಗೆ ಸನ್ಮಾನಿಸಿ ಮಾತನಾಡಿದರು.

ವೃತ್ತಿಜೀವನದಲ್ಲಿಎಷ್ಟುವರ್ಷ ಉಳಿದೆವು ಅನ್ನುವುದಕ್ಕಿಂತ ಏನು ಸಾಧನೆ ಮಾಡಿದೇವು ಎನ್ನುವುದು ಮುಖ್ಯ.ನಾವು ಸೇವೆಯಿಂದ ನಿರ್ಗಮಿಸಿದಾಗ ನೆನಪಿಸಿಕೊಳ್ಳುವ ಹಾಗೆ ಅಜರಾಮರ ಕಾರ್ಯ ಮಾಡಬೇಕು.ಮಕ್ಕಳಸರ್ವಾಂಗೀಣ ವಿಕಾಸಕ್ಕಾಗಿ ವೃತ್ತಿ ಜೀವನ ಮುಡುಪಾಗಿಡಬೇಕು.ಪೈಪೋಟಿ ಯುಗದಲ್ಲಿ ಪಿಯುಸಿ ವಿದ್ಯಾರ್ಥಿಗಳು ಗರಿಷ್ಠ ಅಂಕಗಳೊಂದಿಗೆಉತ್ತೀರ್ಣರಾಗಿ ನಿಮ್ಮಭವಿಷ್ಯದಜೀವನಉಜ್ವಲ ಮಾಡಿಕೊಳ್ಳಿ ಎಂದು ಹೇಳಿ ,ಬಿರಾದಾರ ಅವರ ನೀವೃತ್ತಿ ಜೀವನದಲ್ಲಿ ಭಗವಂತ ಸಕಲ ಆಯೂರಾರೋಗ್ಯ,ಐಶ್ವರ್ಯ ನೀಡಿ ಕರುಣಿಸಿಲಿ ಎಂದು ಶುಭ ಹಾರೈಸಿದರು.ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರಾಂಶುಪಾಲ ಚಂದ್ರಕಾಂತ ಬಿರಾದಾರ ಅವರು,ಕಿ.ಶಿ.ಪ್ರ. ಮಂಡಳದ ಸಂಸ್ಥಾಪಕ ಅಧ್ಯಕ್ಷ ದಿ.ಬಾಬಾರಾವ ಹೊನ್ನಾಳಿಕರ್ ಮತ್ತು ಪ್ರಸ್ತುತ ಅಧ್ಯಕ್ಷ ಅನೀಲ ಶಿಂದೆ ಹಾಗೂ ಆಡಳಿತ ಮಂಡಳಿಯರನ್ನು ನಾನು ಎಂದು ಮರೆಯುದಿಲ್ಲ. ಕೊನೆಯುಸಿರಿನವರೆಗೂ ಸಂಸ್ಥೆಯ ಪ್ರಗತಿಗಾಗಿ ಶ್ರಮಿಸುತ್ತೇನೆ ಎಂದರು.

ಸಂಸ್ಥೆ ನಿರ್ದೇಶಕ ಪ್ರತಾಪ ಪಾಟೀಲಅಧ್ಯಕ್ಷತೆವಹಿಸಿದ್ದರು. ಸಮಾರಂಭದಲ್ಲಿ ನಿರ್ದೇಶಕ ಅನಂತ ಪಾಟೀಲ,ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಭು,ರಾಜ್ಯಪ್ರತಿನಿಧಿ ಬಾಲಾಜಿವಾಡೆಕರ್,ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಓಂಕಾರ ಸೂರ್ಯವಂಶಿ,ಅನುದಾನಿತ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ್, ಪ್ರಮುಖರಾದ ಜೈಕಾಂತ ಗಂಗೋಜಿ ,ಡಾ. ಜೈಶೇನ ಪ್ರಸಾದ, ಅಶೋಕ ರಾಜೋಳೆ,ಶಿವರಾಜ ಬೆಲ್ಲಾ ಪುರೆ,ಪರಶುರಾಮ್,ಸುಂದರ ರಾಜ ಸೇರಿದಂತೆ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.

ಅರ್ಚನಾಸಾಳುಂಕೆಸ್ವಾಗತಿಸಿದರು. ಆರತಿ ಪಾತ್ರೆನಿರೂಪಿಸಿದರು. ಆರ್.ಎಮ್.ಬಿರಾದಾರ ವಂದಿಸಿದರು.

# ರಾಜೋಳಕರ ಕಮಲನಗರ ಐಟಿಐಗೆ ಕಾಯಕಲ್ಪ ಒದಗಿಸಿದವರು: ವೈಜಗೊಂಡ



ಬೀದರ. ಜು. 31 : ಕಡಿಮೆ ಅವಧಿಯ ಖರ್ಚಿಲ್ಲದ ಐಟಿಐ ಶಿಕ್ಷಣ ಬಡಮಕ್ಕಳ ಪಾಲಿಗೊಂದು ದೊಡ್ಡವರದಾನ. ಗಡಿಭಾಗದ ಹಾಗೂ ಡಾ ಚನ್ನಬಸವ ಪಟ್ಟದ್ದೇವರ ಹುಟ್ಟೂರಿನ ಕಮಲನಗರ ಸರಕಾರಿ ಐಟಿಐಗೆ ಕೌಶಲ್ಯತೆಯ ಕಾಯಕಲ್ಪ ಒದಗಿಸಿದ ಬಾಬು ರಾಜೋಳಕರ ಸೇವೆ ಶ್ಲಾಘನೀಯ ಎಂದು ವೈಜಗೊಂಡ ನುಡಿದರು. ಕಮಲನಗರ ಸರಕಾರಿ ಐಟಿಐ ಪ್ರಭಾರೆ ಪ್ರಾಚಾರ್ಯರಾದ ಬಾಬು ರಾಜೋಳಕರವಯೋನಿವೃತ್ತಿಯ ಸಮಾರಂಭವನ್ನು ಸರಕಾರಿ ನೌಕರರ ಸಂಘ,ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರಕಾರಿ ಐಟಿಐ ಕಮಲನಗರ ಜಂಟಿ ಸಹಯೋಗದೊಂದಿಗೆಆಯೋಜಿದ ಸಮಾರಂಭವನ್ನು ಜ್ಯೋತಿ ಬೆಳಗಿಸಿದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಬೆಂಗಳೂರು ವಿಭಾಗೀಯ ಜಂಟಿ ನಿರ್ದೇಶಕರಾದ ವೈಜಗೊಂಡ ಮುಂದುವರೆದು..ಬಾಬು ರಾಜೋಳಕರ ಬರುವದಕ್ಕಿಂತ ಮುಂಚೆ ಅನೇಕ ಕಷ್ಟ ಕಾರ್ಪಣ್ಯಗಳ ಸುಳಿಗೆ ಸಿಕ್ಕಿ ನಲುಗುತ್ತಿರುವ ಕೌಶಲ್ಯವನ್ನು ತನ್ನ ಅನುಭವದಿಂದ ಮೇಲಕ್ಕೆತ್ತಿ ಶಾಸಕರನ್ನು ಸಂಪರ್ಕಿಸಿ ಬೃಹದಾಕಾರವಾದ ಶಾಶ್ವತ ಕಟ್ಟಡ ಮೂಲಭೂತ ಸೌಕರ್ಯ ಕಲ್ಪಿಸಿರುವುದು ಒಂದು ದಾಖಲೆ ಎಂದರು. ಇಲ್ಲಿ 80 ಮಕ್ಕಳಿಗೆ ಅವಕಾಶ ಇದ್ದು ಸದರಿ ಸಾಲಿನಲ್ಲಿ ತುಂಬಾ ಪ್ರವೇಶಕ್ಕಾಗಿ ಕಷ್ಟಪಡುತ್ತಿದ್ದರೂ ಇಲ್ಲಿಯ ಫಲಿತಾಂಶ ಹಾಗೂ ಮೂಲಭೂತ ಸೌಕರ್ಯ ಇಲ್ಲಿನ ವ್ಯವಸ್ಥೆಗೆ ಮಾರು ಹೋಗಿ ಮಕ್ಕಳು 100% ಪ್ರವೇಶ ಯಶಸ್ವಿ ಗೊಳಿಸಿದ್ದು ಅಭಿನಂದನರ್ಹ ಸಂಗತಿ.ನಾವು ಹುದ್ದೆಯಲ್ಲಿ ಎಷ್ಟು ಕಾಲ ಇರುತ್ತೇವೆಂಬುದಕ್ಕಿಂತ ನಾವಿದ್ದಾಗ ಏನೇನು ಕೌಶಲ್ಯಕ್ಕೆ ಮನ ಮಿಡಿದಿದೆ ಎಂಬುದು ಮುಖ್ಯ ಎಂದು ಮಾರ್ಮಿಕವಾಗಿ ಮಾತನಾಡಿದರು. ಮಕ್ಕಳ ಭಾವಿ ಭವಿಷ್ಯದ ಹಿತದೃಷ್ಟಿಯಿಂದ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಿಂದ ಒಡಂಬಡಿಕೆ ಮಾಡಿಕೊಡುವೆ, ಇದರಿಂದ ಎರಡನೇವರ್ಷದಲ್ಲಿಪ್ರಾಯೋಗಿಕ ಕೌಶಲ್ಯ ಕಲಿಯುದರ ಜೊತೆ–ಗೆ ಸ್ಟೈಫಂಡ ಪಡೆಯಲು ಅನುಕೂಲವಾಗಲಿದೆ ಎಂಬ ದೂರದೃಷ್ಟಿಯ ಆಶ್ವಾಸನೆನೀಡಿದಾಗ ಹಾಜರಿದ್ದ ಕುಶಲಕರ್ಮಿಗಳ ಸಂತೋಷ ಇಮ್ಮಡಿಗೊಂಡಿತ್ತು. ಸಮಾರಂಭದಲ್ಲಿಕ.ರಾ.ಸ.ನೌ.ಸಂ. ತಾ.ಅಧ್ಯಕ್ಷರಾದ ಸುನೀಲ ಕಸ್ತೂರೆ ಮಾತನಾಡಿ ಬಾಬು ರಾಜೋಳಕರ ಸೇವೆ ಒಂದು ಅಪರೂಪ. ಅವರು ದಿನಾಲು ಓಡಾಡಿ ಸಂಸ್ಥೆಯ ಅಭ್ಯುದಯಕ್ಕೆ ನಾಂದಿ ಹಾಡಿದ್ದಾರೆ. ನಾವು ಸಹಿತ ಅವರಿಗೆ ಎಪ್ರಿಲ್ ನಲ್ಲಿ ಉತ್ತಮ ಅಧಿಕಾರಿ ಎಂಬ ಬಿರುದು ಕೊಟ್ಟು ಸನ್ಮಾನ ಮಾಡಿದ್ದೇವೆಂದು ನುಡಿದರು. ಜಿಲ್ಲಾ ಕ.ಸಾ.ಪ. ಕೋಶಾಧ್ಯಕ್ಷರಾದ ಶಿವಶಂಕರ ಟೋಕರೆ ಅಭಿನಂದನಾ ನುಡಿ ನುಡಿಯುತ್ತ.. ಬಾಬು ರಾಜೋಳಕರ ಕಿ.ತ.ಅ./ತರಬೇತಿ ಅಧಿಕಾರಿ/ಪ್ರಭಾರೆ ಪ್ರಾಚಾರ್ಯರಾಗಿ ಎಲೆಮರೆಯ ಕಾರ್ಯ ಮಾಡಿದ್ದಾರೆ. ಅನೇಕ ಕಷ್ಟಗಳು ಬಂದರು ಅದನ್ನು ಬದಿಗೊತ್ತಿ ಸೇವೆ ಮಾಡಲು ಇದೊಂದು ಸದಾವಕಾಶ ಎಂಬ ದೂರದೃಷ್ಟಿ ಯಿಂದ ಅನೇಕ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಿ ಕುಶಲಕರ್ಮಿಗಳ ಭವಿಷ್ಯ ರೂಪಿಸಿದ್ದಾರೆ. ಗಡಿ ಭಾಗದ ಸರಕಾರಿ ಐಟಿ–ಐಗೆ ಇಂದು ಶಾಶ್ವತವಾದ ಮೂಲಭೂತ ಸೌಕರ್ಯ ಕೊಟ್ಟಿದ್ದು ಇದೊಂದು ಐತಿಹಾಸಿಕ ದಾಖಲೆಯಾಗಿದೆ ಎಂದು ನುಡಿದು ಪರಿಷತ್ತು ಪರವಾಗಿ ಸೇವಾ ದುರಂಧರರು ಎಂಬ ಪ್ರಶಸ್ತಿ ನೀಡಿ ಗೌರವಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಪೂಜ್ಯಶ್ರೀ ಮಹಾಲಿಂಗ ದೇವರು ಹಿರೇಮಠ ಸಂಸ್ಥಾನ ಭಾಲ್ಕಿ ಆಶೀರ್ವಚನ ನೀಡುತ್ತ

ಐಟಿಐನಲ್ಲಿ ಸಿದ್ದಾಂತಕ್ಕಿಂತ ಪ್ರಾಯೋಗಿಕ ಪಾಠಕ್ಕೆ ಬೆಲೆ ಜಾಸ್ತಿ. ಕುಶಲಕರ್ಮಿಗಳಲ್ಲಿ ಕೌಶಲ್ಯತೆ ಅಳವಟ್ಟರೆ ನೌಕರಿ ನಿಮ್ಮ ಮನೆ ಬಾಗಿಲಿಗೆ ಹುಡುಕಿ ಕೊಂಡು ಬರುತ್ತದೆ.ತಾವೆಲ್ಲರೂ ವೃತ್ತಿ ಶಿಕ್ಷಣ ಕಲಿತು ಹುಟ್ಟಿಸಿದ ಪಾಲಕರಿಗೆ ಕಲಿಸಿದ ಗುರುಗಳಿಗೆ ಕೃತಜ್ಞರಾಗಿರಿ ಎಂದು ಶುಭ ಕೋರಿ ಬಾಬು ರಾಜೋಳಕರ –ಸುವರ್ಣಾ ರಾಜೋಳಕರ ದಂಪತಿಗಳಿಗೆಸನ್ಮಾನಮಾಡಿದರು. ಕೃತಜ್ಞತೆ ಮಾತಾಡಿದ ಬಾಬು ರಾಜೋಳಕರ ನಾನು ಅತ್ಯಂತ ಕಷ್ಟದಲ್ಲಿ ಹುಟ್ಟಿ ಈ ಸ್ಥಾನಕ್ಕೆ ಬಂದಿದ್ದೇನೆಂಬುದು ನೆನಪಿದೆ. ಇಲಾಖೆ ಎಲ್ಲ ಸವಲತ್ತು ಕೊಟ್ಟಾಗ ಕೆಲಸ ಮಾಡದೆ ಹಾಗೆ ಕುಳಿತರೆ ಅನ್ಯಾಯ. ಹಾಗಾಗಿ ನಾನು ಸ್ಥಳಿಯರ ಸಹಕಾರ ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಶಾಸಕರ ಕಟ್ಟಾದೇಶ ಪಾಲಿಸಿ ಸಂಸ್ಥೆ ಅಭಿವೃದ್ಧಿ ಪಡಿಸಿರುವೆನು. ಈ ಅವಧಿಯಲ್ಲಿ ಏನಾದರೂ ತಪ್ಪಾದರೆ ಕ್ಷಮೆ ಎರಲಿ ಎಂದ್ದು ಗದ್ಗದ ಧ್ವನಿಯಿಂದ ದು:ಖ ಉಮ್ಮಳಿಸಿ ಬಂದಾಗ ಕ್ಷಣಕಾಲ ಮೌನವಾಯಿತು. ತರಬೇತಿ ಅಧಿಕಾರಿಗಳಾದ ಯುಸೂಫ್ ಮಿಯ್ಯಾ ಜೋಜನಾ ಅಧ್ಯಕ್ಷತೆ ವಹಿಸಿದ್ದರು.ವೇದಿಕೆ ಮೇಲೆ ಪತ್ರಕರ್ತರಾದ ಪ್ರೊ. ಎಸ್ ಎಸ್ ಮೈನಾಳೆ, ಮಹಾದೇವ ಬಿರಾದಾರ, ಭಾವರಾವ ಹೇಡೆ ಹಾಗೂ ಮುಖ್ಯ ಅತಿಥಿಗಳಾಗಿ ಆಡಲಿತಅಧಿಕಾರಿಅನೀಲಕುಮಾರ ಶಾಂತಪೂರೆ,ಸುದರ್ಶನಕುಮಾರ ಮಂಗಲಗಿ, ಪೂಜಾರಿ ರಮೇಶ ಉಪಸ್ಥಿತಿ ಇದ್ದರು. ಮೊದಲಿಗೆ ಕುಶಲಕರ್ಮಿಗಳ ನಾಡಗೀತೆಯೊಂದಿಗೆಪ್ರಾರಂಭಿಸಿದ ಕಾರ್ಯಕ್ರಮ ದಯಾನಂದ ಬಂಬಳಗೆ ನಿರೂಪಣೆ ಮಾಡಿದರೆ ಸುನೀಲಕುಮಾರ ಸುಲೆಗಾಂವಕರ ಸ್ವಾಗತಿಸಿದರೆ, ಮಹೇಶ ಪಾಟೀಲ ವಂದಿಸಿದರು. ತದನಂತರ ಸರಕಾರಿ ಐಟಿಐ ಕಮಲನಗರ, ಔರಾದ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ ಬೀದರ ಸಿಬ್ಬಂದಿಗಳು ಸನ್ಮಾನ ಮಾಡಿದರು. ಜೊತೆಗೆ ಎಸ್ ವ್ಹಿ ಐಟಿಐ, ವಿಶ್ವೇಶ್ವರಯ್ಯ ಐಟಿಐ, ಪಟ್ಟದ್ದೇವರ ಐಟಿಐ, ರೂರಲ್ ಐಟಿಐ ರಾಜೀವಗಾಂಧಿ ಐಟಿಐ ಹಾಗೂ ಶಿವಮಠ ಐಟಿಐ ಪ್ರಾಚಾರ್ಯರು ಸಿಬ್ಬಂದಿಗಳು ಶಾಲು ಹೂವಿನ ಮಾಲೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

# ಮಾಲೆಗಾಂವ್ ತೀರ್ಪು: ವಿಎಚ್ ಪಿ ಸಂಭ್ರಮಾಚರಣೆ

ಬೀದರ. ಜು. 31 : ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್ ನಲ್ಲಿ 2008ರಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್, ಕರ್ನಲ್ ಪ್ರಸಾದ್ ಪುರೋಹಿತ್ ಸೇರಿದಂತೆ ಎಲ್ಲ ಏಳು ಆಪಾದಿತರು ನಿರ್ದೋಷಿ ಎಂದು ರಾಷ್ಟ್ರೀಯ ತನಿಖಾ ದಳದ(ಎನ್ ಐಎ) ವಿಶೇಷ ನ್ಯಾಯಾಲಯ ತೀರ್ಪು ನೀಡಿದ ಹಿನ್ನೆಲೆಯಲ್ಲಿ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗ ದಳದಿಂದ ಬುಧವಾರ ನಗರದಲ್ಲಿ ಸಂಭ್ರಮಾಚರಣೆ ನಡೆಯಿತು.



ಸತ್ಯಮೇವ ಜಯತೆ ಎಂಬುದು ಈ ತೀರ್ಪು ಸಾಬೀತುಪಡಿಸಿದೆ. ದೇಶ ವಿರೋಧಿ ಹಾಗೂ ಸಮಾಜ ವಿರೋಧಿ ಶಕ್ತಿಗಳು ಕೇಸರಿ ಭಯೋತ್ಪಾದನೆ ಎನ್ನುತ್ತ ಬೊಬ್ಬೆ ಹಾಕಿ ಸಮಾಜದಲ್ಲಿ ವಿಷಬೀಜ ಬಿತ್ತಿ, ಅಶಾಂತಿ ಸೃಷ್ಟಿಸುವ ಯತ್ನಕ್ಕೆ ಕೋರ್ಟ ಆದೇಶ ಬ್ರೇಕ್ ಹಾಕಿದೆ. ಇದು ನಮ್ಮ ಸಂವಿಧಾನ ಹಾಗೂ ನ್ಯಾಯಾಂಗ ವ್ಯವಸ್ಥೆ ಮೇಲೆ ಜನರ ನಂಬಿಕೆ ಮತ್ತಷ್ಟು ಗಟ್ಟಿಯಾಗಿಸಿದೆ. ಸಮಸ್ತ ಹಿಂದುಗಳಿಗೆ ಈ ತೀರ್ಪು ಖುಷಿ ತಂದಿದೆ.

–ವೀರಶೆಟ್ಟಿ ಖ್ಯಾಮಾ ವಿಶ್ವ ಹಿಂದು ಪರಿಷತ್ ಜಿಲ್ಲಾ ಅಧ್ಯಕ್ಷ

ಎನ್ ಐಎ ತೀರ್ಪು ಹೊರಬಿದ್ದ ಬೆನ್ನಲ್ಲೇ ನಗರದ ಕೆಇಬಿ ಎದುರಿನ ಹನುಮಾನ ಮಂದಿರದಲ್ಲಿ ಸಂಘಟನೆ ಪ್ರಮುಖರು, ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಎನ್ ಎಐ ಕೋಟ9 ನೀಡಿರುವ ಈ ತೀರ್ಪು ಐತಿಹಾಸಿಕ ಹಾಗೂ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದಾಗಿದೆ ಎಂದು ಬಣ್ಣಿಸಿದರು.

ವಿಶ್ವಹಿಂದು ಪರಿಷತ್ ಜಿಲ್ಲಾ ಅಧ್ಯಕ್ಷ ವೀರಶೆಟ್ಟಿ ಖ್ಯಾಮಾ, ಕಾರ್ಯಾಧ್ಯಕ್ಷ ಸಂಗಮೇಶ ಪಾಟೀಲ್ ಗಾದಗಿ, ಬಜರಂಗ ದಳ ಜಿಲ್ಲಾ ಸಂಯೋಜ–ಕ ಭೀಮಣ್ಣಾ ಸೋರಳ್ಳಿ ಆಣದೂರ ಮಾತನಾಡಿ, ಮಾಲೆಗಾಂವ್ ಬಾಂಬ್ ಸ್ಫೋಟ ಮುಂದಿಟ್ಟುಕೊಂಡು ಕೆಲವರು ಒಂದೂವರೆ ದಶಕದಿಂದ ಹಿಂದು ಮುಖಂಡರು, ಹಿಂದುಪರ ಸಂಘಟನೆಗಳ ಹೋರಾಟಗಾರರು ಹಾಗೂ ಹಿಂದು ಸಮಾಜದ ಪ್ರಮುಖರಿಗೆ ಉಗ್ರವಾದಿ ಪಟ್ಟ ಕಟ್ಟಲೆತ್ನಿಸುತ್ತ ಬಂದಿದ್ದರು. ಇಂತಹ ಢೋಂಗಿ ಹಾಗೂ ಕುತಂತ್ರಿಗಳಿಗೆ ನ್ಯಾಯಾಲಯ ತೀರ್ಪು ತಕ್ಕ ಶಾಸ್ತಿಯಾಗಿದೆ ಎಂದರು.

ಈ ಪ್ರಕರಣದಲ್ಲಿ ಸಿಲುಕಿಸಿ ಸಾಧ್ವಿ ಪ್ರಜ್ಞಾಸಿಂಗ್ ಇತರರಿಗೆ ನಿರಂತರ ಕಿರುಕುಳ ನೀಡಲಾಗಿದೆ. ಸತ್ಯ ಏನೆಂಬುದು ಅರಿಯದೆ ಸ್ಯಾಫ್ರನ್ ಟೆರರಿಸಮ್ ಎಂದು ಹಿಂದು ಸಮಾಜಕ್ಕೆ ಮಸಿ ಬಳಿಯುವ ಕೆಲಸ ಮಾಡಿರುವುದು ಖಂಡನೀಯ.ಸತ್ಯಕ್ಕೆ ಯಾವಾಗಲೂ ಗೆಲುವು ಆಗುತ್ತದೆ ಎಂಬುದಕ್ಕೆ ಈ ತೀರ್ಪು ಸಾಕ್ಷಿಯಾಗಿದೆ. ಎಲ್ಲ ಆರೋಪಿಗಳು ಈ ಪ್ರಕರಣದಲ್ಲಿ ಭಾಗಿಯಾದ ಬಗ್ಗೆ ಯಾವುದೇ ಪುರಾವೆಗಳಿಲ್ಲ ಎಂದು ನ್ಯಾಯಾಲಯ ಸ್ಪಷ್ಟವಾಗಿ ತಿಳಿಸಿರುವುದು ಸುಳ್ಳು ಆರೋಪ ಮಾಡಿದವರ ನಿಜಬಣ್ಣ ಬಯಲು ಮಾಡಿದೆ. ಹಿಂದುಗಳು ಯಾವತ್ತೂ ಸಮಾಜಘಾತುಕ ಕೆಲಸಗಳು ಮಾಡುವುದಿಲ್ಲ. ಭಗವಾ ಯಾವತ್ತೂ ಉಗ್ರವಾದ ಕೆಲಸ ಮಾಡುವುದಿಲ್ಲ. ಭಗವಾ ಕೇವಲ ರಾಷ್ಟ್ರವಾದ, ರಾಷ್ಟ್ರಪರ ಕೆಲಸ ಮಾಡುತ್ತದೆ. ಹಿಂದುಗಳ ವಿರುದ್ಧ ಆರೋಪ ಮಾಡುವವರು ಇನ್ನಾದರೂ ಸುಧಾರಿಸಿಕೊಳ್ಳಲಿ ಎಂದು ಎಚ್ಚರಿಸಿದರು.

ಪ್ರಮುಖರಾದ ಸತೀಶ ನೌಬಾದೆ, ರಮೇಶ ಕುಲಕರ್ಣಿ, ರೋಹಿತ್ ಗುರೂಜಿ, ನರಸಿಂಹ ಕಾರಂತ, ರವೀಂದ್ರ ಕಣಜೆ, ಆಕಾಶ ಕೊಡಗೆ, ಮಹೇಶ ನಿಂಬೂರೆ, ಶಶಿ ಕೋಳಿ, ಸೌರಭ ಜವಳೆ, ಸುಪ್ರೀತ್ ಶಿವಯೋಗಿ, ರಾಮು ಇತರರಿದ್ದರು.

# ಗಾಂಧಿನಗರ ಬಸವೇಶ್ವರ ಮಂದಿರದಲ್ಲಿ ಬಸವೇಶ್ವರ ತೊಟ್ಟಿಲು ಕಾರ್ಯಕ್ರಮ

ಬೀದರ. ಜು. 31: ಶ್ರಾವಣ ಶುದ್ಧ ಪಂಚಮಿಯಂದು ಬಸವೇಶ್ವರರುಲಿಂಗೈಕ್ಯರಾಗುತ್ತಾರೆ. ಅಂದಿನಿಂದ ಬಸವ ಪಂಚಮಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ದಿನ ಬಡವರಿಗೆ, ರೋಗಿಗಳಿಗೆ ಹಾಗೂ ಅಪೌಷ್ಟಿಕತೆ ಹೊಂದಿರುವ ಮಕ್ಕಳಿಗೆ ಹಾಲು ಹಣ್ಣು ವಿತರಿಸಲಾಗುತ್ತದೆ ಎಂದು ಬೆಂಗಳೂರಿನ ಬಸವ ಗಂಗೋತ್ರಿಯ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ನುಡಿದರು.

ರಾಷ್ಟ್ರೀಯ ಬಸವ ದಳ, ಬಸವೇಶ್ವರ ಮಂದಿರ ಅಭಿವೃದ್ಧಿ ಮಂಡಳಿ ಗಾಂಧಿನಗರ, ವಿಶ್ವಧರ್ಮ ಪ್ರವಚನ ಸಮಿತಿ ವತಿಯಿಂದ ಮಂದಿರದ ಆವರಣದಲ್ಲಿ ಆಯೋಜಿಸಿದ ಬಸವಪಂಚಮಿ, ನೀಲಗಂಗಮ್ಮ ತಾಯಿ ಸ್ಮರಣೆ ಹಾಗೂ ಬಸವ ತೊಟ್ಟಿಲೋತ್ಸವದ ದಿವ್ಯಸಾನಿಧ್ಯ ವಹಿಸಿ ಮಾತನಾಡಿದರು.




ಬಸವಾದಿ ಶರಣರ ವಚನಗಳನ್ನು ಪ್ರತಿಯೊಬ್ಬರೂ ಪ್ರತಿದಿನ ಪಠಣ ಮಾಡಬೇಕು. ಅವುಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಬಸವ ತತ್ವಪ್ರಚಾರಕರಾದ ಸಿದ್ರಾಮಪ್ಪಕಪಲಾಪುರೆಮಾತನಾಡಿ ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರು ಆ. 27ರ ವರೆಗೆ ಪ್ರವಚನ ಉಣಬಡಿಸಲಿದ್ದಾರೆ.ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಇದೇ ವೇಳೆ ಬೀದರ ವಿ.ವಿ. ಸಿಂಡಿಕೇಟ್ ಸದಸ್ಯ ನಾಗಭೂಷಣ ಕಮಠಾಣೆ, ಪ್ರಮುಖರಾದ ಕಮಲಾಕರ ಪಾಟೀಲ, ವಿಶ್ವನಾಥ ಪಾಟೀಲ, ನಾಗೇಂದ್ರಪಾಟೀಲ ಸೇರಿದಂತೆ ಕಾಲೋನಿಯ ಮಹಿಳೆಯರು ಉಪಸ್ಥಿತರಿದ್ದರು.

# ಭಕ್ತರಿಗೆ ಹೋಳಿಗೆ ಆದ ಮಹಾಂತ ಜೋಳಿಗೆ

ಕೈಯಲ್ಲಿ ಜೋಳಿಗೆ ಹಿಡಿದು ಕಾಣಿಕೆ ಕೇಳುವವರಿಗೇನು ಈ ನಾಡಿನಲ್ಲಿ ಕಡಿಮೇ ಇಲ್ಲ ಆದರೆ ನಾಡಿನುದ್ದಕ್ಕೂ ಜೋಳಿಗೆ ಹಿಡಿದು ದುಡ್ಡು ದುಗ್ಗಾನಿ ಬೇಡೇನು ನಿಮ್ಮ ಆರೋಗ್ಯ ಹಾಳು ಮಾಡುವ ದುಶ್ಚಟ ನನ್ನ ಜೋಳಿಗೆಗೆ ಹಾಕಿರಿ ಎಂದವರು ಡಾ// ಮಹಾಂತ ಶ್ರೀಗಳು ಮುಂದೆ ಈ ಅಭಿಯಾನ ಮಹಾಂತಜೋಳಗೆ ಎಂದು ನಾಡಿನಾದ್ಯಂತ ಚಿರಪರಿಚಿತವಾಯಿತು

ದುಶ್ಚಟ ಮುಕ್ತ ಈ ನಾಡಿನ ಕನಸು ಕಂಡವರು ಇಲಕಲ್ಲ ವಿಜಯ ಮಾಹಾಂತೇಶ ಮಠದ ಡಾ// ಮಹಾಂತಪ್ಪ ಶ್ರೀಗಳು ಯುವಕರು ಚಟಗಳಿಗೆ ಬಲಿಯಾಗುತ್ತಿರುವುದನ್ನು ಕಣ್ಣಾರೆ ಕಂಡು ನೋಡಲಾಗದೆ ಯುವ ಜನಾಂಗ ದುಶ್ಚಟಗಳಿಂದ ಪಾರು ಮಾಡಲು ಮಹಾಂತ ಜೋಳಿಗೆ ಎಂಬ ಅಭಿಯಾನವನ್ನೇ ಆರಂಭಿಸಿದರು ದುಡ್ಡು ಬೇಡುವ ಸ್ವಾಮೀಜಿಗಳ ನಡುವೆ ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ ಜೋಳಿಗೆ ಹಿಡಿದು ನಿಮ್ಮ ದುಚ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿರಿ ಎಂದು ನಾಡಿನಾದ್ಯಂತ ಸುತ್ತಾಡಿದ ಮಹಾತ್ಮರು ಅವರು ಈ ಸತ್ಕಾರ್ಯಕ್ಕೆ ಮೊದಮೊದಲು ಸಹಕಾರ ಸಿಗದಿದ್ದರೂ ಛಲ ಬಿಡದೆ ಚಲಂಧಕ ಮಲ್ಲರಂತೆ ಸುತ್ತಾಡಿದ್ದರಿಂದ ಹಲವಾರು ಯುವಕರು ದುಶ್ಚಟಗಳಿಂದ ಮುಕ್ತರಾಗಿದ್ದಾರೆ ಶ್ರೀಗಳ ಅಭಿವೃದ್ಧಿ ಕ್ರಮ ಪರಿಗಣಿಸಿದ ರಾಜ್ಯ ಸರ್ಕಾರ ಶ್ರೀಗಳ ಜನ್ಮದಿನ ಆಗಸ್ಟ್ 01 ದುಶ್ಚಟ ಮುಕ್ತ ವ್ಯಸನ ಮುಕ್ತ ದಿನಾಚರಣೆ ಆಚರಿಸುತ್ತಿದೆ ಈ ನಾಡಿಗೆ ಮಾದರಿಯಾಗಿ ಅನೇಕ ಯುವಕರ ಭವಿಷ್ಯ ಬದಲಾಯಿಸಿದ ಮಹಾಂತ ಜೋಳಿಗೆ ನಾಡಿನಾದ್ಯಂತ ಹೆಸರುವಾಸಿಯಾಯಿತು.


ಈ ವರ್ಷ ಶ್ರಾವಣ ಮಾಸದಲ್ಲಿ ಗುರುಮಾಹಾಂತ ಶ್ರೀಗಳು ದುಷ್ಚಚಟದಿಂದ ದೂರಸರಿಸಲು ಮಹಾಂತ ಮಾಲಾಧಾರಣೆ ಮಾಡಿ ಯುವಕರನ್ನು ಚಟಮುಕ್ತರನ್ನಾಗಿ ಮಾಡುವ ಉದ್ದೇಶದಿಂದ ಮಹಾಂತ ಮಾಲಾ ದರಿಸಲು ಯುವಕರು ಪಣತೊಡಬೇಕು ಎಂದು ಈ ಸಲ ಶ್ರಾವಣ ಮಾಸದಿಂದ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ದುಶ್ಚಟ ಮಾಡುವ ಯುವಕರು ಮಹಾಂತ ಮಾಲಾಧಾರಣೆ ಹಾಕುವುದರ ಮೂಲಕ ಸಮಾಜವನ್ನು ದಷ್ಚಟದಿಂದ ದೂರ ಮಾಡುವ ಪಣತೊಟ್ಟು ""ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ"" ಎನ್ನುವಂತೆ ಗುರುವಿನ ದುಚ್ಚಟದ ಜೋಡಿಗೆಯ ಮುಂದುವರಿದ ದುಶ್ಚಟ ಮಾಡುವ ಯುವಕರನ್ನು ಶ್ರೀಮಠಕ್ಕೆ ಕರೆಸಿ ಮಹಾಂತ ಮಾಲಾ ಧಾರಣೆ ಮಾಡುವುದರ ಮೂಲಕ ದ್ವಿಚಟದ ಮುಕ್ತ ಸಮಾಜ ಮಾಡಲು ಪಣ ತೊಟ್ಟಿರುವುದು ಈ ಭಾಗದ ಭಕ್ತರ ಬಾಳಿಗೆ ಬೆಳಕು ನೀಡಿದೆ..

ಇಳಕಲ್ ಶ್ರೀ ಮಠದ ಮಠಾಧಿಪತಿಯಾಗಿ ಪೀಠಾಧಿಪತಿಯಾಗಿ ಬರಿ ಧಾರ್ಮಿಕ ಕೈಂಕರ್ಯಗಳನ್ನು ಮಾಡುತ್ತಾ ಕೂಡಲಿಲ್ಲ ಗುರು ಮೇಲ್ವರ್ಗ ಭಕ್ತ ಕೆಳವರ್ಗ ಎಂದು ಭಾವಿಸಲಿಲ್ಲ ಬಡವರು ಶ್ರೀಮಂತರ ಎಂದು ತಿಳಿಯಲಿಲ್ಲ ಭಕ್ತರು ಮನೆ ಮನೆಗೆ ಹೋಗಿ ಪೂಜೆ ಪ್ರಸಾದ ಸ್ವೀಕರಿಸುವ ಸಂದರ್ಭದಲ್ಲಿ ಕಂಡು ಬಂದ ಒಂದೇ ಒಂದು ಪ್ರಸಂಗ ಅವರನ್ನು ಜೋಳಿಗೆ ಹಿಡಿಯುವಂತೆ ಮಾಡಿದ್ದು ಇಲ್ಲಿ ಸ್ಮರಿಸಬೇಕಿದೆ.

ಹಿಂದಿನ ಪರಂಪರೆ ನಡೆದು ಬಂದ ಆಚರಣೆಗಳು ಎಂಬ ನೆಪದಲ್ಲಿ ಜನತೆ ಮೌಢ್ಯತೆ ಒಳಗಾಗದಿರಲಿ ಎಂದು ಬಸವ ತತ್ವ ಆಚರಣೆ–ಯ ನಡೆಗೆ ತಂದರು ಅಪ್ಪ ಬಸವಣ್ಣನವರ ವಚನಗಳನ್ನು ಬೆನ್ನಿಗೆ ಕಟ್ಟಿಕೊಂಡರಲ್ಲದೆ ಕುಡಿತ ಗುಟ್ಕಾದಂತ ದುಶ್ಚಟಗಳಿಗೆ ಮನೆಯ ಹಿರಿಯರಾಗಲಿ, ವಯಸ್ಕರಾಗಲಿ ಮಕ್ಕಳಾಗಲಿ ಹರಕೆ ಹೊತ್ತು ಹೆತ್ತ ಮಕ್ಕಳಾಗಲಿ, ಒಂದು ಬೇಡಿಕೊಂಡು ಹಡೆದವರು ದುಶ್ಚಟಗಳ ದಾಸರಾದರೆ ಅವರ ಕುಟುಂಬ ವರ್ಗ ಯಾವ ರೀತಿ ಹಾಳಾಗುತ್ತದೆ ಎಂಬ ಸನ್ನಿವೇಶ ಕಣ್ಣಾರೆ ಕಂಡ ಪೂಜ್ಯರು ನಾನು ಭಕ್ತರ ಬದುಕನ್ನು ಹಸನಾಗಿಸುವ ನಿಟ್ಟಿನಲ್ಲಿ ಜೋಳಿಗೆ ಹಿಡಿದು ಭಕ್ತರ ಮನೆಮನೆಗೆ ದುಶ್ಚಟ ಕೇಳಲು ಆರಂಭಿಸಿದರು.

ಶ್ರೀಗಳ ಜೋಳಿಗೆ ಕಂಡ ಅನೇಕ ಭಕ್ತರು, ಜೋಳಿಗೆಯ ಬಗ್ಗೆ ಅಪಹಾಸ್ಯ ಮಾಡಿ ಅವಮಾನಿಸಿದರು ಮಹಾಂತ ಜೋಳಿಗೆ ಹಿಡಿದು ದುಶ್ಚಟ ಕೇಳುವ ಕಾರ್ಯ ಆರಂಭಿಸಿದಾಗ ಅದೆಷ್ಟೋ ಜನತೆ ಶ್ರೀಗಳ ಕಾರ್ಯಕ್ಕೆ ಸಹಕರಿಸದಿರಲಿ ಅದಕ್ಕೆ ಸಹಕರಿಸದವರೇ ಹೆಚ್ಚು ಅವರನ್ನು ಅಪಹಾಸ್ಯ ಮಾಡಿದವರಿಗೆ ಏನು ಕೊರತೆ ಇಲ್ಲ ಆದಾಗ್ಯೂ ಯಾವುದನ್ನು ಲೆಕ್ಕಿಸದೆ ತಾವು ಹಿಡಿದಿದ್ದೆ ಸತ್ಯಮಾರ್ಗ ಎಂದು–ಕೊಂಡು ಬಂದ ಕಷ್ಟವೆಲ್ಲನ್ನು ಬದುಗೊತ್ತಿ ಸಾಗಿ ಬಂದವರು ಮಾರ್ಗ ಸತ್ಯ ಮಾರ್ಗ ಎಂಬ ಸತ್ಯಸಂಗತಿ ಇದೀಗ ಸರ್ಕಾರಕ್ಕೂ ಸಮಾಜಕ್ಕೂ ಯುವಕರಿಗೂ ಮನವರಿಕೆಯಾಗಿದೆ..

ಆಡುವರು ಬಾಳ ಹಾಡಿದಂತೆ ನಡೆಯುವವರು ವಿರಳ ಒಟ್ಟಾರೆ ಆಡದೆ ಆಡುವ ರೂಡಿಯೊಳ



ಉತ್ತಮ ಜನತೆ ಏಳಿಸಿಕೊಳ್ಳದೆ ಮಾಡುವದ ನಿಜಸೇವೆ ಎಂಬ ಸತ್ಯವನರಿತ ಶ್ರೀಮಠದ ಡಾ// ಮಹಾಂತಪ್ಪಗಳು ಬದುಕು ಭವಣೆ ಅವರಲ್ಲಿನ ಸಮಾಜಿಕ ಕಳಕಳಿ ಅವರ ಹೋರಾಟ ಕೊನೆಯ ಕ್ಷಣದವರೆಗೂ ಅವರಲ್ಲಿದ್ದ ಸಮಾಜ ಧಾರ್ಮಿಕ ಕಾರ್ಯಗಳ ಹಾಗೂ ಒರ್ವ ಮಹಿಳೆ ಕಲಿತರೆ ಶಾಲೆಯೊಂದು ತೆರದಂತೆ ಮಕ್ಕಳಲ್ಲಿ ನೀತಿವಂತಿಕೆ ಮೂಡಿಸುವ ಜೊತೆಗೆ ದುಶ್ಚಟಗಳಿಂದ ಆಗುವ ದುಷ್ಪರಿಣಾಮಗಳು ಕುರಿತು ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ ಎಂಬುವುದೇ ಶ್ರೀಗಳ ಸತ್ಕಾರ್ಯ.

ಡಾ//ಮಹಾಂತಪ್ಪಗಳ ಜನ್ಮದಿನ ಆಗಸ್ಟ್ 01 ವ್ಯಸನ ಮುಕ್ತ ದಿನಾಚರಣೆಯನ್ನಾಗಿ ಜಾರಿಗೆ ತರುವಲ್ಲಿ ಅಂದಿನ ಸಚಿವರಾಗಿದ್ದ ರಮೇಶ್ ಕುಮಾರ್ ಅವರು ಪ್ರಯತ್ನ ಕಾರಣ 2017 ರಂದು ಅಂದಿನ ಸರ್ಕಾರ ಬಾಗಲಕೋಟೆ ಜಿಲ್ಲೆಗೆ ಸೀಮಿತಗೊಳಿಸಿ ಆದೇಶ ಹೊರಡಿಸಿತು 2017 ಜುಲೈ 19ರಂದು ಮರು ಆದೇಶ ಹೊರಡಿಸಿ ಅದನ್ನು ರಾಜ್ಯಾದ್ಯಂತ ಆಚರಿಸಲು ಸರ್ಕಾರ ಮರು ಆದೇಶ ಮಾಡಿತು ನಂತರ 2018 ಜುಲೈ 20ರಂದು ಮತ್ತೊಂದು ಇಲಾಖೆಗೆ ವಹಿಸಿ ಸರ್ಕಾರ ಪುನಃ ಆದೇಶ ನೀಡಿತು ನಂತರ 2022 ಮೇ 23 ರಂದು ಸಿಎಂ ಬಸವರಾಜ್ ಬೊಮ್ಮಾಯಿ ಆಚರಣೆಯನ್ನು ರಾಜ್ಯ ಮದ್ಯಪಾನ ಸಂಯಮ ಮಂಡಳಿಗೆ ನಿರ್ವಹಿಸಿ ಪುನಃ ಆದೇಶ ಸರ್ಕಾರ ನೀಡಿ ರಾಜ್ಯದ್ಯಂತ ಆಚರಿಸುವಂತೆ ಮಾಡುವ ಮೂಲಕ ಶ್ರೀಗಳ ಸತ್ಕಾರ್ಯಕ್ಕೆ ಜೀವ ಕಳೆ ತುಂಬಿದಂತಾಗಿದೆ.

ಮನೆಯ ಮೊದಲ ಪಾಠಶಾಲೆ ಜನನಿ ತಾಯಿಯೇ ಮೊದಲ ಗುರು ಎಂಬಂತೆ ಮಕ್ಕಳಲ್ಲಿ ದುಶ್ಚಟಗಳಿಂದ ಆಗುವ ದುಷ್ಪಣಾಮ ಕುರಿತು ಜಾಗೃತಿ ಮೂಡಿಸಲಿ ಎಂಬ ಸಂದೇಶ ಸಾರುವ ಸದುದ್ದೇಶ ಹೊಂದಿದ ಶ್ರೀಮಠ ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಕ ವೃಂದರನ್ನು ಡಾ.ಮಹಾಂತ ಶ್ರೀಗಳ ಜನ್ಮದಿನ ವ್ಯಸನಮುಕ್ತ ದಿನಾಚರಣೆ ದಿನದಂದು ಇಲಕಲ್ಲ ಶ್ರೀಮಠದಲ್ಲಿ ಸತ್ಕರಿಸಿ ಗೌರವಿಸಲಾಗುತ್ತಿದೆ ಮನೆಯ ತಳಪಾಯವಿದ್ದಂತೆ ದುಶ್ಚಟಗಳ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಿದ್ದಲ್ಲಿ ಮಕ್ಕಳ ಬಹುಷ್ಯತ್ತನ ಬದುಕಿನ ಕಟ್ಟಕಡೆಯ ತಳಪಾಯ ಹಾಕಿದಂತೆ ಎಂಬ ಸತ್ವವನ್ನು ಅರಿತ ಮಹಾಂತ ಶ್ರೀಗಳು ಪ್ರತಿರೋಧ ಗುರುಮಹಾಂತ ಶ್ರೀಗಳಲ್ಲಿ ಸಾಮಾಜಿಕ ಕಳಕಳಿ ಹಿನ್ನೆಲೆಯಲ್ಲಿ ಜಿ ಎಸ್ ಗೌಡರ ಶ್ರೀಗಳ ಜನ್ಮದಿನವನ್ನು ವ್ಯಸನ ಮುಕ್ತ ದಿನವನ್ನಾಗಿ ಆಚರಣೆ ತರವಲ್ಲಿ ಸರ್ಕಾರದೊಂದಿಗೆ ನಿರಂತರ ಹೋರಾಟ ನಡೆಸಿದ್ದು ಇಲ್ಲಿ ಸ್ಮರಿಸಬೇಕಿದೆ ಮಹಾಂತ ಜೋಳಿಗೆ ಹಿಡಿದು ಮನೆ ಮನೆಗೆ ತೆರಳಿ ನಾಡಿನಾದ್ಯಂತ ಸುತ್ತಿ ಸರ್ಕಾರ ಮಾಡದ ಕೆಲಸವನ್ನು ಡಾ// ಮಹಾಂತಪ್ಪಗಳು ಐದು ದಶಕಗಳ ಕಾಲ ತಮ್ಮ ಬದುಕಿನ ಉದ್ದಕ್ಕೂ ಮಾಡಿಕೊಂಡು ಬಂದಿದ್ದಾರೆ.

ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಮಹಾಂತ ಜೋಳಿಗೆ ಮೂಲಕ ಅವಿರತವಾಗಿ ಶ್ರಮಿಸಿದ ಲಿಂಗಕ್ಯ ಡಾ// ಮಹಾಂತ ಸ್ವಾಮೀಜಿಗಳವರ ಪರಂಪರೆಯನ್ನು ಚಾಚು ತಪ್ಪದೆ ಮುನ್ನಡೆಸಿಕೊಂಡು ಹೊರಟವರು ಶ್ರೀಮಠದ ಗುರುಮಾಹಾಂತ ಶ್ರೀಗಳು ಹಿರಿಯ ಶ್ರೀಗಳು ನೀಡಿದ ಮಾರ್ಗದರ್ಶನದಂತೆ ನಾಡಿನಾದ್ಯಂತ ಸಂಚರಿಸಿ ಯುವಕರಲ್ಲಿ ದುಶ್ಚಟಗಳ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ ತಾವು ಪಾಲ್ಗೊಳ್ಳುವ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಪ್ರಚುರ ಪಡಿಸುತ್ತಿದ್ದಾರೆ ಮಾಹಾಂತಶ್ರೀಗಳ ಆಶಯ ಕನಸುಗಳನ್ನು ಸಮರ್ಥವಾಗಿ ಗುರುಮಹಾಂತ ಶ್ರೀಗಳು ಮುನ್ನಡೆಸುತ್ತಿದ್ದಾರೆ ಜಗದಗಲ ಮಹಾಂತ ಜೋಳಿಗೆ ಕೀರ್ತಿಯನ್ನು ಶ್ರೀಗಳು ಪಚರಿಸುವಂತೆ ಇವತ್ತಿನವರೆಗೂ ಮಹಾಂತ ಜೋಳಿಗೆ ಅರಿವು ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ರಾಜ್ಯಾದ್ಯಂತ ದುಶ್ಚಟಗಳನ್ನು ದೂರ ಮಾಡಲು ಬೇಕಾದ ಎಲ್ಲಾ ಕ್ರಮಗಳನ್ನು ಗುರುಗಳ ಹಾಕಿಕೊಟ್ಟ ಮಾರ್ಗದರ್ಶನದಲ್ಲಿಯೇ ನಡೆಯುತ್ತಿರುವುದು ಚಿತ್ತರಗಿ ವಿಜಯಮಾಂತೇಶ ಮಠದ ಮತ್ತೊಂದು ಮುಕುಟವೇ ಎಂದರು ತಪ್ಪಾಗಲಾರದು ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿಯೇ ತಮ್ಮ ಭಕ್ತರ ಸೇವೆಯನ್ನು ಸಲ್ಲಿಸುವ ಮತ್ತು ಮಹಾಂತಪ್ಪಗಳ ಮಹಾಂತ ಜೋಳಿಗೆಯ ಜಾಗೃತಿಯನ್ನು ಇಡೀ ನಾಡಿಗೆ ದಂತಕಥೆ ಮಾಡುವಲ್ಲಿ ಸತತವಾಗಿ ಶ್ರಮಿಸುತ್ತಿರುವುದು ಗುರುವಿಗೆ ತೋರಿದ ಶಿಷ್ಯನ ನಿಷ್ಠೆ ನಾಡಿನಾದ್ಯಂತ ಎತ್ತಿ ತೋರಿಸುತ್ತಿದೆ.

ಗುರುವಿನ ಗುಲಾಮನಾಗುವ ತನಕ ದೊರೆಯಣ್ಣ ಮುಕುತಿ ಎನ್ನುವಂತೆ ಗುರುವಿನ ಜೋಳಿಗೆ ಇವತ್ತಿಗೂ ನಾಡಿನಾತ್ಯಂತ ಪಸರಿಸುವುದರ ಜೊತೆಗೆ ತಾವು ತೆರಳುವ ಪ್ರತಿಯೊಂದು ಕಾರ್ಯಕ್ರಮದಲ್ಲಿ ಯುವಕರಿಗೆ ದುಶ್ಚಟಗಳ ಬಗ್ಗೆ ಸಂದೇಶ ಸಾರುತ್ತ ಯುವಕರು ಯಾರು,ದುಶ್ಚಟಕ್ಕೆ ಬಲಿಯಾಗಬಾರದು ಎಂದು ಮನವಿ ಮಾಡಿಕೊಳ್ಳುತ್ತಾರೆ ಮತ್ತು ದುಶ್ಚಟದಿಂದ ಯುವಕರ ಮೇಲೆ ಆಗಿರುವ ಪರಿಣಾಮಗಳನ್ನು ಎಲ್ಲರೂ ಗಮನ ಸೆಳೆಯುವಂತೆ ಮಾರ್ಮಿಕವಾಗಿ ವಿವರಿಸಿ ಅದರಿಂದಾದ ಪರಿಣಾಮದಿಂದ ಕೆಲವು ಯುವಕರು ಅನುಭವಿಸಿದ ತೊಂದರೆಯನ್ನು ಮನನ ಮಾಡುತ್ತಾರೆ ಇಷ್ಟಾಗಿಯೂ ತಾವು ತೆರಳಿರುವ ಕಾರ್ಯಕ್ರಮದ ನಂತರ ಯುವಕರೆಲ್ಲರನ್ನು ಸೇರಿಸಿ ಈಗಾಗಲೇ ದುಶ್ಚಟ ಕಲಿತಿರುವ ಯುವಕರಲ್ಲಿಗೆ ಹೋಗಿ ತಮ್ಮ ಜೋಳಿಗೆ ಹಿಡಿದು ದುಚ್ಚಟ ಮಾಡುವ ಯುವಕರ ಚಟಗಳ ಭಿಕ್ಷೆ ಬೇಡುತ್ತಾರೆ.ಭಕ್ತರ ಮನೆಗೆ ಹೋದಾಗ ಮನೆಯಲ್ಲಿರುವ ಗಂಡಸರನ್ನು ಕರೆದು ನೀವು ನನಗೆ ಒಂದು ದೊಡ್ಡ ಕಾಣಿಕೆಯನ್ನು ಭಿಕ್ಷೆಯಾಗಿ ಕೊಡಬೇಕು ಅಂತ ಕೇಳುತ್ತಾರೆ ಕೆಲವು ಶ್ರೀಮಂತ ಭಕ್ತರು ಆಯ್ತು ಬುದ್ಧಿ ಎಂದು ಒಪ್ಪಿಕೊಳ್ಳುತ್ತಾರೆ ಬಡ ಭಕ್ತರು ಶ್ರೀಗಳು ಎಷ್ಟು ದುಡ್ಡು ಕೇಳುತ್ತಾರೆ ಎನ್ನುವ ಭಯದಲ್ಲಿ ಆಯ್ತು ಬುದ್ಧಿ ನನ್ನ ಕೈಲಿ ಆದಷ್ಟು ಕಾಣಿಕೆ ಕೊಡುತ್ತೇನೆ ಎಂದು ಹೇಳುತ್ತಾರೆ ಆವಾಗ ಭಕ್ತರಲ್ಲಿ ಶ್ರೀಗಳು ಯಾವುದೇ ದುಡ್ಡು ದುಗ್ಗಾನಿ ವಸ್ತು ಕೇಳದೆ ನಿಮ್ಮಲ್ಲಿರುವ ದುಶ್ಚಟ ನನ್ನ ಜೋಳಿಗೆ ಹಾಕಿರಿ ಅದೇ ನನಗೆ ನೀವು ನೀಡುವ ದೊಡ್ಡ ಕಾಣಿಕೆ ಎಂದು ಹೇಳಿ ತಾವು ತೆರಳಿದ ಭಕ್ತರ ಮನೆಯಲ್ಲಿ ದುಶ್ಚಟ ಮಾಡುವವರಿದ್ದರೆ ಅವರನ್ನು ಕರೆದು ಚಟಗಳನ್ನು ನನ್ನ ಜೋಳಿಗೆಗೆ ಹಾಕಿರಿ ಎಂದು ದುಶ್ಚಟಗಳ ಮುಕ್ತ ಕುಟುಂಬವನ್ನಾಗಿ ಮಾಡಿದ್ದಾರೆ ಹೀಗೆ ಗುರುಗಳ ಅಪ್ಪಣೆಯಿಂದ ಜೋಳಿಗೆ ಮುನ್ನಡೆಸಿಕೊಂಡು ಹೋಗುತ್ತಿರುವ ಗುರು ಮಹಾಂತ ಶ್ರೀಗಳು ಗುರುಗಳ ಜೋಳಿಗೆ ಭಕ್ತರ ಬಾಳಿಗೆ ಹೋಳಿಗೆಯಾಗಿ ಪರಿವರ್ತನೆ ಆಗಿದೆ ಅದೆಷ್ಟೋ ಭಕ್ತರ ಉದ್ದಾರ ಮಾಡಿ ತಂದೆ ತಾಯಿ ಹೆಂಡರು ಮಕ್ಕಳು ಕುಟುಂಬದೊಂದಿಗೆ ನೆಮ್ಮದಿಯಿಂದ ಬಾಳುವಂತೆ ಮಾಡಿ ಗುರುವಿನ ಪರಂಪರೆಯನ್ನು ಇವತ್ತಿಗೂ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.



–ಜಗದೀಶ.ಎಸ್.ಗಿರಡ್ಡಿ.
ಲೇಖಕರು
ಮೊ.9902470856.

---

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಬೃಹತ್ ಪ್ರತಿಭಟನೆ ಆಗಸ್ಟ್ 18 ರಂದು

## ಮಾದಿಗರ ಮಹಾ ಯುದ್ದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕಾಶಪ್ಪ ಹೆಗ್ಗಣಗೇರಾ ಕರೆ.



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಒಳ ಮೀಸಲಾತಿ ವಿಳಂಬ ನೀತಿ ಅನುಸರಿಸುತ್ತಿರುವ ಸರಕಾರದ ವಿರುದ್ಧ ಮಾದಿಗರ ಮಹಾಯುದ್ಧ ಮುಂಬರುವ ಆಗಸ್ಟ್ 18 ರಂದು ಹಮ್ಮಿಕೊಂಡಿದ್ದು, ಈ ಸಮಾವೇಶದ ಸಿದ್ದತೆ ಕುರಿತಾದ ಪೂರ್ವಭಾವಿ ಸಭೆ ಆಯೋಜಿಸಲಾಗಿತ್ತು.

ಮಾದಿಗ ದಂಡೋರ ರಾಜ್ಯ ಕಾರ್ಯದರ್ಶಿ ಹಾಗೂ ಯಾದಗಿರಿ ಜಿಲ್ಲಾ ಅಧ್ಯಕ್ಷರಾದ ಕಾಶಪ್ಪ ಹೆಗ್ಗಣಗೇರಾ ಮಾತನಾಡಿ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ರಾಜ್ಯ ಸರ್ಕಾರದ ವಿರುದ್ಧ ಮುಂಬರುವ ಆಗಸ್ಟ್ 18 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಎಮ್ ಆರ್ ಪಿ ಎಸ್ ರಾಜ್ಯಾಧ್ಯಕ್ಷರಾದ ಬಿ. ನರಸಪ್ಪ ದಂಡೋರವರ ನಾಯಕತ್ವದಲ್ಲಿ ಸರಕಾರದ ಮಂದಗತಿ ದೊರಣೆ ಖಂಡಿಸಿ ಹೊರಟ ಹಮ್ಮಿಕೊಂಡಿದ್ದು,

ಮುಖ್ಯ ಅತಿಥಿಗಳಾಗಿ ಅಗಮಿಸುತ್ತಿರುವ ಅಭಿನವ ಅಂಬೇಡ್ಕರ್ ಎಂದು ಕರೆಯಲ್ಪಡುವ ಪದ್ಮಶ್ರೀ ಮಂದಕೃಷ್ಣ ಮಾದಿಗರವರು ಈ ಹೋರಾಟ ಭಾಗವಹಿಸಲಿದ್ದಾರೆ, ಈ ಹೋರಾಟಕ್ಕೆ ಯಾದಗಿರಿ ಜಿಲ್ಲೆಯ ಹಾಗೂ ಗುರುಮಠಕಲ್ ತಾಲೂಕಿನ ಎಲ್ಲಾ ಪದಾಧಿಕಾರಿಗಳು ಮನವಿ ಮಾಡಿದರು.

ಈ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲಾ ಸಂಘದ ಪದಾಧಿಕಾರಿಗಳು ಹಾಗೂ ಜಿಲ್ಲಾಧ್ಯಕ್ಷರು, ತಾಲ್ಲೂಕು ಅಧ್ಯಕ್ಷರುಗಳು, ಹೋಬಳಿ ಗ್ರಾಮದ ಘಟಕದ ಅಧ್ಯಕ್ಷರುಗಳು ಮತ್ತು ಮಾದಿಗ ಸಮಾಜದ ಬಂಧುಗಳು ಭಾಗವಹಿಸುತ್ತಿದ್ದು, ಸಂಪೂರ್ಣವಾದ ಬೆಂಬಲ ನೀಡುವದಾಗಿ ಎಮ್ ಆರ್ ಪಿ ಎಸ್ ತಾಲೂಕಿನ ಅಧ್ಯಕ್ಷರು ರವಿ ಬುರನೊಳ ತಿಳಿಸಿದರು. ಈ ಸಭೆಯಲ್ಲಿ ಜಿಲ್ಲೆಯ ಉಪಾಧ್ಯಕರಾದ ಆಶನ್ನ ಬುದ್ಧ, ಮಲ್ಲು ಬೆಳಗೇರ, ಗುರುಮಠಕಲ್ ತಾಲೂಕಿನ ಗೌರವಧ್ಯಾಕ್ಷ ವೆಂಕಟೇಶ್, ಉಪಾಧ್ಯಕ್ಷ ಶರಣು ಅಮ್ಮಪಲ್ಲಿ, ಕಾರ್ಯದರ್ಶಿ ನಾಗೇಶ್, ಶಾಂತಪ್ಪ ಸೈದಾಪುರ್, ರಮೇಶ್ ಜ್ಞಾನವೃಕ್ಷ, ಅನಂತಪ್ಪ ಮುಕುಡಿ, ಭೀಮು ಗೂಡ್ಸೆ. ಭೀಮಶೆಂಕರ್ ಎಂ ಟಿ ಪಲ್ಲಿ ಗ್ರಾಮ ಘಟಕ ಅಧ್ಯಕ್ಷ ವೆಂಕಟೇಪ್ಪ ಮಲ್ಲಾಪುರ ಗ್ರಾಮ ಘಟಕ ಅಧ್ಯಕ್ಷರ ಪರಮಪ್ಪ ಕಾಕಲವಾರ ಉಪಾಧ್ಯಕ್ಷರು ರವಿ ಮಿನಿಗೇರಿ ಎಂ ಟಿ ಪಲ್ಲಿ ಭೀಮ್ ಗಿರಿ ಗ್ರಾಮ ಘಟಕ ಅಧ್ಯಕ್ಷ, ಉಮೇಶ್ ಗ್ರಾಮ ಘಟಕ ಅಧ್ಯಕ್ಷ ಚಂಡರಿಕಿ ಹಾಗೂ ಇನ್ನು ಮಾದಿಗ ದಂಡೂರ ಪದಾಧಿಕಾರಿಗಳು ಭಾಗವಹಿಸಿದ್ದರು.

---

## ಗುರುಮಠಕಲ್:'ಇಂದಿರಾ ಕ್ಯಾಂಟೀನ್' ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್: ದಿನಗಳಲ್ಲಿ ಶ್ರಮಿಕ ವರ್ಗ ಹಾಗೂ ಬಡವರಿಗೆ ಹಸಿದ ಹೊಟ್ಟೆಗೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಊಟ, ಉಪಾಹಾರ ಸಿಗುವುದರಿಂದ ಹೆಚ್ಚು ಅನುಕೂಲವಾಗಲಿದೆ

ಪಟ್ಟಣದ ಬಸವೇಶ್ವರ ವೃತ್ತದ ಹಳೆ ನಾಡ ಕಛೇರಿ ಆವರಣದಲ್ಲಿ ನೂತನ 'ಇಂದಿರಾ ಕ್ಯಾಂಟೀನ್' ಕಟ್ಟಡವನ್ನು ಉದ್ಘಾಟಿಸಿದರು , ಬಡವರು, ಕಾರ್ಮಿಕರಿಗೆ, ಕೂಲಿಕಾರರಿಗೆ ಬೆಳಗ್ಗೆ 5 ರೂಪಾಯಿ.ಟಿಫನ್ . ಮತ್ತು ಮಧ್ಯಾಹ್ನದ ಸಮಯ ಹಾಗೂ ರಾತ್ರಿ10 ರೂಪಾಯಿಗೆ ಊಟ ದೊರೆಯಲಿದೆ. ಕೆಲಸ ಕಾರ್ಯದ ನಿಮಿತ್ತ ಬಂದ ಜನರಿಗೆ ಒಂದು ದಿನದಲ್ಲಿ 3 ಹೊತ್ತು ಆಹಾರ ಪಡೆಯಬಹುದಾಗಿದೆ .

ಉದ್ಘಾಟನೆಯಾದ ಎರಡು ಗಂಟೆಗಳ ನೋಡಿದರೆ ಮಧ್ಯಾಹ್ನದ ಊಟ ಮಾಡಬೇಕೆಂದವರಿಗೆ ಬೀಗ ಹಾಕಿ ಅಚ್ಚರಿ ಮೂಡಿಸಿದ್ದರು. ಅಧ್ದೂರಿಯಾಗಿ ಉದ್ಘಾಟನೆ ಮಾಡಿದ ಒಂದೇ ಗಂಟೆಯಲ್ಲಿ ಆಹಾರ ಖಾಲಿ, ಉದ್ಘಾಟನೆಗೊಳಿಸಿ ಬೀಗ ಹಾಕಿದ್ದನ್ನು ಕಂಡು ವಿದ್ಯಾರ್ಥಿಗಳು, ಕ್ಯಾಂಟೀನ್ ಹತ್ತಿರ ಊಟ ಮಾಡಲು ಬಂದ ಜನರು, ಬಂದು ನಿರಾಸೆಯಿಂದ ಹೋಗುವುದು ದೃಶ್ಯ ಕಂಡು ಬಂದಿತು. ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡಿ ಇಂದಿರಾ ಕ್ಯಾಂಟೀನ ಲೋಕಾರ್ಪಣೆ ಮಾಡಿದ ದಿನವೇ ಹೀಗೆ ಆದರೆ ಜನರಿಗೆ ಊಟ ಸಿಗದಿರುವುದು ಆಚ್ಚರಿಯ ಸಂಗತಿ ಹೀಗೆ ಆದರೆ ಬರುವ ದಿನಗಳಲ್ಲಿ ಇದರ ನಿರ್ವಹಣೆ ಹೇಗೆ ಎಂದು ಊಟಕ್ಕಾಗಿ ಬಂದಿರುವ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದರು.

ಆತುರದಲ್ಲಿ ಉದ್ಘಾಟನೆ ಸದಸ್ಯರು ಸೇರಿದಂತೆ ಆಡಳಿತ ಅಧಿಕಾರಿಗಳಿಗೆ ಬೇಸರ: ಅಧ್ದೂರಿಯಾಗಿ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಿದ ಪುರಸಭೆ, ತಾಲೂಕಿನ ಎಲ್ಲಾ ಆಡಳಿತ ತಹಸಿಲ್ದಾರ, ಇಓ, ಪೋಲಿಸ್ ಇಲಾಖೆ ಹಾಗೂ ವಿವಿಧ ಇಲಾಖೆಗೆ ಆಹ್ವಾನ ನೀಡಿತ್ತು ಆದರೆ ಅಧಿಕಾರಿ ಹಾಗೂ ಪುರಸಭೆಯ ಕೆಲ ಸದಸ್ಯರ ಬರುವ ಮುಂಚೆಯೆ ಆತುರದಲ್ಲಿ ಬೆಳಿಗ್ಗೆ ಕೊಟ್ಟಿರುವ ಸಮಯಕ್ಕಿಂತ ಮುಂಚೆ ಏಕಾಏಕಿ ಉದ್ಘಾಟನೆ ಜರುಗಿತು. ತಾಲೂಕ ದಂಡಾಧಿಕಾರಿಗಳು ಬಂದು ಕೆಲಕಾಲ ತಬ್ಬಿಬ್ಬಾದಂತಹ ಪರಿಸ್ಥಿತಿ ಏರ್ಪಟ್ಟಿತು

ಪುರಸಭೆ ಮುಖ್ಯಾಧಿಕಾರಿ ಭಾರತಿ.ದಂಡೋತಿ .

ಉಪಾಧ್ಯಕ್ಷೆ ರೇಣುಕಾ ಪಡಿಗೆ, ಸದಸ್ಯರಾದ ಸೇರಿದಂತೆ ಇತರರು ಇದ್ದರು.

---

## ನವಿಜಿ8–ಕಟ್ಟಡ ಸಾಮಗ್ರಿಗಳ ಪ್ರದರ್ಶನ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಬೆಂಗಳೂರಿನ ಲೀಲಾ ಭಾರತೀಯನಗರದಲ್ಲಿ ನವಿಜಿ8–ಕಟ್ಟಡ ಸಾಮಗ್ರಿಗಳ ಪ್ರದರ್ಶನವನ್ನು ಕ್ರೆಡೈ ಕರ್ನಾಟಕದ ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಅವರು ಉದ್ಘಾಟಿಸಿ ಮಾತನಾಡುತ್ತಾ ರಿಯಲ್ ಎಸ್ಟೇಟ್‌ನಲ್ಲಿ, ಸಹಯೋಗವು ಕೇವಲ ಒಂದು ಪದವಲ್ಲ ಅದು ಸಾಧನೆಯ ಅಡಿಪಾಯ ರಿಯಲ್ ಎಸ್ಟೇಟ್ ಅನ್ನು ಇನ್ನೂ ಅಧಿಕೃತವಾಗಿ ಉದ್ಯಮವೆಂದು ಗುರುತಿಸಲಾಗಿಲ್ಲವಾದರೂ, ಅದು ಗಮನಾರ್ಹ ರೂಪಾಂತರಕ್ಕೆ ಒಳಗಾಗಿದೆ ಎಂದು ನವಿಜಿ8 ಕಾರ್ಯಕ್ರಮದಲ್ಲಿ ನೆರೆದಿದ್ದ ಬಿಲ್ಡರ್‌ಗಳು ಮತ್ತು ಡೆವಲಪರ್‌ಗಳ ಭ್ರಾತೃತ್ವವನ್ನು ರಿಯಲ್ ಎಸ್ಟೇಟ್ ಅನ್ನು ಇನ್ನೂ ಅಧಿಕೃತವಾಗಿ ಉದ್ಯಮವೆಂದು ಗುರುತಿಸಲಾಗಿಲ್ಲವಾದರೂ, ಅದು ಗಮನಾರ್ಹ ರೂಪಾಂತರಕ್ಕೆ ಒಳಗಾಗಿದೆ ಎಂದು ಹೇಳಿದರು.

ಇದು ಹಿಂದೆಂದಿಗಿಂತಲೂ ಹೆಚ್ಚು ಸಂಘಟಿತ, ಪಾರದರ್ಶಕ, ವೃತ್ತಿಪರ ಮತ್ತು ಜವಾಬ್ದಾರಿಯುತವಾಗಿದೆ. 2014 ರಲ್ಲಿ 200 ಬಿಲಿಯನ್ ಮಾರುಕಟ್ಟೆಗಾತ್ರದಿಂದ, ಭಾರತೀಯ ರಿಯಲ್ ಎಸ್ಟೇಟ್ ವಲಯವು ಇಂದು 650 ಬಿಲಿಯನ್‌ಗಿಂತಲೂ ಹೆಚ್ಚು ಬೆಳೆದಿದೆ ಮತ್ತು 2030 ರ ವೇಳೆಗೆ 1 ಟ್ರಿಲಿಯನ್ ತಲುಪುವ ನಿರೀಕ್ಷೆಯಿದೆ. ಈ ಪ್ರಭಾವಶಾಲಿ ಪಥವು ಆರ್ಥಿಕ ಬೆಳವಣಿಗೆಯನ್ನು ಮಾತ್ರವಲ್ಲದೆ ವಲಯದಲ್ಲಿ ಹೆಚ್ಚುತ್ತಿರುವ ನಂಬಿಕೆಯನ್ನು ಸಹ ಪ್ರತಿಬಿಂಬಿಸುತ್ತದೆ.

ಹೋಮ್‌ಬೈಯರ್ಸ್ ಟುಡೇ ಹೆಚ್ಚು ಮಾಹಿತಿಯುಕ್ತ ಮತ್ತು ವಿವೇಚನಾಶೀಲವಾಗಿದೆ. ಅವರ ಆಕಾಂಕ್ಷೆಗಳು ಮತ್ತು ನಿರೀಕ್ಷೆಗಳು – ವಿಶೇಷವಾಗಿ ಕೋವಿಡ್ ನಂತರದ ಯುಗದಲ್ಲಿ ವಿನ್ಯಾಸ, ವಿನ್ಯಾಸ, ಸೌಕರ್ಯಗಳು ಅಥವಾ ಯೋಗಕ್ಷೇಮದ ವಿಷಯದಲ್ಲಿ ಎಂದಿಗಿಂತಲೂ ಸ್ಪಷ್ಟವಾಗಿದೆ. ಈ ವಿಕಸನಗೊಳ್ಳುತ್ತಿರುವ ಪರಿಸ್ಥಿತಿಗಳಲ್ಲಿ, ಸಹಯೋಗವು ಮೌಲ್ಯಯುತವಾಗುತ್ತದೆ ಅದು ಅತ್ಯಗತ್ಯವಾಗುತ್ತದೆ. "ಒಟ್ಟಿಗೆ ಬರುವುದು ಒಂದು ಆರಂಭ ಒಟ್ಟಿಗೆ ಇರುವುದು ಪ್ರಗತಿ ಒಟ್ಟಿಗೆ ಕೆಲಸ ಮಾಡುವುದು ಯಶಸ್ಸು" ಎಂಬ ಮಾತಿನಂತೆ. ರಿಯಲ್ ಎಸ್ಟೇಟ್‌ನಲ್ಲಿ, ಸಹಯೋಗವು ಕೇವಲ ಒಂದು ಪದವಲ್ಲ ಅದು ಸಾಧನೆಯ ಅಡಿಪಾಯ ಎಂದು ಅವರು ಪುನರುಚ್ಚರಿಸಿದರು. ನಾವು ಆಸ್ತಿಗಳನ್ನು ಅಭಿವೃದ್ಧಿಪಡಿಸುತ್ತಿರಲ್ಲಿ, ಒಪ್ಪಂದಗಳನ್ನು ಮುಕ್ತಾಯಗೊಳಿಸುತ್ತಿರಲ್ಲಿ ಅಥವಾ ನೆರೆಹೊರೆಗಳನ್ನು ಪುನರುಜ್ಜೀವನಗೊಳಿಸುತ್ತಿರಲ್ಲಿ, ಯಶಸ್ಸು ಆಸ್ತಿ ಸಲಹೆಗಾರರು, ಅಭಿವರ್ಧಕರು, ಯೋಜನಾ ವಾಸ್ತುಶಿಲ್ಪಿಗಳು, ಭೂದೃಶ್ಯ ವಾಸ್ತುಶಿಲ್ಪಿಗಳು, ರಚನಾತ್ಮಕ ವಿನ್ಯಾಸಕರು, ಸೇವಾ ಸಲಹೆಗಾರರು, ಹಣಕಾಸು ಸಂಸ್ಥೆಗಳು, ನಗರ ಅಧಿಕಾರಿಗಳು ಸೇರಿದಂತೆ ವಿವಿಧ ವಿಭಾಗಗಳಾದ್ಯಂತ ವೃತ್ತಿಪರರನ್ನು ಒಗ್ಗೂಡಿಸುವುದರ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ನಾವು ಹೆಚ್ಚಿನ ಪರಿಣಾಮವನ್ನು ಯೋಜಿಸುವುದಿಲ್ಲ ಮತ್ತು ನಾವು ನಿರಂತರ ಮೌಲ್ಯವನ್ನು ರಚಿಸಿದಾಗ, ಸಮುದಾಯ ನಂಬಿಕೆಯನ್ನು ಬಲಪಡಿಸಿದಾಗ ಮತ್ತು ನಾವೀನ್ಯತೆಯನ್ನು ಹುಟ್ಟುಹಾಕಿದಾಗ. ವೈಯಕ್ತಿಕ ಸಾಮರ್ಥ್ಯಗಳನ್ನು ಬೆಳವಣಿಗೆಗೆ ಸಾಮೂಹಿಕ ಶಕ್ತಿಯಾಗಿ ಪರಿವರ್ತಿಸುವಲ್ಲಿ ಸಹಯೋಗದ ಶಕ್ತಿ ಇದೆ ಎಂದು ಪುನರುಚ್ಚರಿಸಿದರು. ಎಂದರು.

ಕ್ರೆಡೈ ಕರ್ನಾಟಕದ ಅಧ್ಯಕ್ಷ ಎಂ.ಡಿ. ರಫಿಯುದ್ದೀನ್, ಕ್ರೆಡೈ ಕಲಬುರಗಿ ಅಧ್ಯಕ್ಷ ಅಶ್ಫಾಕ್ ಅಹ್ಮದ್, ಕ್ರೆಡೈ ಕರ್ನಾಟಕದ ಉತ್ತರ ವಿಭಾಗದ ಉಪಾಧ್ಯಕ್ಷ ಉದಯಶಂಕರ್ ಶೆಟ್ಟಿ, ಕ್ರೆಡೈ ಕಲಬುರಗಿ ಕಾರ್ಯದರ್ಶಿ ಮಧುಸೂದನ್ ಮಾಲು, ಕ್ರೆಡೈ ಕರ್ನಾಟಕದ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಸಂಜೋಗ್ ರಾಠಿ ಅವರು ರಿಯಲ್ ಎಸ್ಟೇಟ್ ವಲಯಕ್ಕೆ ಸಂಬಂಧಿಸಿದ ಇತ್ತೀಚಿನ ತಂತ್ರಜ್ಞಾನ/ಸುಧಾರಿತ ಉತ್ಪನ್ನಗಳನ್ನು ಪ್ರದರ್ಶಿಸಿದ ಮೇಲಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಏತನ್ಮಧ್ಯೆ, ಕಲಬುರಗಿಯಲ್ಲಿ ಜುಲೈ 29, 2025 ರಂದು, ಕಲಬುರಗಿ ಜಿಲ್ಲೆಯ ಗೌರವಾನ್ವಿತ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯ ಅಡಿಯಲ್ಲಿ ಗ್ರಾಮೀಣ ನೀರು ಸರಬರಾಜು ವಿಭಾಗಕ್ಕೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳನ್ನು ಜ್ಞಾಪಕ ಪತ್ರದಲ್ಲಿ ವಿವರಿಸಲಾಗಿದೆ.

ಜ್ಞಾಪಕ ಪತ್ರದಲ್ಲಿ ತಿಳಿಸಲಾದ ಪ್ರಾಥಮಿಕ ಕಾಳಜಿಯು ಆರ್‌ಡಿಪಿಆರ್ ವ್ಯಾಪ್ತಿಗೆ ಬರುವ ಪುರಸಭೆಯ ನಿಗಮಗಳ ಮಿತಿಯ ಹೊರಗೆ ಇರುವ ರಿಯಲ್ ಎಸ್ಟೇಟ್ ಯೋಜನೆಗಳ ವಿನ್ಯಾಸ ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದೆ. ಈ ಪ್ರದೇಶಗಳಲ್ಲಿ ಅಭಿವೃದ್ಧಿಯನ್ನು ಸುಗಮಗೊಳಿಸಲು ಮಧ್ಯಪ್ರವೇಶಿಸಿ ಅಗತ್ಯ ಆಡಳಿತಾತ್ಮಕ ಮತ್ತು ನೀತಿ ಕ್ರಮಗಳನ್ನು ಸುಗಮಗೊಳಿಸುವಂತೆ ಕ್ರೆಡೈ ಕಲಬುರಗಿ ಅವರು ಗೌರವಾನ್ವಿತ ಸಚಿವರನ್ನು ವಿನಂತಿಸಿದರು.

---

ಕುರಕುಂದಾ ಗ್ರಾಮಕ್ಕೆ ಶಾಸಕರ ಭೇಟಿ.

## ಮೃತ ಮಕ್ಕಳಿಗೆ ಅಂತಿಮ ನಮನ ಸಲ್ಲಿಸಿ, ಸಾಂತ್ವನ ಹೇಳಿದರು.



ಮಲ್ಲಮ್ಮ ನುಡಿ ವಾರ್ತೆ


ಯಾದಗಿರಿ: ಬೆಂಗಳೂರಿನಲ್ಲಿ ಮೃತ ಪಟ್ಟ ಯಾದಗಿರಿ ಮತಕ್ಷೇತ್ರ ಕುರಕುಂದಾ ಗ್ರಾಮದ ಚಾಂದಪಾಶಾ ಎಂಬುವವರ ಮಕ್ಕಳ ಕಳಬರಹಕ್ಕೇ ಅಂತಿಮ ನಮನ ಸಲ್ಲಿಸಿದ ಶಾಸಕ ಚನ್ನಾರಡ್ಡಿ ಪಾಟೀಲ್ ಅವರು, ಚಿಕ್ಕ ಮಕ್ಕಳ ಸಾವು ದುಖಃ ತಂದಿದೆ. ಹೆತ್ತವರ ಮುಂದೆ ಮಕ್ಕಳು ಸಾಯಿಬಾರದು, ಆ ದುಖಃಕ್ಕೆ ಕೊನೆಯೇ ಇಲ್ಲ, ಆದರೂ ಧೈರ್ಯದಿಂದ ಇದ್ದು ಜೀವನ ನಡೆಸಿರಿ ಎಂದು ಸಾಂತ್ವನ ಹೇಳಿದರು.

ಗ್ರಾಮದ ಅವರ ಮನೆಗೆ ತೆರಳಿದ್ದ ಶಾಸಕರು ಮಕ್ಕಳನ್ನು ಕಳೆದಕೊಂಡ ಹೆತ್ತವರ ದುಖಃ ಕಂಡು ಮರುಗಿದರು. ನಾನು ಮಾಡುವ ಈ ವೈಯಕ್ತಿಕ ಸಹಾಯ ದೊಡ್ಡದಲ್ಲ, ಈ ಬಗ್ಗೆ ಸಿಎಂ ಗಮನಕ್ಕೆ ತಂದು ಹೆಚ್ಚಿನ ಸಹಾಯ ಮಾಡುವ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುವುದೆಂದರು. ಈ ವೇಳೆ ಕಾಸೀಮ ಮುತ್ತ್ಯಾ, ಡಾ. ರಾಜು ಬೆಳಗೇರಿ, ಕಾಶೀಮ್ ಗುಲಾಮಿ, ಮಕಧುಮ್, ಶರಣಬಸವ ಕುರಕುಂದಿ, ಮೆಹಬೂಬ್, ಶರಣ ಗೌಡ, ಬಸನಗೌಡ, ಅಂಬ್ರೆಷ್, ರಫಿ ಬೆಳಗೇರ, ಮೋಸಪ್ಪಾ, ಹಾಗೂ ಕುರಕುಂದಿ ಗ್ರಾಮಸ್ಥರು ಇದ್ದರು.

## ಇಂದು ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆಯ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆಯ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಆಗಸ್ಟ್ 01 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣ ಹೊಂಗಿರಣದಲ್ಲಿ ಆಯೋಜಿಸಲಾಗಿದೆ.



ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝುಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ,ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ,ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಸತ್ಯಂ ಶಿಕ್ಷಕರ ಶಿಕ್ಷಣ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆಲಂಬಾಷ ಅವರು ಕಾರ್ಯಕ್ರಮ ಕುರಿತು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಬಳ್ಳಾರಿ ಹಿಂದೂಸ್ತಾನಿ ಗಾಯಕ ನಾಗಭೂಷಣ ಬಾಪುರೆ ಅವರಿಂದ ವಚನ ಸಂಗೀತ ಪ್ರಸ್ತುತಪಡಿಸುವರು. ಬಳ್ಳಾರಿಯ ಅಮಾತಿ ಬಸವರಾಜ್ ಕಾರ್ಯಕ್ರಮ ನಿರೂಪಿಸುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ.ತುಕಾರಾಂ ರಾವ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಇಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯಲ್ಲಿ 110/11ಕೆ.ವಿ ವಿದ್ಯುತ್ ಲೈನುಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಆ.01ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ಎಫ್–6 ವ್ಯಾಪ್ತಿಯ ನಗರದ ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ಎಸ್.ಪಿ.ಸರ್ಕಲ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಸಂಡೂರು: ಫಿಜಿಯೋಥೆರಪಿಸ್ಟ್, ಸಹಾಯಕಿ ಹುದ್ದೆಗಳ ನೇಮಕಕ್ಕಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಪ್ರಸ್ತಕ ಸಾಲಿಗೆ ಸಂಡೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿ ವ್ಯಾಪ್ತಿಯಲ್ಲಿ ವಿಶೇಷ ಚೇತನ ಮಕ್ಕಳಿಗೆ ಫಿಜಿಯೋಥೆ–ರಪಿ ಚಿಕಿತ್ಸೆ ನೀಡಲು ಒಂದು ಫಿಜಿಯೋಥೆರಪಿಸ್ಟ್ ಹುದ್ದೆ ಹಾಗೂ ಎಸ್‌ಆರ್‌ಪಿ ಕೇಂದ್ರದ ವೈದ್ಯರ ಸಹಾಯಕ್ಕಾಗಿ ಒಬ್ಬ ಮಹಿಳಾ ಸಹಾಯಕಿಯರ ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ 08 ತಿಂಗಳ ಅವಧಿಗೆ ತಾತ್ಕಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಗಸ್ಟ್ 04 ಕೊನೆಯ ದಿನ. ವಿದ್ಯಾರ್ಹತೆ: ವೈದ್ಯರ ಹುದ್ದೆಗೆ ಬ್ಯಾಚುಲರ್ ಆಫ್ ಫಿಜಿಯೋಥೆರಪಿ ಅಥವಾ ಡಿಪ್ಲೋಮಾ ಆಫ್ ಫಿಜಿಯೋಥೆರಪಿ ಆಗಿರಬೇಕು. ಮಹಿಳಾ ಸಹಾಯಕಿ ಹುದ್ದೆಗೆ 07 ತರಗತಿ ಉತ್ತೀರ್ಣರಾಗಿರಬೇಕು.

ಆಸಕ್ತ ಅಭ್ಯರ್ಥಿಗಳು ತಮ್ಮ ಅಗತ್ಯ ದಾಖಲೆಗಳೊಂದಿಗೆ ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿ, ಬಿಆರ್‌ಸಿ ಕಚೇರಿ, ಸಂಡೂರು ಇಲ್ಲಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.9945113304,9900240450 ಗೆ ಸಂಪರ್ಕಿಸಬಹುದು ಎಂದು ಸಂಡೂರು ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುರೇಕುಪ್ಪ ಪುರಸಭೆ: ಜಮೀನು ಖರೀದಿಗಾಗಿ ಅರ್ಹರಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಕುರೇಕುಪ್ಪ ಪುರಸಭೆ ವತಿಯಿಂದ ಕುರೇಕುಪ್ಪ ಪಟ್ಟಣದ ವ್ಯಾಪ್ತಿಗೆ ಒಳಪಡುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಜನಾಂಗದವರಿಗೆ ಹಾಗೂ ಪುರಸಭೆಯ ಪೌರಕಾರ್ಮಿಕರಿಗೆ ನಿವೇಶನ ಒದಗಿಸುವ ನಿಟ್ಟಿನಲ್ಲಿ ಕುರೇಕುಪ್ಪ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ ಜಮೀನುಗಳಿಗೆ ಸಂಬಂಧಿಸಿದ ಅಸಕ್ತಿಯುಳ್ಳ ಜಮೀನು ಮಾಲೀಕರಿಂದ ಜಮೀನು ಖರೀದಿಗಾಗಿ ಅರ್ಜಿ ಅಹ್ವಾನಿಸಲಾಗಿದೆ.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಮುನಿಸಿಪಾಲಿಟಿ ಯೋಜನೆ ಹಂತ–4ರಲ್ಲಿ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಅನುದಾನದಲ್ಲಿ ಶೇ 24.10 ಯೋಜನೆಯಡಿ ಈ ಸೌಲಭ್ಯ ಒದಗಿಸಲಾಗುತ್ತಿದ್ದು, ಪುರಸಭೆಯ ಕಚೇರಿಯ ಅವಧಿಯಲ್ಲಿ ಸಂಬಂಧಿಸಿದ ಅಧಿಕಾರಿ, ಸಿಬ್ಬಂದಿಯನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆದು ಭರ್ತಿಮಾಡಿ ಆಗಸ್ಟ್ 16 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ಬೇಕಾದ ದಾಖಲೆಗಳು:

ಅರ್ಜಿ ನಮೂನೆ, ಆರ್ ಟಿ ಸಿ/ಪಹಣಿ, ಆಸ್ತಿಗೆ ಸಂಬಂಧಿತ ದಾಖಲಾತಿಗಳು(ಪಟ್ಟ/ಖರೀದಿ/ ಅವಾರ್ಡ್ ಲ್ಯಾಂಡ್/ಇತರೆ), ವಂಶ ವೃಕ್ಷ, ಆಧಾರ್ ಕಾರ್ಡ್, ವೋಟರ್ ಐಡಿ ಮತ್ತು ರೇಷನ್ ಕಾರ್ಡ್, ಎರಡು ಭಾವಚಿತ್ರ ಸಲ್ಲಿಸಬೇಕು ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆ.03 ರಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 220/11ಕೆವಿ ಅಲ್ಲಿಪುರ ವಿದ್ಯುತ್ ಉಪ–ಕೇಂದ್ರದಲ್ಲಿ 20 ಎಂವಿಎ ಟ್ರಾನ್ಸ್‌ಫಾರ್ಮರ್‌ನ ನಿರ್ವಹಣಾ ಕಾರ್ಯಹಮ್ಮಿಕೊಂಡಿರುವುದರಿಂದ ಹಾಗೂ ಈ ಉಪಕೇಂದ್ರದಿಂದ ಸರಬರಾಜು ಆಗುವ ವಿದ್ಯುತ್ ಲೈನುಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಆ.03 ರಂದು ಬೆಳಿಗ್ಗೆ 08 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜುನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯವಾಗುವ ಪ್ರದೇಶಗಳು:

ಎಫ್–34 ವ್ಯಾಪ್ತಿಯ ರೈಲ್ವೆ ಫಸ್ಟ್ ಗೇಟ್, ಕೊರಚ ಸ್ಟ್ರಿಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೆರೆ, ಟೈಲರ್ ಸ್ಟ್ರಿಟ್, ವಡ್ಡೆ ನಾಗಪ್ಪ ಕಾಲೋನಿ, ತಿಲಕ್ ನಗರ್, ವಿನಾಯಕ ನಗರ, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜ್, ರೇಡಿಯೋ ಪಾರ್ಕ್, ಕೌಲ್ ಬಜಾರ್ ಮೇನ್ ರೋಡ್.

ಎಫ್–35 ರ ಜಲಶುದ್ಧೀಕರಣ ಕೇಂದ್ರ. ಎಫ್–36 ರ ಬಂಡಿಹಟ್ಟಿ, ಆಶ್ರಯ ಕಾಲೋನಿ, ಈದ್ಗ ರೋಡ್, ಟೀಚರ್ಸ್ ಕಾಲೋನಿ, ಜಾಗೃತಿ ನಗರ ಸರ್ಕಲ್, ಆಜಾದ್ ನಗರ.

ಎಫ್–40 ರ ಕುವೆಂಪು ನಗರ, ರಾಮಾಂಜನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್‌ಸರ್ವಿಸ್‌ಮೆನ್ ಕಾಲೋನಿ. ಎಫ್–72 ರ ಕಂಟೋನ್ ಮೆಂಟ್, ಸೂರ್ಯ ಕಾಲೋನಿ, ತಿಲಕ್ ನಗರ, ಸುಧಾ ಕ್ರಾಸ್, ನಂದಿ ಕಾಲೋನಿ, ಹೆಚ್. ಆರ್.ಜಿ ಕಾಲೋನಿ, ಜಯ ನಗರ, ರಹಿಮಬಾದ್ ಕಾಲೋನಿ, ನಲಂದ ಕಾಲೇಜ್, ವಿಜಯನಗರ ಕಾಲೋನಿ, ಕೆ.ಹೆಚ್.ಬಿ ಕಾಲೋನಿ, ಜಗನ್ನಾಥ ಮಂದಿರ, ಭಾಸ್ಕರ ನಾಯ್ಡು ಸ್ಟ್ರಿಟ್, ಸೆಂಟ್ ಜೋಸೆಫ್ ಸ್ಕೂಲ್, ಬೆಳಗಲ್ ಕ್ರಾಸ್ , ಚಂದ್ರ ಕಾಲೋನಿ, ಎಂ.ಕೆ. ಗಡಂಗ್.

ಎಫ್–75 ರ ಟ್ರಾಮಾ ಕೇರ್ ಸೆಂಟರ್, ಗೋಪಾಲಗೌಡ ನಗರ. ಎಫ್–76 ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ರೇಷ್ಮೆ ಇಲಾಖೆ, ಟೀಚರ್ಸ್ ಕಾಲೋನಿ, ಈದ್ಗ ಮೈದಾನ, ರಾಮಂಜನೇಯ ನಗರ ಕಾಲೋನಿ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪೂರ್ವಭಾವಿ ಸಭೆಯಲ್ಲಿ ಎಸಿ ಪ್ರಮೋದ್ ಹೇಳಿಕೆ

## ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಕಾಯಕಯೋಗಿ ನುಲಿಯ ಚಂದಯ್ಯ, ಶ್ರೀಕೃಷ್ಣ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ಹೇಳಿದರು.

ಮಹನೀಯರ ಜಯಂತಿ ಆಚರಣೆ ಕುರಿತಂತೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಆ.09 ರಂದು ಕಾಯಕಯೋಗಿ ನುಲಿಯ ಚಂದಯ್ಯ ಮತ್ತು ಆ.16 ರಂದು ಶ್ರೀಕೃಷ್ಣ ಜಯಂತಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಚರಿಸಲು ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಆ.09 ರಂದು ಕಾಯಕಯೋಗಿ ನುಲಿಯ ಚಂದಯ್ಯ ಕಾರ್ಯಕ್ರಮವನ್ನು ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗುವುದು. ಇದಕ್ಕೂ ಮುನ್ನ ಜಯಂತಿಯ ಮೆರವಣಿಗೆಯು ಕೌಲ್ ಬಜಾರ್‌ನ ಕೊರವರ ಬೀದಿಯ ಸಮುದಾಯ ಭವನದ ಆವರಣದಿಂದ ವೇದಿಕೆ ಕಾರ್ಯಕ್ರಮದವರೆಗೂ ನಡೆಯಲಿದೆ. ಪಾಲಿಕೆ ವತಿಯಿಂದ ಟ್ರಾಕ್ಟರ್, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದರು.

ಆ.16 ರಂದು ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ನಗರದ ಡಾ.ರಾಜ್ ಕುಮಾರ್ ರಸ್ತೆಯ ಬಿಡಿಎಎ ಫುಟ್ ಬಾಲ್ ಮೈದಾನದ ಸಭಾಂಗಣದಲ್ಲಿ ಆಯೋಜಿಸಲಾಗುವುದು. ಬೇಕಾದ ಎಲ್ಲಾ ಸಿದ್ಧತೆ ಕೈಗೊಳ್ಳಬೇಕು. ಜಯಂತಿಯ ಮೆರವಣಿಗೆಯು ಕನಕದುರ್ಗಮ್ಮ ದೇವಸ್ಥಾನದಿಂದ ಆರಂಭವಾಗಿ ವೇದಿಕೆ ಕಾರ್ಯಕೆಮದವರೆಗೆ ನಡೆಯಲಿದ್ದು, ಮೆರವಣಿಗೆಗೆ ಸಂಚಾರಕ್ಕೆ ತೊಂದರೆಯುಂಟಾಗದಂತೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಶಿಷ್ಠಾಚಾರದನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು. ಮೆರವಣಿಗೆಯಲ್ಲಿ ಎರಡು ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗುವುದು. ವೇದಿಕೆ ಕಾರ್ಯಕ್ರಮದಲ್ಲಿ ಮಹನೀಯರ ಚರಿತ್ರೆಯನ್ನು ತಿಳಿಯಪಡಿಸಲು ನುರಿತರಿಂದ ವಿಶೇಷ ಉಪನ್ಯಾಸ, ವಚನ ಗಾಯನ ಸಂಗೀತ ಆಯೋಜಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಮಹಾನಗರ ಪಾಲಿಕೆ ಸದಸ್ಯ ಗಾದೆಪ್ಪ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಇತರರು ಉಪಸ್ಥಿತರಿದ್ದರು.

## ಗುದ್ನೇಶ್ವರ ಸ್ವಾಮಿಯಿಂದ ಈ ಕ್ಷೇತ್ರ ಪಾವನ– ಯಲಬುರ್ಗಾ ಶ್ರೀ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಕುಕನೂರಿನ ಗುದ್ನೇಶ್ವರ ಸ್ವಾಮಿ ಹಲವಾರು ಪವಾಡಗಳ ಮೂಲಕ ಈ ಕ್ಷೇತ್ರದ ಭಕ್ತರನ್ನ ಪಾವನ ಮಾಡಿದ್ದಾನೆ ಎಂದು ಯಲಬುರ್ಗಾದ ಬಸವಲಿಂಗೇಶ್ವರ ಮಹಾಸ್ವಾಮೀಜಿ ಹೇಳಿದರು.

ಅವರು ಕುಕನೂರ ಪಟ್ಟಣದ ಮುಂಡರಗಿ ಅನ್ನದಾನೀಶ್ವರ ಶಾಖಾಮಠದಲ್ಲಿ ಶ್ರೀಮಠದ ಜಾತ್ರ ನಿಮಿತ್ಯ ಹಮ್ಮಿಕೊಂಡ ಗುದ್ನೇಶ್ವರ ಸ್ವಾಮಿಯ ಪುರಾಣ ಉದ್ಘಾಟನೆ ಮಾಡಿ ಮಾತನಾಡುತ್ತಾ ಈ ಭಾಗದಲ್ಲಿ ಶರಣ ಕ್ರಾಂತಿಯ ನಂತರ ಈ ಕ್ಷೇತ್ರಕ್ಕೆ ಬಂದು ನೆಲೆನಿಂತ ಗುದ್ನೇಶ್ವರ ಸ್ವಾಮಿಗೆ ಭವ್ಯವಾದ ಇತಿಹಾಸವಿದೆ, ಗುದ್ನೇಶ್ವರ ಭಕ್ತರ ಆರಾಧ್ಯ ದೈವವಾಗಿ, ನೊಂದು ಬಂದವರಿಗೆ ಕಾಮದೇನುವಾಗಿದ್ದಾನೆ, ಆತನ ಸ್ಮರಣೆ ಮಾಡುವುದರಿಂದ ಭವರೋಗಗಳು ದೂರವಾಗುತ್ತವೆ ಎಂದರು.

ನಂತರ ಪುರಾಣ ಪ್ರವಚನಕಾರರಾದ ಸೋರಟೂರಿನ ಶಿವಯೋಗೀಶ್ವರ ಸ್ವಾಮೀಜಿ ಮಾತನಾಡಿ ಗುದ್ನೇಶ್ವರ ಬಿತ್ತಿದ ಹುಣಸೆ ಬೀಜಗಳು ಇಂದು ಹೆಮ್ಮರವಾಗಿ ಬೇಳೆದು ನಿಂತಿವೆ, ಹನ್ನೆರಡನೆ ಶತಮಾನದಲ್ಲಿ ಶರಣರ ಜೊತೆಗಿದ್ದು, ರಂಭಾಪುರಿ ಪೀಠದ ಪರಂಪರೆಯಲ್ಲಿ ಬಂದ ಗುದ್ನೇಶ್ವರ ಮಹಾಸ್ವಾಮಿ ಒಬ್ಬ ಲೀಲಾಮೂರ್ತಿಯಾಗಿ ಜನ ಮಾನಸದಲ್ಲಿ ಉಳಿದಿದ್ದಾನೆ ಇಂತಹ ಸ್ವಾಮಿಯ ಪುರಾಣ ದ್ಯಾಂಪುರದ ಕವಿಗಳು ಬರೆದದ್ದು ಅದ್ಭುತವಾಗಿ ಮೂಡಿಬಂದಿದೆ ಎಂದರು.

ಜಾತ್ರ ಸಮಿತಿ ಕಾರ್ಯದರ್ಶಿ ಈರಣ್ಣ ಶಿರೂರ ಮಾತನಾಡಿ ನಮ್ಮ ಗ್ರಾಮದಲ್ಲೆ ನೆಲೆ ನಿಂತ ಶಿವಯೋಗಿಯ ಬಗ್ಗೆ ನಮ್ಮಲ್ಲಿ ಅಭಿಮಾನ ಮೂಡಬೇಕು, ನಾವುಗಳು ಸ್ವಾಭಿಮಾನಿಗಳಾದಗ ಮಾತ್ರ ನಮ್ಮ ಕ್ಷೇತ್ರ ಬೆಳೆಯಲು ಸಾದ್ಯ, ನಮ್ಮವರನ್ನೆ ನಾವು ಅಪ್ಪಿಕೊಳ್ಳದಿದ್ದರೆ ಅದು ಮಾನವೀಯತೆಯಲ್ಲ, ಜೊತೆಗೆ ನಮ್ಮ ಶ್ರೀಮಠವು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ ಹಾಗು ನಮ್ಮ ಮಠದ ಭಕ್ತರು ಹೃದವಂತರು ಎಂದರು.

ಈ ಸಂದರ್ಭದಲ್ಲಿ ಗುದ್ನೇಶ್ವರ ಮಠದಿಂದ ಶ್ರೀಮಠದವರೆಗೆ ಭಜನೆ ಡೊಳ್ಳುನೊಂದಿಗೆ ಸದ್ಭಾವನ ಪಾದಯಾತ್ರೆ ಅದ್ದೂರಿಯಾಗಿ ಜರುಗಿತು.

ಪೂಜ್ಯ ಮಹಾದೇವ ಸ್ವಾಮೀಜಿ, ಗುರುಶಾಂತವೀರ ಸ್ವಾಮೀಜಿ, ವೀರಯ್ಯ ತೋಂಟದಾರ್ಯ ಮಠ, ಗದಿಗೆಪ್ಪ ಪವಾಡಶೆಟ್ಟಿ, ವೀರಯ್ಯ ಉಳಾಗಡ್ಡಿಮಠ, ಸಂಗಮೇಶ ಕಲ್ಮಠ, ಜಾತ್ರ ಸಮಿತಿ ಅಧ್ಯಕ್ಷ ರವಿ ಗದಗ, ಶಿವುಕುಮಾರ ಯತ್ನಟ್ಟಿ, ಶರಣಪ್ಪ ಗುತ್ತಿ, ದೇವಪ್ಪ ಸೋಬಾನದ, ಬಸಣ್ಣ ದಿವಟರ, ಶಿವು ಬಂಗಿ, ಸಂಗಿ–ತಗಾರರಾದ ವೀರಭದ್ರಪ್ಪ ಸುಂಕದ, ಬಸವರಾಜ ಹುಯಿಲಗೋಳ ಸೇರಿದಂತೆ ಹಲವರು ಭಕ್ತರು ಇದ್ದರು.

## ರಾಘವೇಂದ್ರ ಎಮ್ ಹೆಚ್‌ಗೆ ಸ್ವರ್ಣ ಪದಕ

ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ :ಜು.31:ಕೆಂಭಾವಿ ಗೃಹ ರಕ್ಷಕ ದಳದ ಘಟಕ ಸಿಬ್ಬಂದಿ ರಾಘವೇಂದ್ರ. ಎಮ್ ಅವರು ಬೆಂಗಳೂರು ಅಕಾಡೆಮಿಯಲ್ಲಿ ಮೂಲ ರಕ್ಷಣಾ ತರಬೇತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿಗೋಲ್ಡ್ ಮೆಡಲ್



(ಪ್ರಥಮ ಸ್ಥಾನ) ಪಡೆದುಕೊಂಡ ನಿಮಿತ್ಯ ಶನಿವಾರ ಗೃಹರಕ್ಷಕ ದಳ ಘಟಕದ ವತಿಯಿಂದ ಅಧಿಕಾರಿ ಮುರ್ತುಜಾ ಖಾದರ್ ಮತ್ತು ಗೃಹ ರಕ್ಷಕ ಸಿಬ್ಬಂದಿ ವತಿಯಿಂದ ಸನ್ಮಾನಿಸಲಾಯಿತು.

## ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ: ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–2025–26ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕದ ಮೂಲ ನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ ಮಂಜೂರು ಮಾಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಒಂದನೇ ತರಗತಿಯಿಂದ ಅಂತಿಮ ಪದವಿ, ಡಿಪ್ಲೋಮಾ ಮತ್ತು ವೃತ್ತಿಪರ ಪದವಿಯವರೆಗೆ ಕರ್ನಾಟಕದಲ್ಲಿರುವ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ಮೂಲನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಧಾರವಾಡ ಇವರಿಂದ ಪಡೆಯಬಹುದು.

ಒಂದನೇ ತರಗತಿಯಿಂದ ಅಂತಿಮ ವರ್ಷದ ಪದವಿ, ಡಿಪ್ಲೋಮಾ ವರೆಗೆ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಅಕ್ಟೋಬರ್ 31 ಹಾಗೂ ವೃತ್ತಿಪರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ನವೆಂಬರ್ 30 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಧಾರವಾಡ ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಕುರೇಕುಪ್ಪ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜು.31–ಕುರೇಕುಪ್ಪ ಪುರಸಭೆ ವತಿಯಿಂದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಮುನಿಸಿಪಾಲಿಟಿ ಯೋಜನೆ ಹಂತ–4ರಲ್ಲಿ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಅನುದಾನದ ಶೇ 7.25ರ ಯೋಜನೆಯಡಿ ಪುರಸಭೆ ವ್ಯಾಪ್ತಿಯ ಇತರೆ ಹಿಂದುಳಿದ ವರ್ಗದ ಅರ್ಹ ಖಾಲಿ ನಿವೇಶನ ಹೊಂದಿದ ಫಲಾನುಭವಿಗಳಿಗೆ ಪಕ್ಕ ಮನೆ ನಿರ್ಮಾಣಕ್ಕಾಗಿ ಅರ್ಥಿಕ ಸಹಾಯಧನ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ಫಲಾನುಭವಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಅರ್ಜಿದಾರರು ಪುರಸಭೆ ಅವಧಿಯಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಯನ್ನು ಸಂಪರ್ಕಿಸಿ ಅರ್ಜಿ ಪಡೆದು ಭರ್ತಿಮಾಡಿ ಅಗತ್ಯ ದಾಖಲೆಗಳೊಂದಿಗೆ ಆಗಸ್ಟ್ 25 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ಸಲ್ಲಿಸಬೇಕಾದ ಅಗತ್ಯ ದಾಖಲೆ:

ಅರ್ಜಿ ನಮೂನೆ, ನಿವೇಶನಕ್ಕೆ ಸಂಬಂಧಿಸಿದ ಆಸ್ತಿ ದಾಖಲಾತಿಗಳು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ವೋಟರ್ ಐಡಿ ಮತ್ತು ರೇಷನ್ ಕಾರ್ಡ್, ಎರಡು ಭಾವ ಚಿತ್ರ, ಅರ್ಜಿದಾರರ ಹಾಗೂ ಕುಟುಂಬದವರ ಹೆಸರಿನಲ್ಲಿ ಯಾವುದೇ ಮನೆ ಇಲ್ಲ ಎಂದು ಕೋರ್ಟ್ ಅಫಿಡವೇಟ್ ಸಲ್ಲಿಸಬೇಕು.

ನಿಗದಿತ ದಿನಾಂಕದ ನಂತರ ಬಂದಂತ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅಗತ್ಯ ದಾಖಲಾತಿಗಳನ್ನು ಹೊಂದಿರದ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾನವ ಕಳ್ಳ ಸಾಗಣೆ ಗಂಭೀರ ಅಪರಾಧ ಅಟ್ರಾಸಿಟಿ ಕಾಯ್ದೆಯು ದುರ್ಬಳಕೆ: ನ್ಯಾಯಾಧೀಶರಾದ ಮಹಾಂತೇಶ ದರಗದ ಹೇಳಿಕೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನಗರದ ತಾಲ್ಲೂಕ ಪಂಚಾಯತ ಸಭಾ ಭವನದಲ್ಲಿ ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್,ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ,ಜಿಲ್ಲಾ ಪೋಲಿಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ



ಅಭಿವೃದ್ಧಿ ಇಲಾಖೆ, ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕೊಪ್ಪಳ. ಇವರುಗಳ ಸಂಯಕ್ತಾಶ್ರಯದಲ್ಲಿ "ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ" ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಯ್ದೆ ಹಾಗೂ ಖಾಯಂ ಜನತಾ ನ್ಯಾಯಲಯ ಕುರಿತು ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮವನ್ನು ಮಾನ್ಯ ಶ್ರೀ ಮಾಹಾಂತೇಶ್ ದರಗದ ಮಾನ್ಯ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ ರವರು ಉದ್ಘಾಟಿಸಿ ಮಾತನಾಡಿದರು "ಮಾನವ ಕಳ್ಳ ಸಾಗಾಣಿಕೆ" ಒಂದು ಗಂಭೀರ ಅಪರಾಧವಾಗಿದ್ದು ಜನರು ಬಲವಂತವಾಗಿ ಮೋಸದಿಂದ ಅಥವಾ ಬಲತ್ಕಾರದಿಂದ ದುಡಿಮೆ, ಲೈಂಗಿಕ ಶೋಷಣೆಗಾಗಿ ಸಾಗಿಸಲ್ಪಡುತ್ತಾರೆ. ಈ ಸಮಸ್ಯೆಯ ವಿರುದ್ದ ಜಾಗೃತಿ ಮೂಡಿಸಲು ಮತ್ತು ಇಂತಹ ಪ್ರಕರಣಗಳಿಗೆ ಸಿಲುಕಿಕೊಂಡವರಿಗೆ ರಕ್ಷಿಸಲು ಎಲ್ಲಾ ಹಂತದಲ್ಲೂ ಕ್ರಮವಹಿಸಿಲು ಕರೆ ನೀಡಿದರು. ಅದೇ ರೀತಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕಾಯ್ದೆ ಮತ್ತು ಖಾಯಂ ಜನತಾ ನ್ಯಾಯಾಲಯ ಕುರಿತು ವಿವರವಾದ ಮಾಹಿತಿ ನೀಡಿದರು. ಅಟ್ರಾಸಿಟಿ ಕಾಯ್ದೆಯು ದುರ್ಬಳಕೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತಾವಿಕವಾಗಿ ನಟರಾಜ್, ಮಾನ್ಯ ಜಿಲ್ಲಾ ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳರವರು ಮಾನವ ಸಾಗಾಣಿಕೆ ಹಳ್ಳಿಗಳಲ್ಲಿ, ನಗರಗಳಲ್ಲಿ ಕಂಡುಬಂದರೆ ದೂರು ದಾಖಲಿಸಿ ಎಂದು ತಿಳಿಸಿದರು. ಮಹಾಂತಯ್ಯ ಸ್ವಾಮಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ರವರು ಮಾತಾನಾಡಿ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಕಾವಲು ಸಮಿತಿ ರಚನೆಯಾಗಿದ್ದು, ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಮಿತಿಯಲ್ಲಿ ಚರ್ಚಿಸಲು ತಿಳಿಸಿದರು. ಇದೇ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಅನ್ನಪೂರ್ಣ ಕುಬಕಡ್ಡಿ ಅವರು "ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಕುರಿತು ಪ್ರತಿಜ್ಞಾ ವಿಧಿ ಭೋಧಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಪರಶುರಾಮ್ ವಾಯ್ ಶೆಟ್ಟಪ್ಪನವರ್ ಮಾನ್ಯ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ರವರು ಮಾತನಾಡಿ ಮಾನವ ಕಳ್ಳ ಸಾಗಾಣಿಕೆ ಮಾಡುವುದರ ಮೂಲಕ ಮಾನವನ ಅಂಗಾಂಗಗಳನ್ನು ಕದ್ದು ಇತರರಿಗೆ ಮಾರಾಟ ಮಾಡುವುದು, ಇಂತಹ ಜಾಲ ಪತ್ತೆಯಾದಲ್ಲಿ ಹತ್ತಿರ ಪೋಲಿಸ್ ಠಾಣೆಗೆ ಮಾಹಿತಿ ನೀಡುವಂತೆ, ಹಾಗೂ ಅಂಗನವಾಡಿ ಕಾರ್ಯಕರ್ತೆಯವರಿಗೆ ಪ್ರತಿ 3 ತಿಂಗಳಿಗೊಮ್ಮೆ ಕಾವಲು ಸಮಿತಿ ಸಭೆ ನಡೆಸುವುದು ಪ್ರಕರಣಗಳು ಕಂಡುಬಂದಲ್ಲಿ ಪೋಲಿಸರಿಗೆ ಹಾಗೂ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲು ತಿಳಿಸಿದರು.

ಶ್ರೀ ಮಹೇಶ್, ಮಾನ್ಯ ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತಿ ಕೊಪ್ಪಳ ರವರು ಕಾರ್ಯಕ್ರಮ ಕುರಿತು, ಮಾತನಾಡಿದರು. ಮೇಲ್ವಿಚಾರಕಿರವರು ನೇರವೇರಿಸಿದರು, ಸ್ವಾಗತ ಕಾರ್ಯಕ್ರಮವನ್ನು ಶ್ರೀಮತಿ ರೋಹಿಣಿ ಕೋಟಗಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕೊಪ್ಪಳರವರು ನೇರವೇರಿಸಿದರು. ವಂದನಾರ್ಪಣೆಯನ್ನು ಶ್ರೀಮತಿ ರೂಪ ಗಂದಧ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ಸಿಬ್ಬಂದಿಗಳು ಶ್ರೀಮತಿ ಶ್ರೀದೇವಿ ಜಿಲ್ಲಾ ಸಂಯೋಜಕರು, ಶ್ರೀಮತಿ ಫಾತಿಮಾ ಜೆಂಡರ್ ಸ್ಪಷಲಿಸ್ಟ್, ಯಮುನಾ ಬೆಸ್ತರ್ ಸಖಿ ಒನ್ ಸ್ಟಾಪ ಸೆಂಟರದ ಮೇಲ್ವಚಾರಕಿಯರು, ಮಕ್ಕಳ ಸಹಾಯವಾಣಿ 1098 ಸಿಬ್ಬಂದಿಗಳು, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ,ಅಂಗನವಾಡಿ ಕಾರ್ಯಕತೆ–ರ್ಯರು ,ಸಾಂತ್ವನ ಸಿಬ್ಬಂದಿ, ಕೌಟುಂಬಿಕ ಸಲಹಾ ಕೇಂದ್ರದ ಸಿಬ್ಬಂದಿಗಳು , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು ಕಾರ್ಯಕ್ರಮವನ್ನು ಚಂದ್ರಮ್ಮ ನಿರೂಪಿಸಿ ವಂದಿಸಿದರು.

# ಜಿಪಂ ಸಿಇಓ ಶಶಿಧರ ಕುರೇರ ಅವರಿಂದ ಬೀಳಗಿ, ಮುಧೋಳ ಜೆಜೆಎಂ ಕಾಮಗಾರಿ ವೀಕ್ಷಣೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ಜಿಲ್ಲೆಯ ಬೀಳಗಿ ಹಾಗೂ ಮುಧೋಳ ತಾಲೂಕಿನ ವಿವಿಧ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ನಡೆದ ಕುಡಿಯುವ ನೀರಿನ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು.

ಬೀಳಗಿ ತಾಲೂಕಿನ ಸುನಗ ಮತ್ತು ಸುನಗ ತಾಂಡಾ ಗ್ರಾಮಗಳಿಗೆ ಭೇಟಿ ನೀಡಿ ಜಲ ಜೀವನ ಮಿಷನ್ ಯೋಜನೆಯ ಕಾಮಗಾರಿಗಳ ಸ್ಥಳ ವೀಕ್ಷಣೆ ಮಾಡಿದ ಅವರು, ಮನೆ ಮನೆಗೆ ಅಳವಡಿಸಲಾಗಿರುವ ನಲ್ಲಿಗಳ ಸಂಪರ್ಕ ಬಗ್ಗೆ ಫಲಾನುಭವಿಗಳೊಂದಿಗೆ ಚರ್ಚೆ ಮಾಡಿದರು. ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿರುವ ಕುರಿತು ಮಾಹಿತಿ ಪಡೆದುಕೊಂಡು ದಿನದ 24 ಗಂಟೆಗಳ ನೀರಿನ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೆಗ್ಗೂರ ಆರ್.ಸಿ ಮತ್ತು ಗೋವಿನದಿನ್ನಿ ಆರ್.ಸಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮದಲ್ಲಿ ಜಲಮೂಲಗಳು ಉತ್ತಮವಾಗಿದ್ದು, ಜನರ ಆರೋಗ್ಯದ ಮೇಲೆ ನೀರು ನಿರ್ವಹಣೆ ಮುಖ್ಯ ಪಾತ್ರ ವಹಿಸುತ್ತಿರುವ ಕಾರಣ ನೀರಿನ ಸಂಪರ್ಕಗಳನ್ನು ಕಾಲಕಾಲಕ್ಕೆ ಮೇಲ್ವಿಚಾರಣೆ ಮಾಡುವಂತೆ ಸೂಚಿಸಿದರು. ನಾಗರಾಳ ತಾಂಡಾ ಮತ್ತು ತೆಗ್ಗಿ ಗ್ರಾಮಕ್ಕೆ ಭೇಟಿ ನೀಡಿ, ಯೋಜನೆಯಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸುವ ಮೂಲಕ ಗ್ರಾಮದಲ್ಲಿ ದುರಸ್ತಿಗಳನ್ನು ಕೈಗೊಳ್ಳಲು ಸೂಚಿಸಿದರು.

ಅಮಲಝುರಿ ಗ್ರಾಮದಲ್ಲಿರುವ ಉತ್ತಮ ನೀರಿನ ವ್ಯವಸ್ಥೆ ಮತ್ತು ಸಾರ್ವಜನಿಕರ ಸಹಭಾಗಿತ್ವದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ನಿರಂತರ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲು ತಿಳಿಸಿದರು. ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನಗೊಂಡಿರುವ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುವ ಮೂಲಕ ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿ ಜಾರಿಗೆ ತರುವಂತೆ ಸೂಚಿಸಿದರು.

ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಆಕಾಶ್, ಪ್ರಭಾರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆರ್. ಕೆ.ಡಂಬಳ ಸೇರಿದಂತೆ ಶಾಖಾಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮದ ಸದಸ್ಯರು ಇದ್ದರು.

# ಅಕ್ಕಮಹಾದೇವಿ ಮಹಿಳಾ ಕಾಲೇಜು ಉತ್ತಮ ಸಾಧನೆ







ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ನಗರದ ಬಿ.ವಿ.ವಿ.ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ 2024–25ನೇ ಸಾಲಿನ ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿನಿಯರ ಫಲಿತಾಂಶ ಶೇಕಡ 100 ರಷ್ಟಾಗಿದೆ.

ಮಹಾವಿದ್ಯಾಲಯದ ಸ್ಫೂರ್ತಿ ತುರಡಗಿ ಪ್ರಥಮ (ಶೇ.94), ಸುನಿತಾ ನಾಯಕ್ ದ್ವಿತೀಯ (ಶೇ.92.72) ಹಾಗೂ ಜೈರಬಿ ಮುದ್ದೇಬಿಹಾಳ ತೃತೀಯ (ಶೇ.92.42) ಸ್ಥಾನದೊಂದಿಗೆ ತೇರ್ಗಡೆ ಹೊಂದಿದ್ದಾರೆ.

ಉತ್ತಮ ಫಲಿತಾಂಶ ತಂದಿರುವ ವಿದ್ಯಾರ್ಥಿಗಳನ್ನು ಬಿ.ವಿ.ವಿ. ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಆಡಳಿತಾಧಿಕಾರಿಗಳಾದ ಪ್ರೊ. ವಿ.ಆರ್.ಶಿರೋಳ ಹಾಗೂ ಡಾ.ವಿ.ಎಸ್. ಕಟಗಿಹಳ್ಳಿಮಠ, ಪ್ರಾಚಾರ್ಯ ಎಸ್. ಜೆ.ಒಡೆಯರ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

# ನಾಳೆ ಸಾಂಸ್ಕೃತಿಕ ಚಟುವಟಿಕೆ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ತಾಲೂಕಿನ ಬೇವೂರಿನ ಆದರ್ಶ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಸಕ್ತ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಆಗಷ್ಟ 2 ರಂದು ಜರುಗಲಿದೆ.

ಶನಿವಾರ ಬೆಳಿಗ್ಗೆ 10–30 ಗಂಟೆಗೆ ವಿದ್ಯಾಲಯದ ಸಭಾಭವನದಲ್ಲಿ ಆದರ್ಶ ವಿದ್ಯಾವರ್ಧಕ ಸಂಘದ ಸದಸ್ಯ ಪಿ.ಬಿ.ಹೊಸಳ್ಳಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಕಾಲೇಜಿನ ಪ್ರಾಚಾರ್ಯ ವ್ಹಿ.ಬಿ.ಅರಹುಣಸಿ ಹಾಗೂ ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಯೋಗೇಶ ಲಮಾಣಿ ಉಪಸ್ಥಿತರಿರುವರು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

## ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಗೆಅಧ್ಯಕ್ಷರಾಗಿ ನಾಗರಾಜ ಹದ್ಲಿ ನೇಮಕ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ಪಕ್ಷದ ಮುಖಂಡ ನಾಗರಾಜ ಹದ್ಲಿ ನೇಮಿಕಗೊಂಡಿದ್ದಾರೆ.

ಕರ್ನಾಟಕ ರಾಜ್ಯ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ ಸೊರಕೆ ಅವರು ನಾಗರಾಜ ಹದ್ಲಿ ಅವರನ್ನು ನೇಮಕ ಮಾಡಿ ಆದೇಶ ನೀಡಿದ್ದು, ಜಿಲ್ಲೆಯ ಜಿಲ್ಲಾ ಮತ್ತು ಕ್ಷೇತ್ರಮಟ್ಟದ ಕಾಂಗ್ರೆಸ್ ಪ್ರಚಾರ ಸಮಿತಿಯ ಪದಾಧಿಕಾರಿಗಳನ್ನು ಸಮನ್ವಯಪಡಿಸಿ, ಪಕ್ಷದ ಉದ್ದೇಶಗಳನ್ನು, ಆಧುನಿಕ ತಂತ್ರಜ್ಞಾನ, ಸಾಮಾಜಿಕ ಮಾಧ್ಯಮ, ಸಂಘಟನೆ ಹಾಗೂ ಪ್ರಚಾರದ ಮೂಲಕ ಬಲಪಡಿಸಲು ತಾವು ನಿರಂತರ ಕಾರ್ಯನಿರ್ವಹಿಸಬೇಕು ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

## ಸ್ವಾತಂತ್ರ್ಯದಿನೋತ್ಸವಕ್ಕೆ ಅಗತ್ಯ ಸಿದ್ಧತೆಯಾಗಲಿ: ಶಿವಾನಂದ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜುಲೈ 31–ಜಿಲ್ಲೆಯಲ್ಲಿ ಆಗಸ್ಟ್ 15ರ ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಮತ್ತು ಅದ್ದೂರಿಯಾಗಿ ಆಯೋಜಿಸಬೇಕು. ಸ್ವಾತಂತ್ರ್ಯೋತ್ಸವದ ಸಾರ್ಥಕತೆಯನ್ನು ಬಿಂಬಿಸುವ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜುಲೈ 31ರಂದು ಗುರುವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಿನಾಚರಣೆಗೆ ಸಂಬಂಧಿಸಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗುವುದು. ಅದರಂತೆ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ನಗರದ ಗಾಂಧಿ ವೃತ್ತದಲ್ಲಿರುವ ಮಹಾತ್ಮ ಗಾಂಧಿ ಪುತ್ಥಳಿ ಬಳಿ ರಾಮಧುನ ಕಾರ್ಯಕ್ರಮಕ್ಕಾಗಿ ಶ್ಯಾಮಿಯಾನ, ಆಸನ, ಲೈಟ್, ಮೈಕ್, ಹೂವಿನ ಹಾರಗಳು ಸ್ವಚ್ಛತೆ ಹಾಗೂ ಇತರೆ ವ್ಯವಸ್ಥೆ ಮಾಡಬೇಕು.

ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿರುವ ಮಹಾತ್ಮಗಾಂಧಿ ಪುತ್ಥಳಿ ಬಳಿ ಆಸನ, ಮೈಕ್, ಹೂವಿನ ಹಾರಗಳು ಹಾಗೂ ಸರ್ವ ಧರ್ಮಗಳ ಪ್ರಾರ್ಥನೆ ಕಾರ್ಯಕ್ರಮದ ವ್ಯವಸ್ಥೆಯನ್ನು ರಾಯಚೂರು ಮಹಾನಗರ ಪಾಲಿಕೆಯು ಅಚ್ಚುಕಟ್ಟಾಗಿ ಮಾಡಬೇಕೆಂದು ತಿಳಿಸಿದರು.

ಸ್ವಾತಂತ್ರ್ಯೋತ್ಸವ ದಿನದಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮಕ್ಕಾಗಿ ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ನಿಗಮ ಮಂಡಳಿ ಅಧ್ಯಕ್ಷರು, ವಿವಿಧ ಸಮಿತಿ, ಪ್ರಾಧಿಕಾರದ ಅಧ್ಯಕ್ಷರು,

ನ್ಯಾಯಾಧೀಶರು, ಪತ್ರಕರ್ತರು, ಸ್ವಾತಂತ್ರ್ಯ ಹೋರಾಟಗಾರರು, ಗಣ್ಯರು, ಮಹಿಳೆಯರು ಹಾಗೂ ಇತರರಿಗೆ ಪ್ರತ್ಯೇಕವಾದ ಆಸನಗಳ ವ್ಯವಸ್ಥೆ ಮಾಡಬೇಕು.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಗೂ ಇನ್ನಿತರ ಕಡೆ ದೀಪಾಲಂಕಾರ ಮಾಡುವಂತೆ ಅಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅಲ್ಪೋಪಹಾರ ಹಾಗೂ ಚಹಾ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಭಾಷಣಕ್ಕಾಗಿ ವಿವಿಧ ಇಲಾಖೆಯ ಅಧಿಕಾರಿಗಳು, ಆಯಾ ಯೋಜನೆಗಳ ಪ್ರಗತಿ ಮತ್ತು ಯಶೋಗಾಥೆಯ ಮಾಹಿತಿಯನ್ನು ಸಿದ್ಧಪಡಿಸಿ ವಾರ್ತಾ ಇಲಾಖೆಗೆ ಸಲ್ಲಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯ ಎಲ್ಲ ಸರ್ಕಾರಿ ನೌಕರರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಆಗಸ್ಟ್ 15ರಂದು ನಡೆಯುವ ಸ್ವಾತಂತ್ರೋತ್ಸವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಹಿಸುವಂತೆ

ಅಪರ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಡಿ ಪಂಪಣ್ಣ, ಭಾರತ ಸೇವಾದಳದ ವಿದ್ಯಾಸಾಗರ, ತಹಸೀಲ್ದಾರ ಬಿ ರಾಜಶೇಖರ, ವಿವಿಧ ಇಲಾಖೆಯ ಅಧಿಕಾರಿಗಳಾದ ಕೃಷ್ಣಶಾವಂತಗೇರಿ, ರಾಜಕುಮಾರ ಪಾಟೀಲ, ಈರೇಶ ನಾಯಕ, ಆರ್ ಎಸ್ ಪಾಟೀಲ, ಕೆ ರಂಗಸ್ವಾಮಿ, ಆದೇಶ, ಡಾ.ಪ್ರಜ್ವಲ್ ಡಿ ಎಸ್ ಸೇರಿದಂತೆ ಇನ್ನಿತರರು ಇದ್ದರು.

# ವ್ಯಕ್ತಿತ್ವ ವಿಕಸನಕ್ಕೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಮುಖ್ಯ–ದುಂಡೇಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ವ್ಯಕ್ತಿತ್ವ ವಿಕಸನಕ್ಕೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು ಮುಖ್ಯವಾಗಿದ್ದು, ಆತ್ಮಬಲ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಎಂದು ಬೆಂಗಳೂರಿನ ಎಂ.ಅರ್. ಮತ್ತು ಎಂ.ಎನ್ ಕಾರ್ನ್ ಸಂಸ್ಥಾಪಕ ದುಂಡೇಶ ಚಿಮ್ಮಡ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ನೆರವೇರಿಸಿ ಮಾತನಾಡಿ, ಕ್ರೀಡೆಯಿಂದ ಮಕ್ಕಳು ದೈಹಿಕವಾಗಿ ಸಧೃಡವಾದರೆ, ಸಾಂಸ್ಕೃತಿಕ ಚಟುವಟಕೆಗಳು ಮಾನಸಿಕವಾಗಿ ಸಧೃಡರನ್ನಾಗಿ ಮಾಡುತ್ತವೆ ಎಂದರು.

ವೀಲ್ ಚೇರ್ ಇಂಡಿಯನ್ ಕ್ರಿಕೆಟರ್ ಸಾಗರ ಲಮಾಣಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಅಂದುಕೊಂಡಿದ್ದನ್ನು ಸಾಧಿಸುವುದು ಸುಲಭದ ಮಾತಲ್ಲ, ಸಾಧನೆಯ ಹಾದಿ ಅತ್ಯಂತ ಕಠಿಣವಾದದ್ದು, ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಮೆಟ್ಟಿನಿಂತಾಗ ಮಾತ್ರ ಗುರಿಯನ್ನು ಮುಟ್ಟಲು ಸಾಧ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಪದವಿ ಪೂರ್ವ ಹಂತದ ವಿದ್ಯಾರ್ಥಿ ಜೀವನ ಅತ್ಯಂತ ಪ್ರಮುಖವಾದುದು. ಪಾಲಕರ ಆಸೆಗಳನ್ನು ಪೂರೈಸುವುದು ವಿದ್ಯಾರ್ಥಿಗಳ ಜವಾಬ್ದಾರಿ. ಅವರ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನೀವು ಒದಗಿಸಬೇಕು. ಕಲಿತ ಕಾಲೇಜಿಗೆ, ತಂದೆ ತಾಯಿಗಳಿಗೆ ಕೀರ್ತಿ ತನ್ನಿ ಎಂದರು.

ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಹನಾ ಎಂ, ಶ್ರೀಶ ಖಾನಾಪುರ, ಸೃಷ್ಟಿ ಮೇಲಿನಮನಿ, ತನುಜಾ ಮಾಗಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು ಡಾಕ್ಟರೇಟ್ ಪದವಿ ಪಡೆದಿರುವ ಡಾ.ಸುಭಾಸ ತಿಪ್ಪಣ್ಣವರ ಅವರನ್ನು ಸನ್ಮಾನಿಸಲಾಯಿತು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎನ್.ಎಚ್. ಬೇವಿನಹಳ್ಳಿ, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷೆ ಶ್ರೀಮತಿ ಎ.ಡಿ.ಮೋಮಿನ, ದೈಹಿಕ ನಿರ್ದೇಶಕ ಎಸ್.ಎನ್.ಮಂಕಣಿ, ಜಿ.ಎಚ್. ಜಿಗಳೂರ, ಬಿ.ಎಂ.ಸೋನಕನಾಳ ಉಪಸ್ಥಿತರಿದ್ದರು.

# ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ರೂ. ಅನುದಾನ ಬಿಡುಗಡೆ




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಜು31 – ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಿನ್ನೆ ವಿಧಾನಸೌಧದಲ್ಲಿ ನಡೆದ 2025–26 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾದ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರಕ್ಕೆ ರೂ.50 ಕೋಟಿಗಳ ಅನುದಾನ ಹಂಚಿಕೆ ಕುರಿತು ನಡೆದ ಸಭೆಯಲ್ಲಿ ಮಾಜಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಿ.ನಾಗೇಂದ್ರ ಅವರು ಭಾಗವಹಿಸಿ, ಕ್ಷೇತ್ರದಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡಿದರು.

ನಂತರ ಮುಖ್ಯಮಂತ್ರಿಗಳು ಶಾಸಕರಾದ ಬಿ.ನಾಗೇಂದ್ರ ಅವರ ಜೊತೆ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಅಭಿವೃದ್ಧಿ ಯೋಜನೆಗಳ ಸ್ಥಿತಿಗತಿ, ಅನುದಾನ ಬಳಕೆ ಹಾಗೂ ಮುಂದಿನ ದಿನಗಳಲ್ಲಿ ಅಗತ್ಯ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಕ್ಕೆ ತರುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು.

ಈ ಸಭೆಯಲ್ಲಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಅವರ ಸೇರಿದಂತೆ ಸಚಿವರು ಹಾಗೂ ಶಾಸಕರ ಉಪಸ್ಥಿತರಿದ್ದರು.

# ಧರಿನಾಡು ಸೌಹಾರ್ದ ಸಹಕಾರಿ ಸಂಘ ನೀ, ಬೀದರ ವತಿಯಂದ ಉಚಿತ ಆರೋಗ್ಯ ತಪಾಸಣೆ




ಮಲ್ಲಮ್ಮ ನುಡಿ ವಾರ್ತೆ

ಬೀದರ: ಧರಿನಾಡು ಸೌಹಾರ್ದ ಸಹಕಾರಿ ಸಂಘ ನೀ, ಬೀದರ ನ 2 ನೇ ವಾರ್ಷಿಕ ಸಭೆಯು ಇಲ್ಲಿನ ಮುಕ್ತಿ ಮಂದಿರ ಸಭಾಂಗಣದಲ್ಲಿ ಜರುಗಿತು ಸಭೆಯನ್ನು ಉದ್ಘಾಟಿಸಿದ ಗುರುನಾಥ ಜಾಂತಿಕರ್ ರವರು ಸದರಿ ಬ್ಯಾಂಕ್ ತನ್ನ ವಾರ್ಷಿಕ ಸಾಮಾನ್ಯ ಸಭೆಯೊಂದಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಕಾರ್ಯವನ್ನು ಕೈಗೊಂಡಿರುವುದು ತುಂಬ ಶ್ಲಾಘನೀಯವಾಗಿದ್ದು ಅಲ್ಲದೆ ಆಡಳಿತ ಮಂಡಳಿಯು ವಾಹನಗಳ ವಿಮೆ ಮಾಡುವ ಕಾರ್ಯವನ್ನು ಸಹ ಅಧಿಕೃತವಾಗಿ ಮಾಡುತ್ತಿರುವುದು ಮತ್ತು ಇನ್ನು ಮುಂದೆ ಸಿ.ಎಸ್.ಸಿ ಕೇಂದ್ರವನ್ನು ಪ್ರಾರಂಭಿಸಿ ಸಮಾಜದ ಕಟ್ಟಕಡೆಯ ಜನರಿಗೆ ಸಾಮಾಜಿಕ ಮೂಲಭೂತ ಸೌಲಭ್ಯಗಳನ್ನು ದೊರಕಿಸುವ ಉದ್ದೇಶವನ್ನು ಹೊಂದಿರುತ್ತದೆ ಸದರಿ ಸಂಘದ ಆಡಳಿತ ಮಂಡಳಿಯು ಉತ್ತಮ ರಿತೀಯ ಕೇಲಸವನ್ನು ಜವಾಬ್ದಾರಿಯಿಂದ ನಿರ್ವಹಿಸುತಿದ್ದು ಇದು ಇತರೆ ಸಹಕಾರಿ ಸಂಘಗಳಿಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ವರದಿಗ್ಗರರಾದ ಶ್ರೀ.ಶೇಶಿಕಾಂತ ಶೇಂಬೇಳ್ಳಿ, ರವರು ಸನ್ಮಾನವನ್ನು ಸ್ವಿಕರಿಸಿ ಧರಿನಾಡು ಸಂಸ್ಥೇಯು ಉಚಿತ ಆರೋಗ್ಯ ತಪಾಸಣೆ ಕಾರ್ಯವನ್ನು ಮಾಡುತ್ತಿರುವುದು ತುಂಬ ಅರ್ಥಗರ್ಭಿತವಾಗಿದ್ದು ಇತ್ತಿಚ್ಚಿನ ದಿನಗಳಲ್ಲಿ ಅನೇಕ ಜನರು ಸಾಮಾಜಿಕ ಮಾಧ್ಯಮಗಳಲ್ಲಿ ತೊಡಗಿ ತಮ್ಮ ಆರೋಗ್ಯದ ಮೇಲೆ ಪರಿಣಾಮಕ್ಕೆ ಗುರಿಯಾಗುತ್ತಿದ್ದು ಇದರಿಂದ ದುರವಿದ್ದು ಆರೋಗ್ಯದ ಕಡೆಯು ಹಾಗೂ ತಮ್ಮ ಸುತ್ತಮುತ್ತಿನ ಪರಿಸರ ಹಾಗೂ ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಕಾರ್ಯ ಕೈಗೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಧಿಗಳಾದ ಶ್ರೀ.ಮಹಾಲಿಂಗಸ್ವಾಮಿ ಚಟ್ನಳ್ಳಿ ರವರು ಮಾತನಾಡಿ ಧರಿನಾಡು ಸಂಸ್ಥೇಯು ಹಲವಾರು ರಿತೀಯ ಮೌಲ್ಯಗಳುಳ್ಳ ಆಡಳಿತ ಮಂಡಳಿಯ ಕಾರ್ಯಪಡೆಯನ್ನು ಹೊಂದಿದೆ ಆದುದ್ದರಿಂದ ಸಂಸ್ಥೇಯು ಸಮಾಜದಲ್ಲಿ ಇಂತಹ ಮಾದರಿ ಕಾರ್ಯವನ್ನು ಮಾಡುತ್ತಿದ್ದೆ ಹಾಗಾಗಿ ಸಂಸ್ಥೇಯು ಇನ್ನು ಹೆಚ್ಚಿನ ಮಟ್ಟದಲ್ಲಿ ಬೆಳೆಯಲಿ ಎಂದು ಶುಭಹಾರೈಸಿದರು.

ವಿರಶೆಟ್ಟಿ ಕಾವ್ಮಣ್ಣಾ ರವರು ಸಂಸ್ಥೆಯ 2024–25 ನೇ ಸಾಲಿನ ಖರ್ಚುವೆಚ್ಚವನ್ನು ಓದಿ ಹೇಳಿದರು ಹಾಗೂ 2025–26 ನೇ ಸಾಲಿನ ಗುರಿಉದ್ದೇಶಗಳನ್ನು ಸಭೆಯ ಮುಂದೆ ವ್ಯಕ್ತಪಡಿಸಿದಾಗ ಸಭೆಯಲ್ಲಿ ಎಲ್ಲ ಶೇರುದಾರು ಹಾಗೂ ಆಡಳಿತ ಮಂಡಳಿಯು ಒಪ್ಪಿಗೆ ಸೂಚಿಸಿದರು.

ಧರಿನಾಡು ಸೌಹಾರ್ದ ಸಹಕಾರಿ ಸಂಘ ನೀ, ಬೀದರನ ಅಧ್ಯಕ್ಷರಾದ ಶ್ರೀ.ಶಿವಶಂಕರ ಬೆಮಳಗಿ, ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿ ಸಂಘದ ಧ್ಯಯೋದ್ದೇಶವನ್ನು ವಿಸ್ತಾರವಾಗಿ ತಿಳಿಸಿ ಸಂಘದ ಸ್ಥಾಪನೆಯ ಉದ್ದೇಶವು ಕೇವಲ ಹಣದ ವ್ಯವಹಾರವಲ್ಲ ಸಮಾಜದಲ್ಲಿ ಒಳ್ಳೆಯ ಪರಿಸರ ಭಾತೃತ್ವಭಾವನೆ ಹಾಗೂ ಉತ್ತಮ ಆರೋಗ್ಯ ಕಾಪಾಡಲು ಸ್ರಮೀಸುವ ಉದ್ದೇಶವನ್ನು ಹೊಂದಿದೆ ಅಲ್ಲದೆ ಇದೆ ದಾರಿಯಲ್ಲಿ ಸಾಗಲು ನಮ್ಮ ಎಲ್ಲ ಸ್ನೇಹಿತರ ಬಳಗ ಹಾಗೂ ಆಡಳಿತ ವರ್ಗ ಹಗಲು ರಾತ್ರಿ ಎನ್ನದೆ ಶ್ರಮಿಸುತ್ತಿದೆ ಎಂದು ತಿಳಿಸಿದರು ಹಾಗೂ ಇದಕ್ಕೆ ಎಲ್ಲ ಸಹಕಾರವನ್ನು ಕೋರಿದರು.

ಸಂಘದ ನಿರ್ದೇಶಕರಾದ ಶ್ರೀ.ಪ್ರವೀಣ ಸ್ವಾಮಿ ರವರು ಮಾತನಾಡಿ, ಸಂಸ್ಥೆಯು ಶಿಸ್ತನ್ನು ಕಾಪಾಡಿ ಸಹಕಾರಿ ತತ್ವದನ್ವಯ ಸಂಘವನ್ನು ನಡೆಸಿಕೊಂಡು ಹೊಗಲಾಗುತ್ತಿದೆ ಅಲ್ಲದೆ ಮುಂದಿನ ದಿನಗಳಲ್ಲಿ ಬಡಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ನಿರ್ಗತಿಕರಿಗೆ ಕುಟಿರ ಸ್ಥಾಪಿಸುವ ಇನ್ನಿತರ ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಸಭೇಯಲ್ಲಿ ಉತ್ತಮ ಬಂಡವಾಳ ಹುಡಿಕೆದಾರರಿಗೆ ಹಾಗೂ ಉತ್ತಮ ಸಾಲಮರುಪಾವತಿದಾರರಿಗೆ ಸನ್ಮಾನಿಸಲಾಯಿತು ಹಾಗೂ ಪಟ್ನೆ ಮಲ್ಟಿಸ್ಪೇಷಲಿಟಿ ಆಸ್ಪತ್ರೆ, ಬೀದರ ಹಾಗೂ ಆದ್ಯ ಮೇಟರನೀಟಿ ಕೇರ್ ಹಾಗೂ ಬೀದರ ಹಿಯರಿಂಗ್ ಆಂಡ್ ಸ್ಪೀಚ್ ಥೇರಪಿ ಸೆಂಟರ ಬೀದರ ರವರು ಉಚಿತ ಆರೋಗ್ಯ ತಪಾಸಣೆಯನ್ನು ಕೈಗೊಂಡರು

ಸಭೆಯಲ್ಲಿ ಶ್ರೀ.ಕಲ್ಲಪ ಸೋಲಪೂರೆ ಉಪಾಧ್ಯಕ್ಷರು, ಧರಿನಾಡು ಸಂಸ್ಥೆ, ಬೀದರ ಡಾ.ರಾಹುಲ್ ಬೇಂದ್ರೆ, ಡಾ.ಹೆಮಂತ್, ಡಾ.ಭುವನೇಶ್ರೀ. ಶ್ರೀ.ರಾಜೇಂದ್ರ, ಶ್ರೀ.ವಿಜಯಕುಮಾರ ಬೆಲ್ದೆ, ಸಂಘದ ನಿರ್ದೇಶಕರಾದ ಶ್ರೀ. ಮಹಾದೇವ ಲಾಡೆ, ಶ್ರೀ.ನಾಗರಾಜ ಮಠ್, ಶ್ರೀ.ಗೌರಿಶಂಕರ ಘರತಾಪೂರ್ರೆ, ಶ್ರೀ.ಲೋಕೇಶ ಸಲಗಾರ, ಶ್ರೀ. ಅಮರನಾಥ ಬೀರಾದರ ಜಿಲ್ಲಾ ಪಂಚಾಯತ್ ಪರ ವಕೀಲರಾದ ಶ್ರೀ.ಮಲ್ಲಿಕಾರ್ಜುನ ಜಳಕೋಟೆ, ಶ್ರೀ.ಸತೀಶ ಧರಣೆ, ಶ್ರೀ.ಪ್ರಭುದೇವ ಹಳ್ಳಿಖೇಡಕರ್, ಶ್ರೀ.ಲಕ್ಷ್ಮೀಕಾಂತ, ಶ್ರೀ.ಬಸವರಾಜ, ಶ್ರೀಕಾಂತ ಸ್ವಾಮಿ ಹೊನ್ನಿಕೆರಿ, ರವರು ಸಂಘದ ಸದಸ್ಯರು ಹಾಗೂ ಇತರರು ಭಾಗವಹಿಸಿದರು.

# ಸಾಲಬಾದೆ,ಕೈಕೊಟ್ಟ ಮೆಕ್ಕೆ ಜೋಳ ಬೆಳೆ ರೈತ ಆತ್ಮಹತ್ಯೆ.

ಮಲ್ಲಮ್ಮ ನುಡಿ ವಾರ್ತೆ

ಕುಕನೂರು,ಜು,31–ಸಾಲಬಾದೆ ಮತ್ತು ಸಕಾಲಕ್ಕೆ ಮಳೆಯಾಗದೆ ಮೆಕ್ಕೆಜೋಳ ಬೆಳೆ ಕೈಕೊಟ್ಟಿದ್ದ–ರಿಂದ ಮನನೊಂದು ತಾಲೂಕಿನ ಅರಕೇರಿ ಗ್ರಾಮದ ರೈತ ದೇವಪ್ಪ ನೀರಳ್ಳಿ (51) ತನ್ನ ತೋಟದಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ಅರಕೇರಿ ಗ್ರಾಮದ ದೇವಪ್ಪ ನೀರಳ್ಳಿ ಎಂಬ ರೈತ ಹತ್ತಿರದ ಶಿರೂರು ಕೆನರಾ ಬ್ಯಾಂಕ್ ನಲ್ಲಿ 2.5 ಲಕ್ಷ ಮತ್ತು ಇತರ ಕಡೆ ಗುಂಪು ಸಾಲವಾಗಿ ಸುಮಾರು ಒಂದು ಲಕ್ಷ ಸಾಲ ಮಾಡಿಕೊಂಡಿದ್ದ ಎಂದು ಹೇಳಲಾಗಿದ್ದು, ಅಲ್ಲದೇ ತಾನು ಬೆಳೆದ ಮೆಕ್ಕೆಜೋಳ ಸರಿಯಾಗಿ ಮಳೆ ಆಗದೇ ಬೆಳೆ ಹಾನಿಯಾದ ಪರಿಣಾಮ ಮಾನಸಿಕವಾಗಿ ಕುಗ್ಗಿದ್ದ ಗುರುವಾರ ತೋಟದಲ್ಲಿ ಹೋಗಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತಂತೆ ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಈಗಲೂ ಮುದ್ರಣ ಮಾಧ್ಯಮದ ಮೇಲೆ ಜನರ ವಿಶ್ವಾಸ:ದೇವಯ್ಯ ಗುತ್ತೇದಾರ



ಮಲ್ಲಮ್ಮ ನುಡಿ ವಾರ್ತೆ

ಔರಾದ್ :ಜು.31: ಸಾಮಾಜಿಕ ಜಾಲತಾಣದ ವ್ಯಾಪಕ ಬಳಕೆಯ ನಡುವೆಯೂ ಮುದ್ರಣ ಮಾಧ್ಯಮದ ಮೇಲೆ ಈಗಲೂ ಜನ ವಿಶ್ವಾಸ ಉಳಿಸಿಕೊಂಡಿದ್ದಾರೆ ಎಂದು ಕಲಬುರಗಿ ಆವೃತಿಯ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ದೇವಯ್ಯ ಗುತ್ತೇದಾರ್ ಹೇಳಿದರು.

ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಗುರುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಔರಾದ ತಾಲೂಕದಿಂದ ಏರ್ಪಡಿಸಿದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಮುದ್ರಣ ಮಾಧ್ಯಮದಲ್ಲಿ ಬಂದ ವರದಿಗಳನ್ನು ಜನ ನಂಬುತ್ತಾರೆ. ಏಕೆಂದರೆ ಇಲ್ಲಿ ಬರುವ ವರದಿಗಳು ಜವಾಬ್ದಾರಿಯಿಂದ ಹಾಗೂ ವಾಸ್ತವಿಕತೆಯಿಂದ ಕೂಡಿರುತ್ತವೆ. ಸುಪ್ರೀಂ ಕೋರ್ಟ್ ಕೂಡಾ ಮುದ್ರಣ ಮಾಧ್ಯಮದ ಮೇಲೆ ವಿಶ್ವಾಸ ಇಟ್ಟಿಕೊಂಡಿರುವದಕ್ಕೆ ಅನೇಕ ಉದಾರಣೆಗಳಿವೆ ಎಂದು ವಿವರಿಸಿದರು. ಇಂದು ಪತ್ರಿಕೋದ್ಯಮದಲ್ಲಿ ಸಾಕಷ್ಟು ಅವಕಾಶಗಳಿವೆ. ಆದರೆ ಇದಕ್ಕಾಗಿ ಸಾಕಷ್ಟು ಜ್ಞಾನ ಬೇಕಾಗುತ್ತದೆ. ಪತ್ರಕರ್ತರು ಪ್ರಾಮಾಣಿಕವಾಗಿ ಕೆಲಸ ಮಾಡಿದರೇ ಸಮಾಜ ಅವರಿಗೆ ಗೌರವ ಕೊಡುತ್ತದೆ ಎಂದರು.

ಎರಡು ದಶಕದ ಹಿಂದೆ ಮುದ್ರಣ ಮಾಧ್ಯಮಕ್ಕೆ ಅವಕಾಶವಿಲ್ಲ ಎಂಬ ಭಾವನೆ ಮೂಡಿತ್ತು. ಆದರೆ ಸಾಮಾಜಿಕ ಜಾಲತಾಣದ ರಬಸದ ನಡುವೆಯೂ ಮುದ್ರಣ ಮಾಧ್ಯಮ ತನ್ನ ಅಸ್ಥಿತ್ವ ಉಳಿಸಿಕೊಂಡಿದ್ದು, 2000ರಲ್ಲಿ ಒಟ್ಟು ಕನ್ನಡ ಪತ್ರಿಕೆಗಳ ಪ್ರಸಾರ 4 ಲಕ್ಷ ಇದದ್ದು, ಇಂದು 44 ಲಕ್ಷ ಆಗಿರುವುದು ಮುದ್ರಣ ಮಾಧ್ಯಮದವರು ಹೆಮ್ಮೆ ಪಡುವ ಸಂಗತಿಯಾಗಿದೆ ಎಂದರು.

ಸಾನಿಧ್ಯವಹಿಸಿದ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಈ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಪತ್ರಕರ್ತ ದೇವಯ್ಯ ಗುತ್ತೇದಾರ್ ಅವರ ಪಾತ್ರ ಅಪಾರವಾಗಿದೆ. ಈ ಭಾಗದ ಅನೇಕ ಜ್ವಲಂತ ಸಮಸ್ಯೆಗಳು ಸರಕಾರದ ಗಮನಕ್ಕೆ ತಂದು ಧ್ವನಿ ಇಲ್ಲದವರಿಗೆ ಆಶ್ರಯವಾಗಿ ನಿಂತಿದ್ದಾರೆ. ಪತ್ರಿಕಾ ದಿನಾಚರಣೆಯಲ್ಲಿ ಅವರಿಗೆ ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ (75ನೇ ಜನ್ಮದಿನ) ಅಂಗವಾಗಿ 'ಕನ್ನಡ ಜಂಗಮ' ಪ್ರಶಸ್ತಿ ಪ್ರದಾನ ಮಾಡಿರುವುದು ಅತ್ಯಂತ ಪ್ರಸ್ತುತ ಎಂದರು. ಈ ಭಾಗದಲ್ಲಿ ಕನ್ನಡ ಹಾಗೂ ಕನ್ನಡ ಪತ್ರಿಕೆ ಉಳಿಯಲು ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರು ಹಾಗೂ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರ ಕೊಡುವೆ ಅಪಾರವಾಗಿದೆ. ಹಿರೇಮಠ ಸಂಸ್ಥಾನ ಇಷ್ಟೊಂದು ಹೆಮ್ಮರವಾಗಿ ಬೆಳೆಯಲು ಡಾ. ಬಸವಲಿಂಗ ಪಟ್ಟದ್ದೇವರ ಶ್ರಮ ಈ ಭಾಗದ ಭಕ್ತರಿಗೆ ಚನ್ನಾಗಿ ಗೊತ್ತಿದೆ ಎಂದರು.

ಮಾಜಿ ಎಂಎಲ್ಸಿ ವಿಜಯಸಿಂಗ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಔರಾದ್ ತಾಲೂಕಿನ ಜನ ಬಹಳ ಮುಗ್ಧವಾಗಿದ್ದಾರೆ. ನನ್ನ ರಾಜಕೀಯ ಜೀವನ ಇಲ್ಲಿಂದಲ್ಲೇ ಆರಂಭವಾಗಿದ್ದು, ನಾನು ವಿಧಾನ ಪರಿಷತ್ ಸದಸ್ಯನಾಗಲು ಇಲ್ಲಿನ ಜನರ ಕೊಡುಗೆ ಮರೆಯುವಂತಿಲ್ಲ. ಇಲ್ಲಿ ನಡೆದ ಪತ್ರಿಕಾ ದಿನಾಚರಣೆಯಲ್ಲಿ ನಾನು ಪಾಲ್ಗೊಂಡಿರುವುದು ಸಂತಸವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪತ್ರಕರ್ತ ಸಂಘದ ಜಿಲ್ಲಾಧ್ಯಕ್ಷ ಡಿಕೆ ಗಣಪತಿ, ತಹಸೀಲ್ದಾರ ಮಹೇಶ ಪಾಟೀಲ್,

ಸಂಘದ ಉಪಾಧ್ಯಕ್ಷ ನಾಗಶೇಟ್ಟಿ ಧರಂಪೂರೆ ಮಾತನಾಡಿದರು. ತಾಲೂಕು ಅಧ್ಯಕ್ಷ ಶಿವಾನಂದ ಮೊಕ್ತೇದಾರ್ ಪ್ರಾಸ್ತವಿಕ ಮಾತನಾಡಿದರು. ಪಪಂ ಅಧ್ಯಕ್ಷೆ ಸರುಬಾಯಿ ಘೂಳೆ, ತಾಪಂ ಇಒ ಶಿವಕುಮಾರ ಘಾಟೆ, ಜಿಲ್ಲಾ ಕಾರ್ಯದರ್ಶಿ ಪೃಥ್ವಿರಾಜ್ ಎಸ್, ಹಿರಿಯ ಪತ್ರಕರ್ತ ವಿಜಯಕುಮಾರ ಬೆಲ್ದೆ, ತಾಲೂಕು ಪ್ರಧಾನ ಕಾರ್ಯದರ್ಶಿ ಸುನಿಲ ಜಿರೋಬೆ, ಪತ್ರಕರ್ತರಾದ ಚನ್ನಬಸವ ಮೊಕ್ತೆದಾರ್, ಅನಿಲ ದೇಶಮುಖ,

ಅಮರೇಶ್ವರ ಚಿದ್ರೆ, ಸುಧೀರ್ ಪಾಂಡ್ರೆ, ಅಹ್ಮದ್ ಜಂಬಗಿ, ರವಿಕುಮಾರ ಮಠಪತಿ, ರಾಚಯ್ಯ ಸ್ವಾಮಿ, ಸೂರ್ಯಕಾಂತ ಎಕಲಾರ, ಶಿವಕುಮಾರ ಸಾದುರೆ, ರವಿಕುಮಾರ ಶಿಂಧೆ, ವಿನೋದ ಚಿದ್ರೆ, ಪ್ರಭುಲಿಂಗ ಸ್ವಾಮಿ, ರಾಜಕುಮಾರ ಚಾಂಬೋಳೆ ಸೇರಿದಂತೆ ಅನೇಕರಿದ್ದರು.

ಪತ್ರಕರ್ತ ಮನ್ಮಥಪ್ಪ ಸ್ವಾಮಿ ಸ್ವಾಗತಿಸಿದರು. ರಿಯಾಜ್‌ಪಾಶ ಕೊಳ್ಳುರ್, ಅಮರ ಸ್ವಾಮಿ ನಿರೂಪಿಸಿದರು. ಮಲ್ಲಪ್ಪ ಗೌಡಾ ವಂದಿಸಿದರು.

# ಜನ್ಮ ದಿನದಂದೇ ವಿದ್ಯಾರ್ಥಿನಿ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜು.31: ತನ್ನ ಜನುಮ ದಿನದಂದೇ ನೇಣು ಹಾಕಿಕೊಂಡು ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿ ಬಳಿ ಇರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಸತಿ ನಿಲಯದಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಮೃತಳನ್ನು ಓಡಿಸ್ಸಾ ಮೂಲದ ಹಾಗೂ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಜಯಶ್ರೀ ನಾಯಕ್ (20) ಎಂದು ಗುರುತಿಸಲಾಗಿದೆ.,



ಕಳೆದ ಮಂಗಳವಾರ ವಿದ್ಯಾರ್ಥಿಗಳ ಕಲ್ಯಾಣಾಧಿಕಾರಿ ಬಸವರಾಜ್ ಕುಬಕಡ್ಡಿ ಅವರೊಂದಿಗೆ ಮಾತನಾಡಿದ ಬಳಿಕ ವಿದ್ಯಾರ್ಥಿನಿಯು ಕಣ್ಣೀರು ಹಾಕಿದ್ದಳು. ಬುಧವಾರ ತರಗತಿಗೆ ಬರಲಿಲ್ಲ. ಮಧ್ಯಾಹ್ನ ಊಟಕ್ಕೆ ಬಂದಾಗ ಕೋಣೆಗೆ ಬೀಗ ಹಾಕಿಕೊಂಡು ಎ1 ಫ್ಯಾನಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

ತಕ್ಷಣ ಕಾರ್ಪೆಂಟರ್ ಮೂಲಕ ವಸತಿ ನಿಲಯದ ಕೋಣೆಯ ಬಾಗಿಲು ಮುರಿಸಲಾಗಿದೆ

ಎಂದು ತಿಳಿದುಬಂದಿದೆ. ಸುದ್ದಿ ತಿಳಿದು ನರೋಣಾ ಠಾಣೆಯ ಪೋಲಿಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಯಾವುದೇ ಮರಣಪತ್ರ ದೊರಕಿಲ್ಲ ಎಂದು ಹೇಳಲಾಗಿದ್ದು, ಈ ಕುರಿತು ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

# ರಸಗೊಬ್ಬರ ಕೊರತೆ: ಕೃಷಿ ಸಚಿವರ ರಾಜೀನಾಮೆಗೆ ನಡಹಳ್ಳಿ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜು.31: ರಸಗೊಬ್ಬರ ಕೊರತೆ ಹಿನ್ನೆಲೆಯಲ್ಲಿ ಕೂಡಲೇ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ ನಡಹಳ್ಳಿ ಅವರು ಆಗ್ರಹಿಸಿದರು. ಜಿಲ್ಲಾಧಿಕಾರಿಗಳ ಕಚೇರಿಗೆ ಗುರುವಾರ ಮುತ್ತಿಗೆ ಹಾಕಿ ಪ್ರತಿಭಟನೆಕಾರರನ್ನುದ್ದೇಶಿಸಿ ಮಾತನಾಡಿದ ಅವರು, ರೈತರು ರಸಗೊಬ್ಬರ ಸಿಗದೇ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರೊಂದಿಗೆ ಸಭೆ ಮಾಡಬೇಕಾದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಸಚಿವರು ಮತ್ತು ಶಾಸಕರೊಂದಿಗೆ ಸಭೆಯ ನಂತರ ಸಭೆಯನ್ನು ಮಾಡುತ್ತಿದ್ದಾರೆ ಎಂದು ದೂರಿದರು. ಸಹಾಯಧನ ಸಹಿತ, ರಹಿತವಾದ ಯಾವುದೇ ಗೊಬ್ಬರ ವಿತರಣೆ ಮಾಡುವ ಸಂದರ್ಭದಲ್ಲಿ ಸಹಾಯಧನ ರಹಿತವಾಗಿ ಯಾವುದೇ ಕ್ರಿಮಿನಾಶಕ ಖರೀದಿಸುವಂತೆ ಒತ್ತಾಯ ಮಾಡುವುದು ಅಪರಾಧ. ಆದಾಗ್ಯೂ, ಪ್ರತಿ ಸೊಸೈಟಿಯಲ್ಲಿ 268 ರೂ.ಗಳ ದರದ ಒಂದು ಚೀಲ ಯೂರಿಯಾ ಗೊಬ್ಬರ ಖರೀದಿ ಮಾಡಬೇಕಾದರೆ 500ರೂ.ಗಳ ಮೊತ್ತದ ಇತರ ವಸ್ತುಗಳನ್ನು ಖರೀದಿ ಮಾಡುವಂತೆ ಒತ್ತಡ ಹಾಕಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.




ಉತ್ತರ ಕರ್ನಾಟಕ ಭಾಗದಲ್ಲಿ ಪ್ರತಿ ವರ್ಷ ಶೇಕಡಾ 50ರಷ್ಟು ಕೊರತೆ–ಯಾಗುತ್ತಿತ್ತು. ಈ ವರ್ಷ ಉತ್ತಮ ಮಳೆಯಾಗಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಇಟ್ಟಿದದಾರೆ. ಹೀಗಾಗಿ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ರಾಜ್ಯಕ್ಕೆ ಬೇಕಾಗುವ ರಸಗೊಬ್ಬರ ಪ್ರಮಾಣದ ಕುರಿತು ಮುಖ್ಯಮಂತ್ರಿಗಳಿಗೆ ಹಾಗೂ ಕೃಷಿ ಸಚಿವರಿಗೆ ಗೊತ್ತಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಂಕಿ, ಅಂಶಗಳನ್ನು ನೀಡುತ್ತಿದ್ದಾರೆ ಎಂದು ಅವರು ದೂರಿದರು. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಪ್ರತಿಯೊಂದಕ್ಕೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುತ್ತಾರೆ. ಜಿಲ್ಲೆಯಲ್ಲಿ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗುತ್ತದೆ. ಸುಮಾರು ಹತ್ತು ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗಿದ್ದು, ಈ ಕುರಿತು ಉತ್ತರ ನೀಡಬೇಕು ಎಂದು ಅವರು ಒತ್ತಾಯಿಸಿದರು. ಜಿಲ್ಲೆಯಲ್ಲಿ ರಸಗೊಬ್ಬರ ಮಾರಾಟ ಅಂಗಡಿಗಳಲ್ಲಿ ದರ ಪಟ್ಟಿಯನ್ನೂ ಸಹ ಹಾಕುತ್ತಿಲ್ಲ. ದಾಸ್ತಾನು ಇರುವ ಕುರಿತು ಮಾಹಿತಿ ಸಹ ನೀಡುತ್ತಿಲ್ಲ ಎಂದು ಹೇಳಿದ ಅವರು, ಮಳೆ ಬಂದಾಗ ಮೇಲುಗೊಬ್ಬರವಾಗಿ ಯೂರಿಯಾ ಹಾಕುತ್ತಾರೆ. ಮಳೆ ಇಲ್ಲದಿದ್ದರೆ ಯೂರಿಯಾ ಹಾಕಿದರೆ ಬೆಳೆ ನಾಶವಾಗುತ್ತದೆ. ಕಾಳಸಂತೆಯಲ್ಲಿ ಗೊಬ್ಬರ ಮಾರಾಟ ಮಾಡುವ ಪ್ರಕರಣದಲ್ಲಿ ಶಾಮೀಲಾಗುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮಾಜಿ ಸಂಸದ ಡಾ. ಉಮೇಶ್ ಜಾಧವ್, ಶಾಸಕ ಬಸವರಾಜ್ ಮತ್ತಿಮೂಡ್, ಮಾಜಿ ಶಾಸಕ ದತ್ತಾತ್ರೇಯ್ ಪಾಟೀಲ್ ರೇವೂರ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ನಿತಿನ್ ಗುತ್ತೇದಾರ್ ಮುಂತಾದವರು ಮಾತನಾಡಿದರು.

# ಜಿಲ್ಲಾ ಆಸ್ಪತ್ರೆಗೆ ಭೇಟಿ :ಕುಂದು ಕೊರತೆ ಆಲಿಸಿದ ಡಾ. ನಾಗಲಕ್ಷ್ಮೀ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜು.31:ಕಲಬುರಗಿ ಜಿಲ್ಲಾ ಆಸ್ಪತ್ರೆ ಭೇಟಿ ನೀಡಿ ಕುಂದು ಕೊರತೆ ಪರಿಶೀಲಿಸಿ ನಂತರ ಸಾರ್ವಜನಿಕರನ್ನು ಮಾತನಾಡಿಸಿ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲಿದ್ದ ವೈದ್ಯಾಧಿಕಾರಿಗಳಿಗೆ ಸಾರ್ವಜನಿಕರ ಸಮಸ್ಯೆಗಳಿಗೆ ತುರ್ತಾಗಿ ಸ್ಪಂಧಿಸಲು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಅವರು ಸೂಚನೆ ನೀಡಿದರು. ಅವರು ಗುರುವಾರದಂದು ಜಿಮ್ಸ್ ಆಸ್ಪತ್ರೆಯಲ್ಲಿನ ಪ್ರತಿಯೊಂದು ವಾರ್ಡಗಳಿಗೆ ಭೇಟಿ ಅಲ್ಲಿನ ರೋಗಿಗಳ ಸಮಸ್ಯೆಗಳನ್ನು ಆಲಿಸಿದ ಅವರು ಆಸ್ಪತ್ರೆಯಲ್ಲಿ ನಡೆಯುತ್ತಿರುವ ಕಾಮಗಾರಿ ಪರಿಶೀಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿಯೊಂದು ವಾರ್ಡಗಳಿಗೆ ಸ್ವಚ್ಛ ಕುಡಿಯುವ ನೀರು, ಗಾಳಿ, ಬೆಳಕು ಮತ್ತು ಶೌಚಾಲಯಗಳನ್ನು ಇರುವುದು ಕಡ್ಡಾಯವಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ ಎಂದರು. ಆಸ್ಪತ್ರೆಯಲ್ಲಿ ಪ್ರಸೂತಿ ವಾರ್ಡಗಳಲ್ಲಿ ಮಹಿಳೆಯರಿಗೆ ಬಿಸಿ ನೀರು ಹಾಗೂ ತಣ್ಣೀರು ಎರಡು ವಾರ್ಡಗಳಲ್ಲಿ ಪೂರೈಸಲು ಅಗತ್ಯ



ಕ್ರಮ ಕೈಗೊಳ್ಳುವಂತೆ ಜಿಮ್ಸ್ ನಿರ್ದೇಶಕ ಉಮೇಶ ರೆಡ್ಡಿ ಅವರಿಗೆ ಸೂಚನೆ ನೀಡಲಾಗಿದೆ. ನಾನು ಮೊದಲ ಭಾರಿಗೆ ಈ ಆಸ್ಪತ್ರಗೆ ಭೇಟಿ ನೀಡಿದ್ದಾಗ ಕುಡಿಯುವ ನೀರಿನ ಸಮಸ್ಯೆಯನ್ನು ಗಮನಿಸಿ ಶೀಘ್ರದಲ್ಲಿ ಸಮಸ್ಯೆ ಬಗೆಹರಿಸಲು ಸೂಚಿಸಲಾಗಿತ್ತು. ರೋಗಿಗಳಿಗೆ ನೀರು ಹೆಚ್ಚಿನ ಅವಶ್ಯಕತೆ ಇದ್ದು, ಅವರಿಗೆ ಕುಡಿಯಲು ನೀರು ಸರಬರಾಜು ಮಾಡಿದ್ದಾರೆ ಆದರೂ ಸಹ ಕೆಲವು ರೋಗಿಗಳು ನೀರು ತಾವೆ ತೆಗೆದು–ಕೊಂಡು ಬಂದಿದ್ದಾರೆ. ಕುಡಿಯುವ ನೀರಿನ ಬಗ್ಗೆ ಅಧಿಕಾರಿಗಳು ಗಮನ ಹರಿಸಿರುವ ಸುಧಾರಣೆ ಕಂಡು ಬಂದಿದೆ ಎಂದು ತಿಳಿಸಿದರು. ಸರ್ಕಾರದಿಂದ ಹಣ ಖರ್ಚು ಮಾಡಿ ಆರ್.ಓ. ಪ್ಲ್ಯಾಂಟ್ ಹಾಕಿದ್ದಾರೆ ಅದನ್ನು ಸರಿಯಾಗಿ ಉಪಯೋಗಿಸಲು ಈಗಾಗಲೇ ಅಧಿಕಾರಿಗಳಿಗೆ ತಾಖಿ–ತು ಮಾಡಿದ್ದೇನೆ ಎಂದರು. ಇದೇ ಸಂದರ್ಭದಲ್ಲಿ ಸ್ಥಳದಲ್ಲಿದ್ದ ರೋಗಿಗಳ ಆರೋಗ್ಯವನ್ನು ವಿಚಾರಿಸಿದ ಅವರು ಆಸ್ಪತ್ರೆಯಲ್ಲಿ ಪ್ರತಿ ದಿನ ಸ್ವಚ್ಛತೆ ಕಾಪಾಡಿಕೊಂಡು ಹೋಗಬೇಕು. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಬಡ ಜನರು ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ, ಅವರಿಗೆ ಉತ್ತಮ ಸೇವೆಯನ್ನು ಒದಗಿಸುವುದು ನಮ್ಮೆಲ್ಲರ ಕರ್ತವ್ಯ, ಅದೇ ರೀತಿಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲ ಕಡೆ ಸಿಸಿಟಿವಿ ಕ್ಯಾಮರ್ ಅಳವಡಿಸಲು ಸೂಚನೆ ನೀಡಿದ್ದೇನೆ. ರೋಗಿಗಳಿಗೆ ಒಳ್ಳೆಯ ಆಹಾರ ನೀಡಲು, ಮಾತ್ರೆಗಳನ್ನು ಸರಿಯಾದ ಸಮಯಕ್ಕೆ ವಿತರಿಸಲು ಪ್ರತಿ ದಿನ ಅವರ ಆರೋಗ್ಯದ ಕಾಳಜಿ ವಹಿಸಲು ಸಂಬಂಧಪಟ್ಟ ವೈದ್ಯಾಧಿಕಾರಿಗಳೊಂದಿಗೆ ಈಗಾಗಲೇ ಚರ್ಚಿಸಿದ್ದೇನೆ ಎಂದರು. ಇದೇ ಸಂದರ್ಭದಲ್ಲಿ ಒಳರೋಗಿಯಾಗಿ ದಾಖಲಾಗಿರುವ ಲಕ್ಷ್ಮೀ ಗಂಡ ಹಣಮಂತ ತಾಯಿ ಮಗು ಆರೋಗ್ಯದ ಬಗ್ಗ ವಿಚಾರಿಸಿ ಮಾತನಾಡಿ, ಮಾತೃವಂದನ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಬಗ್ಗೆ ಪ್ರಶ್ನಿಸಿದರು. ಲಕ್ಷ್ಮೀ ಅವರು ಪ್ರತಿಕ್ರಿಯಿಸಿ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ. ಅದರ ಬಗ್ಗೆ ಮಾಹಿತಿ ಇನ್ನೂ ಬಂದಿಲ್ಲ ಎಂದು ಅವರು ಹೇಳಿದರು. ಅಧ್ಯಕ್ಷರು ತಕ್ಷಣವೇ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ಮಾತನಾಡಿ ಅವರಿಗೆ ಮಾಹಿತಿ ತಿಳಿಸಬೇಕು ಎಂದರು. ಈ ಸಮಯದಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಖ್ಯಾತನಾಳ, ಜಿಲ್ಲಾ ಸರ್ಜನ್ ರೂಕ್ಕಿಯ್ಯ ಆಸನ್ ರಬ್ಬಾ , ಮಕ್ಕಳ ತಜ್ಞೆ ರೇವಣ್ಣ ಸಿದ್ದಪ್ಪ ಬೋಸ್ಗಾ, ಡಾ. ಶಾಲಿನ ವೈದ್ಯಾಧಿಕಾರಿಗಳು ಶೂಶ್ರೂಷಕರು ಇದ್ದರು.

# ಬಂಡವಾಳ ಶಾಹಿ ಹಿಡಿತಕ್ಕೆ ಪತ್ರಿಕಾರಂಗ : ಪೂಜಾರ ಕಳವಳ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜು.31–ಪತ್ರಿಕಾ ಮಾಧ್ಯಮ ಇಂದು ವ್ಯಾಪಾರೀಕರಣವಾಗಿ ಬಂಡವಾಳ ಶಾಹಿಗಳ ಕಪಿಮುಷ್ಠಿಯಲ್ಲಿ ಸಿಲುಕಿರುವುದು ಕಳವಳಕಾರಿ ಸಂಗತಿ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಹೇಳಿದರು. ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಗುರುವಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಜರುಗಿದ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ, ಹಿರಿಯ ಪತ್ರಕರ್ತರಿಗೆ ಸನ್ಮಾನ, ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ದಿನಮಾನಗಳಲ್ಲಿ ಪ್ರಕಟವಾಗುವ ಸುದ್ದಿಗಳ ಬಗ್ಗೆ ಪರಾಮರ್ಶೆ ಮಾಡಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗುತ್ತಿದೆ ಎಂದರು.

ಪತ್ರಿಕಾರಂಗ ದೃಶ್ಯ ಮಾಧ್ಯಮ ಬಂದ ನಂತರ ಬದಲಾವಣೆಗಳನ್ನು ಕಂಡಿದೆ. ಪ್ರಸ್ತುತ ಡಿಜಿಟಲ್ ಯುಗದಿಂದ ಪ್ರತಿಕ್ಷಣ ಅಂಗೈಯಲ್ಲಿ ಸುದ್ದಿ ಪ್ರಸಾರ ಆಗುತ್ತಿದೆ. ವಿಪರ್ಯಾಸವೆಂದರೆ ಪತ್ರಿಕೆಗಳು ಇಂದು ಡಿಜಿಟಲ್ ಯುಗದಲ್ಲಿ ಸಂಕಷ್ಟಕ್ಕೆ ಸಿಲುಕಿವೆ. ಅದರಲ್ಲೂ ಮಾಧ್ಯಮ ಕ್ಷೇತ್ರ ವ್ಯಾಪಾರ ವ್ಯವಸ್ಥೆಯಡಿ ಬಂಡವಾಳಶಾಹಿ ಹಿಡಿತಕ್ಕೆ ಸಿಲುಕಿ ಗೌನವಾಗಿದೆ. ಸರ್ಕಾರ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್, ಆರೋಗ್ಯ ಸಂಜೀವಿನಿ ಯೋಜನೆ ಜಾರಿಯಾಗಬೇಕು. ನಿವೃತ್ತ ಪತ್ರಕರ್ತರಿಗೆ ಪಿಂಚಣಿಯ ಕಠಿಣ ನಿಯಮಾವಳಿ ಸರಳೀಕರಣವಾಗಬೇಕಿದೆ ಎಂದರು. ಪ್ರಶಸ್ತಿ ಪ್ರದಾನ ಮಾಡಿದ ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ವೇಗವಾಗಿರುವ ಸೋಶಿಯಲ್ ಮೀಡಿಯಾದಿಂದ ಪತ್ರಿಕಾರಂಗದಲ್ಲಿ ಬದಲಾವಣೆ ಆಗಿದೆ. ವೇಗದ ಭರಾಟೆಯಲ್ಲಿ ಸುದ್ದಿಯ ಸತ್ಯಾಸತ್ಯತೆ ಮರೆಮಾಚುವ ಕೆಲಸ ಆಗಬಾರದು. ಸತ್ಯ,ನ್ಯಾಯದ ಅಡಿಯಲ್ಲಿ ಮಾಹಿತಿ ಜನರಿಗೆ ತಲುಪಿಸುವ ಕಾರ್ಯ ಮಾಡಬೇಕು ಎಂದರು. ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿಯುವಲ್ಲಿ ಪತ್ರಿಕಾರಂಗದ ಕಾರ್ಯ ಅಗಾಧವಾಗಿದ್ದು, ಪತ್ರಕರ್ತರು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಅರಿವು ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ. ಧ್ವನಿ ಇಲ್ಲದವರಿಗೆ ಪತ್ರಕರ್ತರು ಧ್ವನಿಯಾಗಿರುವುದು ಪ್ರಶಂಸನೀಯವಾದುದು. ಇಂದಿನ ಡಿಜಿಟಲ್ ಯುಗದಲ್ಲಿ ಸುಳ್ಳು ಸುದ್ದಿಗಳು ಬಿತ್ತರ ಆಗುತ್ತಿವೆ. ಆ ನಿಟ್ಟಿನಲ್ಲಿ ಸತ್ಯಾಸತ್ಯತೆ ಪರಿಶೀಲಿಸಿ, ವರದಿ ಮಾಡಲು ಸಲಹೆ ನೀಡಿದರು.

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ, ಅವಸರದ ಸುದ್ದಿ ಪ್ರಸಾರ ಮಾಡದೇ ಪತ್ರಕರ್ತರು ಸರಿಯಾದ ಮಾಹಿತಿಯನ್ನು ಬಿತ್ತರಿಸಬೇಕು. ಜಿಲ್ಲೆಯ ಪತ್ರಕರ್ತರು ಮಾಹಿತಿ ಪಡೆದು ಸುದ್ದಿ ಪ್ರಸಾರದ ಕಾರ್ಯ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಪೊಲೀಸರ ಜನಜಾಗೃತಿ ಕಾರ್ಯಕ್ಕೆ ಪತ್ರಕರ್ತರ ಸಹಕಾರ ಸ್ಮರಣೀಯ ಎಂದರು. ಹಿರಿಯ ಪತ್ರಕರ್ತರನ್ನು ಸನ್ಮಾನಿಸಿದ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಸಂವಿಧಾನದ ನಾಲ್ಕನೇ ಅಂಗ ಪತ್ರಿಕಾರಂಗ ಹಿಂದಿನಿಂದಲೂ ಗ್ರಾಮೀಣ ಭಾಗದ ಜ್ವಲಂತ ಸಮಸ್ಯೆಗಳ ತಾರ್ಕಿಕ ಅಂತ್ಯಕ್ಕೆ ಪರಿಹಾರ ದೊರಕಲು ಸಹಕಾರಿಯಾಗಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ಮಾಧ್ಯಮ ಮಾನ್ಯತಾ ಸಮಿತಿ ಸದಸ್ಯ ಗಣಪತಿ ಗಂಗೂಳಿ ಹಾಗೂ ಅಧ್ಯಕ್ಷತೆ ವಹಿಸಿದ್ದ ಕಾನಿಪ ಜಿಲ್ಲಾ ಅಧ್ಯಕ್ಷ ಆನಂದ ದಲಭಂಜನ ಮಾತನಾಡಿದರು.

ಜಿಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಕಾನಿಪ ರಾಜ್ಯ ಕಾರ್ಯಕಾರಣಿ ಸದಸ್ಯ ಮಹೇಶ ಅಂಗಡಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎಸ್.ಎಸ್.ಎಲ್.ಸಿ ಹಾಗೂ ಪಿ.ಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ನೀಡಲಾಯಿತಲ್ಲದೇ, ಮಲ್ಲಿಕಾರ್ಜುನ ರಾಜನಾಳ ಅವರಿಗೆ ಹಿರಿಯ ಪತ್ರಕರ್ತ ಪ್ರಶಸ್ತಿ, ಪ್ರಕಾಶ ಗುಳೇದಗುಡ್ಡ ಅವರಿಗೆ ಗ್ರಾಮೀಣ ಪತ್ರಕರ್ತ ಪ್ರಶಸ್ತಿ, ರವಿರಾಜ ಗಲಗಲಿ ಅವರಿಗೆ ಉತ್ತಮ ವರದಿಗಾರ ಪತ್ರಕರ್ತ ಪ್ರಶಸ್ತಿ ಹಾಗೂ ಎಂ.ಎಚ್.ನದಾಫ ಅವರಿಗೆ ಸಮಾಜವೀರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪತ್ರಿಕಾ ವಿತರಕರಾದ ಶ್ರೀಶೈಲ ಬುಗಡಿ, ವೆಂಕಟೇಶ ಮುದಾಪೂರ ಅವರನ್ನು ಸನ್ಮಾನಿಸಲಾಯಿತು. ಕಲಾವಿದೆ ಪವಿತ್ರಾ ಜಕ್ಕಪ್ಪನವರ ತಂಡ ನಾಡಗೀತೆ ಹಾಡಿದರು. ಜಗದೀಶ ಗಾಣಿಗೇರ ಸ್ವಾಗತಿಸಿದರು. ಪ್ರಕಾಶ ಬಾಳಕ್ಕನವರ ನಿರೂಪಿಸಿದರು. ಮಂಜು ತಳವಾರ ನಿರೂಪಿಸಿದರು.


ನೋಂದಣಿ ಸಂಖ್ಯೆ : ಸಂನಿರಾ/ವಿ–1/ಸೌಕಾ/ನೊ–2531/2012–13

**ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ**

# 8–11–83, "ಶ್ರೀ ಸಾಯಿ ಕೃಪಾ", ಸಾಯಿ ಪುಷ್ಪಾಂಜಲಿ ಕಲ್ಯಾಣ ಮಂಟಪ ಹತ್ತಿರ, ಬೀದರ – 585 401. ಮೊಬೈಲ್ : 9738638276.

**14ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್**

ಸ್ಥಳ: ಸಹಾರ್ದ ತರಬೇತಿ ಕೇಂದ್ರ ನೌಬಾದ, ಬೀದರ. ದಿನಾಂಕ: 16–08–2025

ಇವರಿಗೆ,

ಸಹಕಾರಿಯ ಹೆಸರು______________________

ಆತ್ಮೀಯ ಸಹಕಾರಿಯ ಸದಸ್ಯ ಬಂಧುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ 14ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 16–08–2025 ರಂದು ಶನಿವಾರ ಬೆಳಿಗ್ಗೆ 11–30 ನಿಮಿಷಕ್ಕೆ ಬೀದರ ನಗರದ ಸಹಾರ್ದ ತರಬೇತಿ ಕೇಂದ್ರ ನೌಬಾದ, ಬೀದರನಲ್ಲಿ ಕರೆಯಲಾಗಿದೆ. ಕಾರಣ ತಾವು ತಪ್ಪದೆ ವಾರ್ಷಿಕ ಸಮಾನ್ಯ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕೊರಿದೆ.

ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಬೇಕಾದ ವಿಷಯಗಳು :

1) 14ನೇ ಸಾಮಾನ್ಯ ಸಭೆಯ ನೋಟಿಸ ಓದಿ ದಾಖಲಿಸಿವುದು.
2) 13ನೇ ಸಾಮಾನ್ಯ ಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಓದಿ ಅಂಗಿಕರಿಸುವುದು.
3) 2024–25ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ಓದಿ ದಾಖಲಿಸುವುದು.
4) 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿ ಅನುಮೊದನೆ ಪಡೆಯುವುದು.
5) 2025–26ನೇ ಸಾಲಿನ ಕ್ರೀಯಾ ಯೋಜನೆ ಅನುಮೋದನೆ.
6) 2024–25ನೇ ಸಾಲಿನ ಸದಸ್ಯತ್ವ ಪಡೆದ ಸಹಕಾರಿಗಳ ಪಟ್ಟಿಯ ಅನುಮೋದನೆ.
7) 2025–26ನೇ ಸಾಲಿನ ಅಂದಾಜು ಆಯ್ಯ–ವ್ಯಯ ಮಂಜುರು ಮಾಡುವ ಕುರಿತು.
8) 2025–26ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕಾತಿ ಕುರಿತು.
9) ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನ.
10) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ಅಧ್ಯಕ್ಷರ ಆದೇಶದ ಮೇರೆಗೆ

ದಿನಾಂಕ : 31–07–2025
ಸ್ಥಳ : ಬೀದರ

ಸಹಿ/–

**ಅಮೃತ ಹೊಸಮನಿ**
ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು

ವಿಶೇಷ ಸೂಚನೆ :

1) ಸಾಮಾನ್ಯ ಸಭೆಯಲ್ಲಿ ಯಾವುದೇ ವಿಷಯ ಚರ್ಚಿಸಲು ಅಪೇಕ್ಷಿಸುವ ಸಹಕಾರಿ ಸದಸ್ಯರು ದಿನಾಂಕ : 09–08–2026ರ ಒಳಗಾಗಿ ಲಿಖಿತ ರೂಪದಲ್ಲಿ ಸಹಕಾರಿಗೆ ತಲುಪಿಸತಕ್ಕದ್ದು.
2) ಸಾಮಾನ್ಯ ಸಭೆಗೆ ಭಾಗವಹಿಸುವ ಪ್ರತಿನಿಧಿಗಳು ತಮ್ಮ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಿಂದ ದೃಢೀಕೃತ ಪತ್ರದೊಂದಿಗೆ ಭಾಗವಹಿಸುವುದು.


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.